ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 14
ಸಂಚಿಕೆ 3
ಜುಲೈ-ಸೆಪ್ಟೆಂಬರ್-1985

ಸಾಧನೆ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 14. No. 3, July–September 1985

ವಾರ್ಷಿಕ ಚಂದಾ : ರೂ 8–00
ರೂ. 5–00 (ವಿದ್ಯಾರ್ಥಿಗಳಿಗೆ)

ಆಜೀವ ಸದಸ್ಯತ್ವ : ರೂ 100–00

ಪ್ರಕಾಶಕರು : ಡಾ॥ ಕೆ. ಮರುಳಸಿದ್ದಪ್ಪ
ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಮುದ್ರಣ : ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560 056

ಪರಿವಿಡಿ

ವರ್ಷಕ್ಕೊಮ್ಮೆ

ಜಿ. ಎಸ್. ಶಿವರುದ್ರಪ್ಪ

ಎಲ್ಲೋ ಯಾರೋ ಒತ್ತಿದರು ಸ್ವಿಚ್ಚು :
ಇಲ್ಲಿ ಈ ಬೋಳು ಬಯಲಲ್ಲಿ
ಹಠಾತ್ತನೆ ಮರಮರದ ಮೈಯ್ಯಲ್ಲಿ
ಹಳದಿ ಹೂವಿನ ಹುಚ್ಚು,
ಅಥವಾ ಉರಿದಂತೆ ಬಣ್ಣದ ಕಿಚ್ಚು
ಮಟ ಮಟ ಮಧ್ಯಾಹ್ನದಲ್ಲಿ.

ತಂಪಾಗಿ ಉರಿವ ಈ ಬೆಂಕಿಯ ಕೆಳಗೆ
ಮೈ ಕಾಯಿಸಿಕೊಳ್ಳುತ್ತಿದ್ದಾರೆ
ಹುಡುಗ-ಹುಡುಗಿಯರು
ಸಲ್ಲಾಪ ನಡಸುತ್ತ.
ಪಾಪ, ಗೊತ್ತಿಲ್ಲ ಅವರಿಗೆ, ಮೇಲಿನ ಬಣ್ಣ
ಕೆಲವು ದಿನಕ್ಕೇ ಉದುರಿ, ಮತ್ತೆಮರ
ಬೋಳಾಗುವುದು ; ಬೇರಿಂದ ಕೊಂಬೆಗೆ
ನೆಗೆದ ಈ ಉತ್ಸಾಹ ಕೆಲವುದಿನ ಹಾರಾಡಿ
ಕೆಳಕ್ಕೆ ಉದುರಿ, ತರಗಾಗುತ್ತ ಬಾಡುವುದು ;
ಹೀಗೆ ಬಾಡುತ್ತಾ ಬಾಡುತ್ತಾ ಕರಗಿ ಸಣ್ಣಾಗಿ
ಮಣ್ಣಾಗಿ ಬಿರುಮಳೆಗೆ ಕೊಚ್ಚಿಹೋಗುವುದೂ
ಗೊತ್ತಿಲ್ಲ ಅವರಿಗೆ.

ಗೊತ್ತಿರಲಿ ಗೊತ್ತಿಲ್ಲದಿರಲಿ, ಹೀಗೇ
ವರ್ಷಕ್ಕೊಮ್ಮೆ-ಯಾರೊ ಹಾಕಿದಹಾಗೆ ಸ್ವಿಚ್ಚು
ಝಗ್ಗನೆ ಹತ್ತಿ ಉರಿಯುತ್ತದೆ
ಮರಮರದ ಮೈಯ್ಯಲ್ಲಿ
ಹಳದಿ ಹೂವಿನ ಹುಚ್ಚು.

ಪು.ತಿ.ನ ಅವರ ಕಾವ್ಯಮೀಮಾಂಸೆ:
(ಪರಿಚಯ ಹಾಗೂ ವಿಶ್ಲೇಷಣೆ)

ಕೆ. ವಿ. ನಾರಾಯಣ

ಪ್ರವೇಶ :

ಕನ್ನಡ ನವೋದಯದ ಎಲ್ಲ ಪ್ರಮುಖ ಕವಿಗಳಂತೆ ಪು.ತಿ.ನ ಅವರು ತಮ್ಮ ಕಾವ್ಯರಚನೆಯೊಡನೆ ಕಾವ್ಯತತ್ತ್ವ ಚಿಂತನೆಯನ್ನೂ, ಅದೂ ತಮ್ಮ ಹೊಣೆ ಎಂಬಂತೆ ನಿರ್ವಹಿಸಿದ್ದಾರೆ. ಅವರ ಕಾವ್ಯತತ್ತ್ವ ಚಿಂತನೆಗಳು ಮುಖ್ಯವಾಗಿ 'ಕಾವ್ಯ ಕುತೂಹಲ' ಹಾಗೂ 'ರಸಪ್ರಜ್ಞೆ' ಎಂಬ ಪುಸ್ತಕಗಳಲ್ಲಿ ಸಂಗ್ರಹಗೊಂಡಿವೆ. ತಮ್ಮ ಕವಿತೆಗಳ ಬಗೆಗೆ ಹಾಗೂ ಇತರರ ಕವಿತೆಗಳ ಬಗೆಗೆ ಪು.ತಿ.ನ ನಡೆಸಿದ ಚಿಂತನೆಗಳು; ಕೆಲವು ಪರಿಕಲ್ಪನೆಗಳ ಬಗೆಗೆ ಚರ್ಚೆ ಇವೇ ಮುಂತಾದವು 'ಕಾವ್ಯ ಕುತೂಹಲ'ದಲ್ಲಿವೆ.

ಪು.ತಿ.ನ ಅವರ ಕಾವ್ಯತತ್ತ್ವಚಿಂತನೆಯ ವೈಶಿಷ್ಟ್ಯಗಳನ್ನು ಕುರಿತು ಈಗಾಗಲೇ ಡಾ. ಕೆ. ಕೃಷ್ಣಮೂರ್ತಿ, ಡಾ. ಜಿ. ಎಸ್. ಶಿವರುದ್ರಪ್ಪ ಮತ್ತು ಡಾ. ಸಿ. ಪಿ. ಕೃಷ್ಣ ಕುಮಾರ್ ಅವರು ಚರ್ಚೆ ಮಾಡಿದ್ದಾರೆ. ಸಂಸ್ಕೃತ ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಪು.ತಿ.ನ ಅವರ ಕಾವ್ಯತತ್ತ್ವ ರೂಪುಗೊಳ್ಳುವ ಕ್ರಮವನ್ನೀಗಾಗಲೇ ಸಾಕಷ್ಟು ವಿವರಿಸಲಾಗಿದೆ.

ಈ ಪ್ರಬಂಧದಲ್ಲಿ ಮೊದಲು ಪು.ತಿ.ನ ಅವರ ಕಾವ್ಯತತ್ತ್ವದ ಹಿಂದಿನ ಚೌಕಟ್ಟನ್ನು ಗ್ರಹಿಸಿ, ಅನಂತರ ಆ ಚೌಕಟ್ಟನ್ನು ವಿಮರ್ಶಿಸಲು ಯತ್ನಿಸಲಾಗಿದೆ.

ವಿಷಯ :

ಪು.ತಿ.ನ ಅವರ ಕಾವ್ಯಮೀಮಾಂಸೆಯ ವಿಚಾರಗಳ ಕೇಂದ್ರದಲ್ಲಿ 'ರಸ' ಪರಿಕಲ್ಪನೆ ಇದೆ. ಅವರ ಬರಹಗಳಲ್ಲಿ ಈ ಪದವನ್ನು ವಿವರಿಸಲು ಅವರು ಹಲವು ಕಡೆಗಳಲ್ಲಿ ಯತ್ನಿಸಿದ್ದಾರೆ. ಈ "ರಸ" ವೆಂಬ ಮಾತು ಕೇವಲ ಕಾವ್ಯಸಂಬಂಧಿಯೂ, ಕಾವ್ಯ ವಿಶಿಷ್ಟವಾದುದೂ ಅಲ್ಲ. ವಿಶಾಲವಾದ, ಜೀವನವ್ಯಾಪ್ತಿಯಾದ ವ್ಯಾಖ್ಯೆಯನ್ನು ಪು.ತಿ.ನ ಆಶ್ರಯಿಸಿ ರಸವನ್ನು ವಿವರಿಸುತ್ತಾರೆ.

'ರಸ' ಎನ್ನುವುದೊಂದು ಊರ್ಜಾ (ಎನರ್ಜಿ) ವಿಶೇಷ. ಮನುಷ್ಯನ ಅಂತಃಕರಣದಲ್ಲಿ ಮಾತ್ರ ಉತ್ಪನ್ನವಾಗಿ ಒಂದು ವಿಶಿಷ್ಟ ಕಾಂತಕ್ಷೇತ್ರವನ್ನು ನಿರ್ಮಿಸು

ವಂಥದು. (1980, 3) ಮನುಷ್ಯನಲ್ಲಿ ಬುದ್ಧಿಮೂಲವಾದ ಊರ್ಜೆಯೂ ಇದೆ. ಇದರ ಗುರಿ ಜ್ಞಾನ; ಸತ್ಯವನ್ನು ತಿಳಿಯುವಂಥದು. ಸತ್ಯಾನ್ವೇಷಣೆಯನ್ನು 'ಋತಾಭಿಗಾಮಿತೆ'(1980,4)ಎನ್ನುತ್ತಾರೆ, ಪುತಿನ. ಇನ್ನೊಂದು 'ರಸಾಭಿಗಾಮಿತೆ'. ಇದರ ಗುರಿ ಮತ್ತು ಸಾಧನ ಎರಡೂ ಒಂದೇ, ಅದೇ ವ್ಯಕ್ತಿಯಲ್ಲಿರುವ "ನಾನು". ಈ ಎರಡೂ ಪರಸ್ಪರ ಭಿನ್ನ ಆದರೆ ಪೂರಕ ಪ್ರವೃತ್ತಿಗಳು.

ರಸಪ್ರಜ್ಞೆ ಎಂಬುದು ವ್ಯಕ್ತಿಯಲ್ಲಿ ಉತ್ಪನ್ನಗೊಂಡಾಗ ಆತ ಭವದಲ್ಲೇ ಇದ್ದರೂ ಅದಕ್ಕೆ ಅಂಟಿಕೊಳ್ಳದಂತೆ ಇರಬಲ್ಲ. 'ವಸ್ತು ವಿಮುಖವಾಗಿ ಆತ್ಮ ಸಂವೇದನೆಯಲ್ಲಿ' (1980, 12) ವ್ಯಕ್ತಿಯನ್ನು ತೊಡಗಿಸುವ ರಸಪ್ರಜ್ಞೆ ಅವನಿಗೆ 'ಆನಂದ'ದ ಅನುಭವವನ್ನು ತಂದುಕೊಡುತ್ತದೆ. ಅಲ್ಲದೆ "ಪ್ರಸರಣ" ಅದರ ಇನ್ನೊಂದು ಲಕ್ಷಣ. ಇದರಿಂದಾಗಿ ರಸಪ್ರಜ್ಞೆಯನ್ನು ಹೊಂದಿದಾತ ಅದರ ಫಲ ವನ್ನು ಜಗತ್ತಿಗೆ ನೀಡಲು ಸನ್ನದ್ಧನಾಗಿರುತ್ತಾನೆ. ತನ್ನಲ್ಲಿರುವ "ಪಡೆದ ಅನುಭೂತಿಗಳನ್ನು ವಿಷಯೀಕರಿಸುವ, ಅಥವಾ ಮೂರ್ತಗೊಳಿಸಿ ತನ್ನ ಮತ್ತು ಇತರ ಮನೋಬುದ್ಧಿಹೃದಯಂಗಳಿಗೆ ಗ್ರಾಹ್ಯವಾಗುವಂತೆ ಮಾಡುವ ಕುಶಲ ಬುದ್ಧಿಯ ವಿಲಸನ" ವಾದ (1980, 20) ಪ್ರತಿಭೆಯ ನೆರವಿನಿಂದ ಆತ ಈ 'ಪ್ರಸರಣ' ದಲ್ಲಿ ತೊಡಗುವುದು ಸಾಧ್ಯವಾಗುತ್ತದೆ.

ಈ ಪ್ರಸರಣದ ಪರಿಣಾಮವಾಗಿಯೇ ಕಾವ್ಯ, ಕಲೆಗಳು ರೂಪುಗೊಳ್ಳುತ್ತವೆ. ಹೀಗೆ ಸೃಷ್ಟಿಗೊಂಡ ಕೃತಿಗಳು ರಸಪ್ರಜ್ಞೆಯ ಪರಿಣಾಮ-ವೆಂಬುದು ಹೇಗೋ ಹಾಗೆ ರಸಪ್ರಜ್ಞೆಗೆ ಕಾರಣ ಎಂಬುದೂ ನಿಜ. ಅಂದರೆ ಕಲಾನುಭವವೂ ರಸಪ್ರಜ್ಞೆಗೆ ಕಾರಣವಾಗುವುದು.

ಇಂಥ ರಸಪ್ರಜ್ಞೆಯುಳ್ಳವರ ಹಾಗೂ ಇಂಥ ರಸಪ್ರಜ್ಞೆಯನ್ನು ಉಂಟು ಮಾಡಬಲ್ಲ ಕೃತಿಗಳ ಸಂಖ್ಯೆ ಇಳಿಮುಖವಾಗುತ್ತಿರುವ ಬಗೆಗೆ ಪುತಿನ ಖಿನ್ನರಾಗಿದ್ದಾರೆ. ನಮ್ಮೆಲ್ಲ ಹೀನಾಯ ಸ್ಥಿತಿಗೆ ಕಾರಣವನ್ನವರು ರಸಪ್ರಜ್ಞೆಯ ಕೊರತೆಯಲ್ಲಿ ಕಾಣುವರು. ಹೀಗೆ ಕೊರತೆಯುಂಟಾಗಲು ಪಾಶ್ಚಾತ್ಯ ಪ್ರಭಾವ, ಶಿಕ್ಷಣಪದ್ಧತಿ ಮುಂತಾದವು ಕಾರಣವಾಗಿವೆ ಎಂಬುದೂ ಅವರ ನಿಲವು.

ವಿಶ್ಲೇಷಣೆ :

'ರಸ' ವನ್ನು ಅವರು ಕಾವ್ಯಕೃತಿಗಳಿಂದ ಓದುಗನಿಗೆ ದೊರಕುವ ಅನುಭವ ಎಂದು ಮಿತವ್ಯಾಪ್ತಿಯಲ್ಲಿ ವ್ಯಾಖ್ಯಾನಿಸಲು ಸಿದ್ಧರಿಲ್ಲ. ಕವಿಗೆ ಲಭಿಸಿದ ವಿಶೇಷ ಚಿತ್ತಪ್ರವೃತ್ತಿಯೇ 'ರಸ'. ಅದಕ್ಕೆ ಲೋಕವೆಂಬುದು ನಿಮಿತ್ತ ಮಾತ್ರ. ಆದರೆ ಅವನ ಅಂತರಂಗವೇ ಅದರ ಆವಾಸ. ಇಂಥ ಚಿತ್ತಪ್ರವೃತ್ತಿ ಓದುಗನಿಗೆ ಲಭಿಸಲು ಕಾವ್ಯ

ಕೃತಿಗಳು ನಿಮಿತ್ತವಾಗುತ್ತವೆ. ಈ 'ರಸ'ವ್ಯಕ್ತಿಯಲ್ಲಿ ಸ್ವಾರ್ಥದ ನೆಲೆಗಳನ್ನು ಕುಗ್ಗಿಸಿ ಅವನನ್ನು ಸಮಾಜ ಸಮ್ಮುಖನನ್ನಾಗಿ ಮಾಡುತ್ತದೆ. ಅಂದರೆ ಅವನನ್ನು ಆವರಿಸುವ ಈ ಕಾವ್ಯಾನುಭವ ಕೇವಲ ಆತ್ಮತನ್ಮಯತೆಯಲ್ಲ; ಆ ಮೂಲಕ ಲಭಿಸಿದ ರಸಜಾಗರ ದಿಂದ ವ್ಯಕ್ತಿ ಜೀವಕಾಮದ ಉಪಾದಿಗಳಿಂದ ಬಿಡುಗಡೆ ಪಡೆಯುತ್ತಾನೆ. ಹಾಗಾಗಿ ಕಾವ್ಯದ ಪರಿಣಾಮವನ್ನು ಇಲ್ಲಿ ಪ್ರಧಾನವಾಗಿ ಸಾಮಾಜಿಕ ನೆಲೆಗಳಲ್ಲಿ ಕಂಡು ಕೊಳ್ಳಲು ಯತ್ನಿಸಲಾಗಿದೆ ಎಂದಾಯಿತು.

ಪುತಿನ ಅವರು ದರ್ಶನಶಾಸ್ತ್ರದ ಪರಿಕಲ್ಪನೆಗಳನ್ನು, ಅದೇ ಪರಿಭಾಷೆಯಲ್ಲಿ ವಿವರಿಸಿ, ಆ ಮೂಲಕ ಜೀವನದಲ್ಲಿ ಕಾವ್ಯದ ಸ್ಥಾನವನ್ನು ಹಾಗೂ ಕಾವ್ಯದ ಉದ್ದೇಶವನ್ನು ಸಮರ್ಥಿಸಿದ್ದಾರೆ. ಬಹು ಹಿಂದೆ ಅವರು ಬಳಸಿದ 'ಭವನಿಮಜ್ಜನ ಚಾತುರ್ಯ' ಹಾಗೂ 'ಲಘಿಮಾಕೌಶಲ' ಎಂಬ ಪದಗಳಿಂದ ಮೊದಲಾಗಿ ಅವರ ಚಿಂತನೆ ಗಳು ಕಾವ್ಯದ ಕಾರಣ ಹಾಗೂ ಪರಿಣಾಮಗಳನ್ನು ನೈತಿಕಗೊಳಿಸುವ ಯತ್ನದಲ್ಲೇ ತೊಡಗಿರುವುದನ್ನು ಕಾಣುತ್ತೇವೆ. ಇಂಥ ಯತ್ನಗಳ ಹಿಂದೆ ನವೋದಯದ ಒಂದು ಮುಖ್ಯ ಪ್ರೇರಣೆಯನ್ನು ಕಾಣುವುದು ಸುಲಭ. ಆದರೆ ಪುತಿನ ತಮ್ಮ ಕಾವ್ಯ ಚಿಂತನೆಗಳನ್ನು ಹೆಚ್ಚು ಸಾಮಾಜಿಕ ನೆಲೆಗಳಿಗೆ ಒಯ್ಯಲು ಯತ್ನಿಸಿರುವುದರಿಂದ, ಇಂಥ ಅವರ ಯತ್ನಗಳಿಗೆ ಅವರು ಸಾಮಾಜಿಕ ಸ್ಥಿತಿಯನ್ನು ಗ್ರಹಿಸಲು ಬಳಸುವ ಚೈತನ್ಯಮೂಲವಾದ (ಐಡಿಯಲಿಸಂ)ವೇ ಕಾರಣವೆಂದು ಭಾವಿಸಬೇಕಾಗುತ್ತದೆ. ವಸ್ತುಜಗತ್ತು ಇಡೀ ಚಿಂತನೆಯಲ್ಲಿ ನಿಮಿತ್ತ ಮಾತ್ರವಾಗುತ್ತದೆ. ಪುತಿನ ಅವರ 'ರಸ' ಪರಿಕಲ್ಪನೆಯನ್ನು ಒಪ್ಪುವವರು ಮೊದಲು ಅವರು ಜಗತ್ತನ್ನು ಗ್ರಹಿಸಲು ಬಳಸುವ ನೆಲೆಗಳನ್ನು ಒಪ್ಪಬೇಕಾಗುವುದು. ಇಲ್ಲಿ ಒಪ್ಪಿಗೆ ಇಲ್ಲದಿದ್ದರೆ ಆಗ ಅವರ 'ರಸ'ವೂ ಒಪ್ಪಿತವಾಗುವುದಿಲ್ಲ.

ಅಲ್ಲದೆ ಪುತಿನ ಅವರದ್ದು 'ಶುದ್ಧಕಾವ್ಯ' ವನ್ನು ಗುರುತಿಸುವ ಗುರಿಯನ್ನು ಹೊಂದಿದ ಚಿಂತನೆ. ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ ಅಪೇಕ್ಷೆಗಳ ಕಾವ್ಯ ಚಿಂತನೆ. ಹೇಗಿರಬೇಕು ಎಂಬ ನೆಲೆಯದ್ದೇ ಹೊರತು ಹೇಗಿದೆ ಎಂಬ ನೆಲೆಯದ್ದಲ್ಲ. ಹೀಗೆ ಅಪೇಕ್ಷೆಗಳನ್ನು ಆಧರಿಸುವುದು ತನ್ನಿಂದ ತಾನೇ ದೋಷ ವೆಂದೇನೂ ಅಲ್ಲ. ಆದರೆ ಅಪೇಕ್ಷೆಗಳೂ ಲೋಕಸಂಭಾವ್ಯತೆಯ ಮೂಲಕವೇ ರೂಢವಾಗಬೇಕೆಂದು ಬಯಸುವುದು ತಪ್ಪಲ್ಲವಷ್ಟೆ. ಪಾಶ್ಚಾತ್ಯ ಪ್ರಭಾವದಿಂದ ಉಂಟಾದ ಆಘಾತವನ್ನು ಕಾವ್ಯದ ಸಂದರ್ಭದಲ್ಲಿ ನಿರಾಕರಿಸಲು ಪುತಿನ ಅವರು ನಡೆಸುವ ಯತ್ನದ ಹಿಂದಿನ ಉದ್ದೇಶ ಅರ್ಥವಾಗುತ್ತದೆ. ಆದರೆ ಮನಸ್ಸಿನ ಇನ್ನೊಂದು ಪ್ರವೃತ್ತಿಯಾದ ಋತಾಭಿಗಾಮಿತೆಯೂ ಹೀಗೆ ಆಧುನಿಕವಾದ ಪರಿಕರ ಗಳನ್ನು ನಿರಾಕರಿಸಬಲ್ಲುದೇ ? ಪುತಿನ ಅವರು ಬಳಸುವ ಪ್ರಕ್ರಿಯಾ ವಿವರಣಾ ಪದ ಗಳು ವಿಜ್ಞಾನದ ದರ್ಜೆಯಲ್ಲಿ ಬಳಕೆಯಾಗುವಂಥಹವು. ಇದು ಒಂದು ಗಮನಾರ್ಹ

ಸಂಗತಿಯಾಗಿದೆ. ನಮ್ಮ ಜೀವನಗ್ರಹಿಕೆಯನ್ನು ನಿರೂಪಿಸುವ ಹಂತದಲ್ಲಿ ನಾವು ವಿಜ್ಞಾನದಿಂದ ಪ್ರಭಾವಿತವಾಗುತ್ತಿರುವಾಗ ಆಚರಣೆಯ ನೆಲೆಗಳಲ್ಲಿ ಹೇಗೆ ಅದರಿಂದ ಹೊರಬರುವುದು ಸಾಧ್ಯ? ಒಂದು ವೇಳೆ ಅದು ಅಸಾಧ್ಯವೆಂದು ತಿಳಿದು ಮನಸ್ಸನ್ನು ರಸಾಭಿಗಾಮಿತೆ ಮತ್ತು ಋತಾಭಿಗಾಮಿತೆಗಳೆಂಬ ಎರಡು ಭಿನ್ನ ಚಟುವಟಿಕೆಗಳಿಗೆ ತಕ್ಕಂತೆ ವಿಘಟಿಸಿಕೊಳ್ಳುವುದು ಸಾಂಸ್ಕೃತಿಕವಾಗಿ ಎಷ್ಟು ಸೂಕ್ತ? ಈಗಾಗಲೇ ಉಂಟಾಗಿರುವ ಜಗಿತದ ಒತ್ತಡವನ್ನು ಆಧುನಿಕ ಮನುಷ್ಯ ತಡೆಯಲು ಅಸಾಧ್ಯನಾಗಿರುವಾಗ ಅವನ ಸಿದ್ಧತೆಯನ್ನೇ ಹೀಗೆ ಹಿಂಜಗಿತಕ್ಕೆ ಗುರಿಮಾಡಿದರೆ ಅದು ಯುಕ್ತವಾಗುವುದೇ ಎಂಬೆಲ್ಲ ಪ್ರಶ್ನೆಗಳು ಉದ್ಭವವಾಗುತ್ತವೆ.

ಕಾವ್ಯಕೃತಿಯೂ ನಿಮಿತ್ತವೆಂದು ತಿಳಿದೆವಷ್ಟೆ. ಆದರೂ ಅದರ ಲಕ್ಷಣಗಳನ್ನು ಚರ್ಚಿಸುವುದು ಸಾಧ್ಯ. ಅಂದರೆ ಕೃತಿಯ ಕಲಾಭಾಗದ ಚರ್ಚೆ. (1966, 124) ಪ್ರತಿಭೆಯ ಸಂಚಲನದಿಂದ ರೂಪತಳೆಯುವ ಭಾಷಿಕ ಆಕೃತಿಯ ಸ್ವರೂಪವನ್ನು ಪುತಿನ ಅವರು ಪ್ರಾಸಂಗಿಕವಾಗಿ ಚರ್ಚಿಸಿದ್ದಾರೆ. ಮುಖ್ಯವಾಗಿ ಇದು ಮಂಡನೆಯ ಮಾರ್ಗವಲ್ಲ; "ನೇರನುಡಿಗಳಲ್ಲಿ ಪ್ರಾಯಶಃ ನಮಗೆ ಉತ್ಕೃಷ್ಟ ಕವಿತೆ ದೊರೆಯದು. ಅಥವಾ ಸುಬದ್ಧವಾದ ವಿಚಾರಸರಣಿಯಿಂದ ಕೂಡಿ ಪ್ರಬಂಧರೂಪದಲ್ಲಿರುವ ದಾರ್ಶನಿಕ ತತ್ತ್ವಪ್ರತಿಪಾದಕ ಹಾಗೂ ನೀತಿಬೋಧಕ ವಾಕ್ಯಗಳಲ್ಲಿ ಅವು ಸ್ಥಾಯಿಪ್ರಸೂತವಾದ ಹೊರತು ಪ್ರಾಯಶಃ ನಮಗೆ ಕಾವ್ಯರಸ ದೊರೆಯುವ ಹಾಗಿಲ್ಲ. ಅವು ಋತನಿಯತ ಜಗತ್ತಿನತ್ತ ಕೈ ಮಾಡಿ ತೋರುತ್ತವೆ; ಸತ್ಯ ನಿಬದ್ಧ ಆತ್ಮವನ್ನು ಧ್ವನಿಸವು"(1966,129). ಕಾವ್ಯಕೃತಿಗಳ ರೂಪದ ಹೊಣೆಯನ್ನು ಮೇಲಿನ ಮಾತು ಸ್ಪಷ್ಟಪಡಿಸುತ್ತದೆ.

ಕಾವ್ಯಕೃತಿಗಳಲ್ಲಿ ಲೋಕ ಹಾಗೂ ಸತ್ಯ ಸಂವಾದಿಯಾಗುವ ಗುಣಗಳು ಇರುವುದು ಅತ್ಯವಶ್ಯವಲ್ಲವೆಂಬ ಚಿಂತನೆ, ಹೀಗಾಗಿ, ಪುತಿನ ಅವರ ಕಾವ್ಯಮೀಮಾಂಸೆಯ ಇನ್ನೊಂದು ಮುಖ್ಯ ತೀರ್ಮಾನವಾಗುತ್ತದೆ. ಇದನ್ನು ಸೂಚಿಸುವ ಅವರ ಈ ಮಾತನ್ನು ನೋಡಿ: "ಸಂಗೀತದಂತೆ ಕಾವ್ಯವೂ ಕೂಡ ವಾಸ್ತವದ ನಿರ್ಬಂಧವನ್ನು ಎಷ್ಟರಮಟ್ಟಿಗೆ ಕಳೆದುಕೊಂಡರೆ ಅಷ್ಟರ ಮಟ್ಟಿಗೆ ಅದು ಭೋಗ್ಯವಾಗುತ್ತದೆ, ದಿವ್ಯವಾಗುತ್ತದೆ'' (1966,10). ''ನಾವು ಸತ್ಯವನ್ನು ಅಳೆಯುವುದೂ, ಪ್ರಮಾಣೀಕರಿಸುವುದೂ ಕಲಾದಿಗಳಲ್ಲಿ ಬೇರೆಯ ಮಾನದಂಥ ವಸ್ತುಮಾದಿಂದಲ್ಲ. ಋತುಮಾನದಿಂದ." (1980,49) ಇಲ್ಲಿ ಸತ್ಯದ ಅರಿವು ಏಕೆ ಆನಂದಕ್ಕೆ ಕಾರಣವಾಗದು ಎಂಬ ಅಂಶವನ್ನು ಪುತಿನ ಬೇರೊಂದು ಕಡೆಯಲ್ಲಿ ಚರ್ಚಿಸಿದ್ದಾರೆ. ವ್ಯಕ್ತಿಯ ಚಿತ್ತವನ್ನು ಆವರಿಸಿರುವ ಅಹಂಕಾರದ ವಲಯ ಭಂಗಗೊಂಡಲ್ಲಿ ಮಾತ್ರ ಅವನಿಗೆ ಸೌಂದರ್ಯದ ಅನುಭವವಾಗುವುದು. ಇಂಥ ಅನುಭವಕ್ಕೆ ಪ್ರಕೃತಿ ನೆರವಾಗುವುದು. ಕವಿ ತನ್ನ ಕೃತಿಯಲ್ಲಿ ವಾಸ್ತವದ ಬಿಂಬವನ್ನು ಮೂಡಿಸುವ

ಬದಲು ಓದುಗನ ಅಹಂಕಾರ ಭಂಗವು ವ್ಯಂಜಿತವಾಗುವ ರೀತಿಯಲ್ಲಿ ಅದನ್ನು ಪರಿವರ್ತಿಸಂತ್ತಾನೆಂದು ಪುತಿನ ಆಲೋಚಿಸುತ್ತಾರೆ.

ಈ ಪರಿವರ್ತನೆಯ ಹಂತದಲ್ಲಿ ಕಾವ್ಯವನ್ನು ಪ್ರವೇಶಿಸುವ ಅಂಶವೆಂದರೆ 'ಅಸಂಭಾವ್ಯತೆ'. ವಸ್ತು ಜಗತ್ತಿಗೆ ಅಸಂಭಾವ್ಯ ಎನಿಸುವ ರೀತಿಯಲ್ಲಿ ಕವಿ ಈ ಅಸಂಭಾವ್ಯತೆಯನ್ನು ಬಳಸುತ್ತಾನೆ. ಇದು ಮುಖ್ಯವಾಗಿ ಭಾಷೆಯಲ್ಲಿ ಹಾಗೂ ಭಾಷೆಯ ಮೂಲಕ ಸಾಧಿತವಾಗುವುದು. ಭಾಷೆಯಲ್ಲಿ ಅಸಂಭಾವ್ಯತೆ ಎಂಬುದು ಛಂದಸ್ಸು, ಅಲಂಕಾರ ಮುಂತಾದ ನೆಲೆಗಳಲ್ಲಿ ಪ್ರವೃತ್ತವಾಗುತ್ತದೆ. ಭಾಷೆಯ ಮೂಲಕ ನಡೆಯುವ ಅಸಂಭಾವ್ಯತೆ ಸಾಧಿತವಾಗುವುದು ವಾಸ್ತವಸಂವಾದಿಯಲ್ಲದ ಸಂಗತಿಗಳನ್ನು ನಿರೂಪಿಸುವ ಮೂಲಕ. ಇಂಥ ಅಸಂಭಾವ್ಯತೆಗಳು 'ಕಾವ್ಯದ ಶಿವಸ್ಥಾನ'ಗಳು ಎನ್ನುತ್ತಾರೆ ಪುತಿನ.

ಅಸಂಭಾವ್ಯತೆಯ ಸಂಬಂಧದ ಚರ್ಚೆಯ ವ್ಯಾಪ್ತಿ ಬಲು ದೊಡ್ಡದು. ಪುತಿನ ಅವರು ಮೊದಲು ಈ ಪರಿಕಲ್ಪನೆಯನ್ನು ಬಳಸುವುದು ಸಂಭಾವ್ಯ ವಾಸ್ತವದ ಹಿನ್ನೆಲೆಯಲ್ಲಿ ಅಸಂಭಾವ್ಯವು ರಚಿಸುವ ವೈಸಾದೃಶ್ಯದಿಂದ ಆಗುವ ಅನುಭವದ ಚರ್ಚೆಯಲ್ಲಿ. 'ರಸದ ನೆಲೆಯನ್ನು ಮುಟ್ಟಬಲ್ಲ ಸತ್ಕವಿಯು ಕಾವ್ಯದಲ್ಲಿ ಕಂಡುಬರುವ ಅಸಂಭಾವ್ಯ ಸಂದರ್ಭಗಳು 'ನತ್ವ ಹಂತೇಷ' (ನಾನು ಅವುಗಳಲಿಲ್ಲ) ಎಂಬುದನ್ನು ನಮಗೆ ಜ್ಞಾಪಿಸಿದರೆ, ಅಲ್ಲೇ ಕಂಡುಬರುವ ಮುದ್ದಾದ ವಾಸ್ತವ ಚಿತ್ರಗಳೋ 'ತೇ ಮಯಿ' (ಇವೆಲ್ಲ ನನ್ನಲ್ಲೇ ಇವೆ) ಎಂಬುದನ್ನು ನೆನಪಿಗೆ ತರುತ್ತವೆ.'' ಬೇರೊಂದು ಕಡೆಯಲ್ಲಿ ವಾಸ್ತವದ 'ಕುರೂಪ'ಗಳನ್ನೂ ಕಾವ್ಯಕೃತಿಗಳು ಪೂರಣ, ಸಂವರಣದಿಂದ ಹೇಗೆ 'ಸ್ವರೂಪ' ಗೊಳಿಸುತ್ತವೆ ಎಂಬ ಮಾತೂ ಬಂದಿದೆ. ಹೇಗೇ ಇರಲಿ, ವಾಸ್ತವದ ಈ ನಿಷೇಧದ ಹಾಗೂ ಪರಿವರ್ತನೆಯ ಉದ್ದೇಶ ಮುಖ್ಯವಾಗಿ ವಿವಕ್ಷಿತ ಪರಿಣಾಮವಾದ ರಸಾನುಭವ.

ಲೋಕಸಂವಾದವನ್ನು ಕುರಿತಂತೆ ತಾವು ತಳೆಯುವ ನಿಲುವಿನ ಅತಿರೇಕದಿಂದಾಗಿ ಸಾಹಿತ್ಯದ ಅನ್ಯಪ್ರಕಾರಗಳಾದ ಕಾದಂಬರಿ, ನಾಟಕಗಳ ಸಮಸ್ಯೆಗಳನ್ನು ವಿವರಿಸದಂತಾಗಲಿಲ್ಲ ಎಂಬ ಎಚ್ಚರ ಪುತಿನ ಅವರಿಗೆ ಇದೆ. ಈ ಸಮಸ್ಯೆಯನ್ನು ಅವರು ಪ್ರಸ್ತಾಪಿಸುತ್ತಾರೆ. ಆದರೆ ಈ ಮೊದಲೇ ಹೇಳಿದಂತೆ ಜಗತ್ತು ದತ್ತವಾಗಿಸುವ ಸ್ಥಿತಿಯನ್ನು ವಿವರಿಸುವ ಬದಲು ಅಪೇಕ್ಷೆಗಳ ಸ್ತರಕ್ಕೆ ಅದನ್ನು ಒಯ್ಯುವ ಪ್ರಯತ್ನ ಮಾಡುತ್ತಾರೆ.

ಇದೂ ಅಲ್ಲದೆ ಅಸಂಭಾವ್ಯತೆಗಳಿಗೆ ಕಾರಣಗಳು, ಅವುಗಳ ಪರಿಣಾಮ ರಮಣೀಯತೆ ಮಾತ್ರವೆಂದು ಒಪ್ಪುವುದು ಕಷ್ಟ. ಗ್ರಹಿಕೆಯ ಅಭಿವ್ಯಕ್ತಿಗೆ ತಕ್ಕಂತೆ ಭಾಷೆಯನ್ನು ಒಗ್ಗಿಸುವುದು, ಈ ಹಂತದಲ್ಲಿ ಅದರ ಸಂಭಾವ್ಯ ನೆಲೆಗಳಿಂದ

ಮಾರ್ಗಾಂತರ ಹೊಂದುವುದೂ ತಿಳಿದ ವಿಷಯಗಳೇ ಆಗಿವೆ. ಅಲ್ಲದೆ ಗ್ರಹಿಕೆಯನ್ನು ವಸ್ತು ಜಗತ್ತು ನಿಯಂತ್ರಿಸುತ್ತದೆ ಎಂಬುದನ್ನು ಒಪ್ಪುವುದಾದರೆ ಆಗ ಸಂಭಾವ್ಯತೆಯ ವಿವರಣೆಯು ವ್ಯಕ್ತಿ ಹಾಗೂ ಜಗತ್ತಿನ ಸಂಬಂಧ ಪಡೆದಿರುವ ವಿನ್ಯಾಸದಿಂದ ಲಭಿಸುತ್ತದೆ. ವಸ್ತು, ಸಸ್ಯ ಹಾಗೂ ಪ್ರಾಣಿ ಜಗತ್ತುಗಳನ್ನು ಮಾನವ ಜಗತ್ತಿನೊಡನೆ ಸಂಪರ್ಕಿಸುವ ವಿಧಾನದಿಂದಲೂ ಭಾಷೆಯ ಮೂಲಕ ಮೂಡುವ ಅಸಂಭಾವ್ಯತೆಗಳು ರೂಪುಗೊಳ್ಳುತ್ತವೆ.

ಪುತಿನ ಅವರು ಕೃತಿ ಶರೀರವನ್ನು ಮಾಧ್ಯಮ ಎಂದು ಪರಿಗಣಿಸುವುದರಿಂದ ಅವರ ಯುಕ್ತತೆಯನ್ನು, ನಿಯಾಮಕ ತತ್ವವನ್ನು ಪರಿಣಾಮ (ಹಾಗೂ ಉಗಮ) ಗಳಲ್ಲಿ ಗುರುತಿಸಬಹುದು. ಶಬ್ದ ಹಾಗೂ ಛಂದಸ್ಸುಗಳು ಕೃತಿ ಶರೀರದಲ್ಲಿ ಯುಕ್ತವಾಗುವ, ಉಚಿತವಾಗುವ ಬಗೆಯನ್ನು ಈ ನಿಟ್ಟಿನಲ್ಲೇ ಚರ್ಚಿಸಿದ್ದಾರೆ.

ಭಾರತೀಯ ಕಾವ್ಯ ಮೀಮಾಂಸೆಯು ಮಂಡಿಸುವ ರಸವಿವೇಚನೆಯಲ್ಲಿ ಪುತಿನ ಅವರ ವಿಚಾರಗಳ ಬೇರುಗಳನ್ನು ಹುಡುಕುವುದು ಅದೆಷ್ಟು ಸರಿಯೋ ಕಾಣೆ. ಅಲ್ಲಲ್ಲಿ ಕೆಲವು ಎಳೆಗಳ ಹೊಂದಾಣಿಕೆ ಕಂಡರೂ ಒಟ್ಟಾರೆ ಇವರದ್ದು ದರ್ಶನಗಳಿಂದ ಪ್ರೇರಿತವಾದ ದೃಷ್ಟಿಕೋನ. 'ರಸ' ವ್ಯಂಗ್ಯವಾಗುವುದೆಂಬ ನೆಲೆಯನ್ನು ಪುತಿನ ಬಲವಾಗಿ ಸಮರ್ಥಿಸುತ್ತಾರೆ. ಆದರೆ ಲೋಕ ಹಾಗೂ ಕಾವ್ಯ ಎರಡೂ ರಸವೆಂಬ ಊರ್ಜಾಪ್ರವಾಹಕ್ಕೆ ಕಾರಣವಾಗುತ್ತದೆ ಎಂಬ ಮಾತು ; ಕವಿಯ ರಸ ಪ್ರಜ್ಞೆಯೇ ಪ್ರತಿಭೆಯ ಮೂಲಕ ಪ್ರಸಾರವಾಗುವುದೆಂಬ ಮಾತು ಆಧುನಿಕ ವಾದದ್ದು. ಏಕೆಂದರೆ ಕವಿಯಲ್ಲಿ ಕಾಣುವ ಹಾಗೂ ಕಟ್ಟುವ ಕ್ರಿಯೆಗಳು ನಡೆಯುವಾಗ ಕಟ್ಟುವ ಮೂಲಕವೇ ಕಂಡದ್ದು ಸ್ಪಷ್ಟವಾಗುತ್ತದೆಂಬ ನಿಲುವೂ ಒಂದಿದೆ. ಎಂದರೆ ಕವಿಗೆ ಹೀಗೆ ಕಟ್ಟುವಲ್ಲಿ ಸ್ಪಷ್ಟವಾಗುವ ಹಂತವೇ ನಿಜವಾಗಿ ಮುಕ್ತಿಯ, ಬಿಡುಗಡೆಯ ಅನುಭವ ಎಂದಾಗುತ್ತದೆ.

ಸಹೃದಯ (ಓದುಗ)ನ ಮಟ್ಟಿಗೂ ಹೀಗೆ ಸಮಾಜ ಸಮ್ಮುಖತೆಯನ್ನು ಪ್ರೇರೇಪಿಸುವ ರಸಪ್ರಜ್ಞೆಯ ಉಗಮ ಕೇವಲ ಕಾವ್ಯಕೃತಿ (ಕಲಾಕೃತಿ)ಗಳಿಂದ ಸಾಧ್ಯ ಎಂಬ ನಿಲುವು ಪುತಿನ ಅವರದ್ದಲ್ಲವಷ್ಟೆ. ಸಾಮಾಜಿಕ ಕಲ್ಪಗಳು, ದೇವೋತ್ಸವಗಳು, ದೇಗುಲಗಳು, ಹಬ್ಬಗಳು ಜನರಲ್ಲಿ ಈ ರಸೋರ್ಜೆಯನ್ನು ಉಂಟುಮಾಡಬಲ್ಲವು ಎಂದೂ ಅವರೆಂದಿದ್ದಾರೆ. ಇದರಿಂದಾಗಿ ಕಾವ್ಯಾನುಭವದ ಪರಿಣಾಮವನ್ನು, ಅಂದರೆ ಅದರ ಅನನ್ಯತೆಯನ್ನು ಅಲ್ಲಗಳೆದಂತಾಯಿತು. ಇದೂ ಕೂಡ ಭಾರತೀಯ ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಹೊಸ ವಿಚಾರವೇ ಸರಿ.

ಪುತಿನ ಅವರದು ಅಪೇಕ್ಷೆಗಳ ಕಾವ್ಯಮೀಮಾಂಸೆ ಎಂದೆವಷ್ಟೆ. ಜೀವನದಲ್ಲಿ ಕಾವ್ಯದ ಸ್ಥಾನವನ್ನು ಅವರು ವ್ಯಾಖ್ಯಾನಿಸುವಾಗ ತಮ್ಮ ವ್ಯಾಖ್ಯೆಯ ಆಚೆಗೆ

ಉಳಿಯುವ ಕಾವ್ಯಗಳ ಬಗೆಗೂ ಎಚ್ಚರದಿಂದ ಇದ್ದಾರೆ. ಮೊದಲ ಹಂತದಲ್ಲಿ ಈ 'ಪ್ರಚಾರ ಸಾಹಿತ್ಯ ಪ್ರಚೋದಕ ಸಾಹಿತ್ಯ, ಪ್ರಬೋಧನ ಸಾಹಿತ್ಯ'ಗಳಿಗೆ ಬೆಲೆಯಿಲ್ಲವೆಂದಿಲ್ಲ...ಕಾಲಾನುಗುಣ್ಯದಿಂದ ಅವುಗಳಿಗೆ ಪ್ರಾಮುಖ್ಯವೂ ಬರುತ್ತದೆ ನಿಜ (1966,7) ಎಂದಿದ್ದಾರೆ. ಆದರೆ ಇಂಥ ಕೃತಿಗಳಿಗೆ ಕಾಲವನ್ನು ಗೆಲ್ಲುವ ಸಾಮರ್ಥ್ಯ ಇರದು. 'ಎಸೆಯುವವನ ಚಾಕಚಕ್ಯವನ್ನೆಡೆಗೊಂಡು ನೀರಿನ ಮೇಲೆ ಸ್ವಲ್ಪ ಕಾಲ ನೋಡುವವರಿಗೆ ವಿಸ್ಮಯ ತರುವಂತೆ ಚಕಚಕನೆ ಹಾರಿ ಮುಳುಗಿ ಹೋಗುವ ಕಲ್ಲಿನಂತೆ ಅವು ಮುಳುಗಿ ಹೋಗುತ್ತವೆ' (1966,10). ಇಂಥ ಕೃತಿಗಳು 'ರಸಬಂಧು'ಗಳು. 'ಇವುಗಳಿಲ್ಲದೆ ಹೋಗಿದ್ದರೆ ಆಧುನಿಕ ಮಾನವ ತನಗೆ ಅಮರಿರುವ ಬೇಸರಿಕೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ' (1966,166). ಆದರೆ ಇವುಗಳಿಂದ ದೊರೆಯುವುದೇ ನಿಜವಾದ ರಸಾನುಭವವಲ್ಲ. ಇವು 'ಅಮೃತ ಕಲಶವನ್ನು ಸುತ್ತಿ ಬುಸುಗುಡುತ್ತಿರುವ ಸರ್ಪಗಳು. ಇವು ಉರಿಯುವ ಕೊಳ್ಳಿಗಳಂತೆ. ಆದರೆ ಕಾವ್ಯ ದೀವಿಗೆಯಂತಿರಬೇಕು'—ಈ ನಿಲುವುಗಳನ್ನು ಪುತಿನ ಮುಂಡಿಸುತ್ತಿರುವುದು ಕಳೆದ ದಶಕದ ಸಾಹಿತ್ಯ ಸಂಚಲನೆಯ ಹಿನ್ನೆಲೆಯಲ್ಲಿ ಎಂಬುದು ಗಮನಾರ್ಹ.

ಕವಿ ಇಡೀ ಸಮಾಜ ಸಂರಕ್ಷಣೆಯ ಹೊಣೆಯೇ ತನ್ನ ಮೇಲೆ ಬಿದ್ದಿದೆ ಎಂದು ಹಲುಬುವುದು ಬೇಡವೆನ್ನುತ್ತಾರೆ ಪುತಿನ. ಅಲ್ಲದೆ ಕಾವ್ಯಕೃತಿಗಳಿಗೂ ಅವುಗಳ ಸೃಷ್ಟಿಕರ್ತನ ಜೀವನದ ಸಂಗತಿಗಳಿಗೂ ನೇರವಾದ ಸಂಬಂಧವೂ ಇಲ್ಲವೆನ್ನುತ್ತಾರೆ. ಇಲ್ಲಿ ಪುತಿನ ವಾಸ್ತವವನ್ನು, ಅಂದರೆ ಕಾವ್ಯ ರಚನೆಯ ಇಂದಿನ ವಾಸ್ತವವನ್ನು, ತಮ್ಮ ನಿಟ್ಟಿನಲ್ಲಿ ವ್ಯಾಖ್ಯಾನಿಸುತ್ತಿರುವುದು ಸ್ಪಷ್ಟ. ಇಲ್ಲಿಯೂ ಇವರ ವಿಚಾರಗಳನ್ನು ಗ್ರಹಿಸುವುದು ಕಷ್ಟವಲ್ಲ ; ಆದರೆ ಇಡಿಯಾಗಿ ಒಪ್ಪುವುದು ಕಷ್ಟ. ಏಕೆಂದರೆ, ಈ ಮೊದಲೇ ಹೇಳಿದಂತೆ, ಪುತಿನ ಹೇಳುವ ಗುರಿಯನ್ನು ತಲುಪಲು ಅವರು ಸೂಚಿಸುವ ಹಾದಿಗಿಂತಲೂ ಭಿನ್ನವಾದ ಹಾದಿಗಳಿವೆ ಹಾಗೂ ಸದ್ಯದ ಸಾಂಸ್ಕೃತಿಕ ಚಿಂತನೆಗಳಲ್ಲಿ ಇಂಥ ಪರ್ಯಾಯ ಹಾದಿಗಳೇ ಅನಿವಾರ್ಯ ಎಂಬುದು ನನ್ನ ನಂಬಿಕೆ.

1) 1966 : ಕಾವ್ಯ ಕುತೂಹಲ ; ಮೈಸೂರು

2) 1980 : ರಸಪ್ರಜ್ಞೆ ; ಮೈಸೂರು.

(1985ರ ಜನವರಿಯಲ್ಲಿ ಬೆಂಗಳೂರಿನ ಎಂಇಎಸ್ ಕಾಲೇಜು ನಡೆಸಿದ ಪುತಿನ ಕುರಿತ ವಿಚಾರಸಂಕಿರಣದಲ್ಲಿ ಮಂಡಿಸಿದ ಟಿಪ್ಪಣಿಗಳು)

ಕನ್ನಡ ವಿವೇಕ ಚಿಂತಾಮಣಿ : ತಮಿಳು ವೇದಾಂತ ಚೂಡಾಮಣಿ ಒಂದು ಕಿರು ಪರಿಚಯ

ಪ್ರ. ವಿ. ಕುಲಕರ್ಣಿ

ನಿಜಗುಣ ಶಿವಯೋಗಿಗಳಿಂದ ಕನ್ನಡದಲ್ಲಿ ರಚಿತವಾಗಿರುವ ವಿವೇಕ ಚಿಂತಾಮಣಿಯ (ಕ್ರಿ.ಶ. 15 ನೇ ಶತಮಾನ) ಪ್ರಥಮ ಪರಿಚ್ಛೇದವನ್ನು ತಿರುವಣ್ಣಾಮಲೈಯ ಶಿವಪ್ರಕಾಶಸ್ವಾಮಿಗಳು ತಮಿಳಿನಲ್ಲಿ 'ವೇದಾಂತ ಚೂಡಾಮಣಿ' ಎಂಬ ಹೆಸರಿನಿಂದ ಭಾಷಾಂತರ ಮಾಡಿದ್ದಾರೆ. ಅವರ ಕಾಲ ಕ್ರಿ. ಶ. 1652. ಈ ಭಾಷಾಂತರಕ್ಕೆ ತೊಡಗುವ ಪೂರ್ವದಲ್ಲಿ ಕವಿಯು ತಾನು ಕೈಗೊಂಡ ಕಾರ್ಯದ ಸ್ತುತಿಯನ್ನು ಹೀಗೆ ಹೇಳಿದ್ದಾರೆ.

ಸೀರ್ಕೊಂಡ ವರುಮುಚ್ಚಿಯಿನ್ ಮುಡಿಮಣಿಯೈತ್ ದೆಯ್ವ
ಶಿಖಾಮಣಿಯೈಯಡಿಯವರ್ ತಂಗಕಣಿಮಣಿಯೈ ಮಾಯೈಪ್
ಪೇರ್ಕೊಂಡ ವಿರುಳಿರುಕ್ಕುಂ ದಿನಮಣಿಯೈ ಮೂಕ್ಕಣ್
ಪೆರುಮಣಿಯೈ ಯುಗತ್ತಿನುಕ್ಕೋರ್ ವಿಳಕ್ಕಾಗ ವಿರುಂದಿ
ಯೇರ್ಕೊಂಡ ವಿವೇಕ ಚಿಂತಾಮಣಿಯೆನು ನೂಲದನು
ಳಿಡಯಿತ್ತಿಯಂಬುಂ ವೇದಾಂತ ಪರಿಚ್ಛೇದಂ ಪೊರುಳೈ
ಸೇರ್ಕೊಂಡ ತಮಿಳವಿರುತ್ತಯಾಪ್ಪದನಾಲ್‌ಚ್‌ರಿಯ
ನಿಗಟ್ಟುಪನ್ ವೇದಾಂತ ಚೂಡಾಮಣಿನ್‌ಚ್‌ನೇಚೀ

(ಅವತಾರಿಕೈ: ತ:೩)

ಧರ್ಮಪೂರ್ಣನಾಗಿ ಮುಡಿಯಲ್ಲಿ ಮಣಿಯನ್ನಿಟ್ಟುಕೊಂಡ ದೈವ ಶಿಖಾಮಣಿಯನ್ನು ಶರಣರ ಕಣ್ಮಣಿಯನ್ನು ಮಾಯೆಂಬ ಕತ್ತಲೆಯನ್ನು ಹೋಗಲಾಡಿಸುವ ದೀಪ್ತಿಯನ್ನು. ಮುಕ್ಕಣ್ಣನನ್ನು ದೀಪವನ್ನಾಗಿ ಇಟ್ಟುಕೊಂಡಿರುವ 'ವಿವೇಕ ಚಿಂತಾಮಣಿ' ಎಂಬ ಗ್ರಂಥದ ವೇದಾಂತ ಪರಿಚ್ಛೇದದ ವಿಷಯವನ್ನು ಸುಂದರವಾದ ತಮಿಳು ವೃತ್ತಶೈಲಿಯಿಂದ ಎಲ್ಲರಿಗೂ ತಿಳಿಯುವಂತೆ 'ವೇದಾಂತ ಚೂಡಾಮಣಿ' ಎಂಬ ಹೆಸರಿನಿಂದ ಪರಿಚಯ ಮಾಡಿಕೊಡುತ್ತೇನೆ.

ತಮಿಳು ಕವಿಯು ಕನ್ನಡದಲ್ಲಿ ಗದ್ಯರೂಪದಲ್ಲಿ ರಚಿತವಾಗಿರುವ ವಿವೇಕ ಚಿಂತಾಮಣಿಯ ಪ್ರಥಮ ಪರಿಚ್ಛೇದದ ಅಂಶವನ್ನು ತಮಿಳಿನಲ್ಲಿ ವೃತ್ತರೂಪದಲ್ಲಿ ರಚಿಸಿ ತನ್ನ ಭಾಷಾಂತರ ಪ್ರಜ್ಞೆಯ ಸ್ವಂತಿಕೆಯನ್ನು ತೋರ್ಪಡಿಸಿದ್ದಾನೆ.

ಭಾಷಾಂತರ ಮಾಡುವಲ್ಲಿ ತನ್ನದೇ ಆದ ರೀತಿ ನೀತಿಗಳನ್ನು ಅನುಸರಿಸಿ ಮೂಲಕ್ಕೆ ಚ್ಯುತಿಬಾರದಂತೆ ಗಮನ ಕೊಟ್ಟಿದ್ದಾನೆ.

ಕಾವ್ಯಾರಂಭದಲ್ಲಿ ವಿನಾಯಕ ಸ್ತುತಿಯಿದೆ. ಕನ್ನಡ ವಿವೇಕ ಚಿಂತಾಮಣಿಯಲ್ಲಿ ನಿಜಗುಣರು ಪ್ರಾರಂಭದಲ್ಲಿ ಶಂಭುಲಿಂಗನ ಸ್ತುತಿಯನ್ನು ಮಾಡಿದರೆ, ತಮಿಳು ವೇದಾಂತ ಚೂಡಾಮಣಿಯಲ್ಲಿ ಶಿವಪ್ರಕಾಶರು ಪ್ರಾರಂಭದಲ್ಲಿ ವಿಘ್ನನಿವಾರಕನ ಸ್ತುತಿಯನ್ನು ಮಾಡಿದ್ದಾರೆ.

ವೇದಾಂತ ಚೂಡಾಮಣಿಯೆಂಬ ಹೆಸರಿಡಲು ಕಾರಣವನ್ನು ಕವಿ ಹೀಗೆ ವಿವರಿಸಿದ್ದಾನೆ 'ಶಂಕರಾಚಾರ್ಯರು ಜೀವ, ಬ್ರಹ್ಮ, ಐಕ್ಯ ಪ್ರತಿಪಾದನೆಗಾಗಿ ಭಾಷ್ಯ ಬರೆದಿದ್ದಾರೆ. ಶಂಕರ ಭಾಷ್ಯಕ್ಕೆ, ವಿವರಣಾಚಾರ್ಯರೆಂಬುವರು ವಿವರಣೆ ವ್ಯಾಖ್ಯಾನ ಮಾಡಿದ್ದಾರೆ. ಆ ವಿವರಣೆ ವ್ಯಾಖ್ಯಾನವೇ 'ವೇದಾಂತ ಶಾಸ್ತ್ರ'. ಆ ವೇದಾಂತ ಶಾಸ್ತ್ರವನ್ನು ಈ ಪುಸ್ತಕದಲ್ಲಿ ಕ್ರಮವಾಗಿ ವಿವರಿಸಲಾಗಿದೆ. ಈ ವೇದಾಂತವನ್ನು ವೀರಶೈವಕ್ಕೆ ಅಳವಡಿಸಿರುವುದರಿಂದ ಇದಕ್ಕೆ ವೇದಾಂತ ಚೂಡಾಮಣಿ ಎಂದು ಹೆಸರು.

ಕನ್ನಡ ವಿವೇಕ ಚಿಂತಾಮಣಿಯಲ್ಲಿ ವಿಷಯಗಳ ಮುಖ್ಯಾಂಶದ ಶೀರ್ಷಿಕೆಯಡಿಯಲ್ಲಿ ವಿವರಣೆಯನ್ನು ಗದ್ಯರೂಪದಲ್ಲಿ ನೀಡಿದ್ದರೆ, ತಮಿಳಿನಲ್ಲಿ ಕವಿ ಮೂಲದ ಗದ್ಯಾಂಶಕ್ಕೆ ಭಂಗಬಾರದಂತೆ ವೃತ್ತರೂಪದಲ್ಲಿ ರಚಿಸುವ ಮಾರ್ಪಾಂತರ. ತನ್ನ ವಿಷಯಗ್ರಹಣ ಶಕ್ತಿಯನ್ನು ಕಾವ್ಯ ರೂಪದಲ್ಲಿ ಅಡಕ ಮಾಡಿ ಹೇಳುವ ಪ್ರತಿಭೆಯನ್ನು ವ್ಯಕ್ತಪಡಿಸಿದ್ದಾನೆ. ಇಷ್ಟಾದರೂ ತಮಿಳು ಕವಿ ಕನ್ನಡದ ಮೂಲಕೃತಿಗೆ ತನ್ನ ಕೃತಜ್ಞತೆ ಸಲ್ಲಿಸುವುದನ್ನು ಮರೆತಿಲ್ಲ, ವೇದಾಂತದ ವಿಷಯಗಳು ಸರ್ವರಿಗೂ ಗ್ರಾಹ್ಯವಾಗಲೆಂಬ ಉದ್ದೇಶದಿಂದ ಶಿವಪ್ರಕಾಶ ಸ್ವಾಮಿಗಳು ವೃತ್ತರೂಪದಲ್ಲಿ ತಮ್ಮ ಕೃತಿ ರಚಿಸಿರಬಹುದು. ತಮಿಳಿನಲ್ಲಿ 182 ವೃತ್ತಗಳಲ್ಲಿ ವೇದಾಂತ ಚೂಡಾಮಣಿ ರಚಿತವಾಗಿದೆ. ತಮಿಳಿನಲ್ಲಿ ರಚಿಸಿರುವ 182 ವೃತ್ತಗಳಲ್ಲಿ 18 ಅಱುಸೀರ್ ವೃತ್ತಗಳೂ, 16 ಎಟುಸೀರ್ ವೃತ್ತಗಳೂ, 148 ಎಣ್‌ಸೀರ್‌ಗಟ್ಟಿನೆಡಿಲ್ ಆಸಿರಿಯರ್ ವೃತ್ತಗಳೂ ಇವೆ.

ಕನ್ನಡ ತಮಿಳು ಕೃತಿಗಳಲ್ಲಿ ರೂಪ ಸಾಮ್ಯಗಳಲ್ಲಿ ಎಲ್ಲಿಯೂ ಭೇದ ಕಂಡುಬಂದಿಲ್ಲ. ಬಹುಶಃ ಇದು ವೇದಾಂತದ ಕೃತಿಯಾದುದರಿಂದ ಕವಿಯು ಹೆಚ್ಚು ಸ್ವಾತಂತ್ರ್ಯವಹಿಸಿ ಬದಲಾವಣೆಯನ್ನು ಮಾಡುವ ಗೋಜಿಗೆ ಹೋಗಿಲ್ಲ. ತಮಿಳು ವೇದಾಂತ ಚೂಡಾಮಣಿಯಲ್ಲಿ ಕೊನೆಯಲ್ಲಿ ಬಂದಿರುವ 'ವೇದ ಮುದಲಾದಿಯನ್ನಾ ಜಲನೈತ್ತಿನುಂ ಚೊಲ್ ಪೊರುಳ್ಳೈ ವಿಳಂಗಿಯಿಡಕ್ ಕರತಲವಾ ಮಲಗಮೆನಕ್ ಕಾಟ್ಚಿಪ್ ಬೋದಮಯಮಾಗಿಯ ಪೇರಾನಂದ ತಜಿತಟಿತ್ತುಮ್ ಪೊರುವಿಗಂದ

ಪಿನ್ನೊಲ್ಲೈ ಮುತ್ತಿಪೆ ಕಾರಿಯಸಾದನಾನ್ ಗಿಣ್ಣೈಯು ಮಡ್ರೈನ್ ದೆವರಾಸು ಮೆಸುನ್ ತಡಪ್ಪರಿಯ ಪಿಐಪಿನೋಯ್ ತಣಿಪ್ಪದನುಕ್ ಕೆಣ್ಣೆಯಾದರದಿ ನರುಟ್‌ಗುರವನ್‌ನೈ ತ್ರ್ರೀಡಿ ಯುರುಗು ವುನ್ನುಪ್ಪಡೈಯೋರ್ ತಮ್ಮೈಕ್ಕಾಣೆ ನಳಿತ್ತಿಡುಕವು ವಂದೇ' [ವೃತ್ತ–182].

'ವೇದಗಳೇ ಮೊದಲಾದ ಸಕಲ ಅಧ್ಯಾತ್ಮ ಶಾಸ್ತ್ರಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಅರ್ಥಗಳನ್ನು ಕರತಲಾಮಲಕವಾಗುವಂತೆ ತಿಳಿಸಿ, ಜ್ಞಾನರೂಪವಾಗಿರುವ, ಬ್ರಹ್ಮಾನಂದವನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿರುವ ಶ್ರೇಷ್ಠವಾಗಿರುವ ವೇದಾಂತ ಚೂಡಾಮಣಿಯೆಂಬ ಶಾಸ್ತ್ರವನ್ನು, ಮೋಕ್ಷ ಪಡೆಯಲು ತಕ್ಕುದಾದ ವಿವೇಕ, ವೈರಾಗ್ಯ, ಸಮಾಧಿಷಟ್‌ಸಂಪತ್ತಿ, ಮುಮುಕ್ಷತ್ವ ಎನ್ನುವ ಸಾಧನೆಗಳನ್ನು ಕ್ರಮವಾಗಿ ಪಡೆದು, ಯಾರಾದರೂ, ಯಾವ ಹೊತ್ತಿನಲ್ಲಾದರೂ, ನೀಗಿಸಲಾಗದ, ಭವ ವ್ಯಾಧಿಯನ್ನು ನಿವಾರಿಸಲು ಯೋಚಿಸಿ ಇಚ್ಛೆಯಿಂದ ಸಮುದ್ರದ ಅಲೆಗಳು ಭೂಮಿಯನ್ನು ಹುಡುಕಿ ಆವರಿಸುವಂತೆ ಜ್ಞಾನಾಚಾರ್ಯನನ್ನು ಹುಡುಕುತ್ತಾ, ಬೆಂಕಿಯಲ್ಲಿಟ್ಟ ಮೇಣದಂತೆ ಮನಃಕರಗುವವರೆಗೆ ಉಪದೇಶ ಮಾಡಬೇಕೆಂದು— ರಚಿಸಿದೆ ಎಂದಿದ್ದಾನೆ.

ಫಲಶ್ರುತಿ ಕನ್ನಡ ವಿವೇಕ ಚಿಂತಾಮಣಿಯಲ್ಲಿ ದಶಮ ಪರಿಚ್ಛೇದದಲ್ಲಿ ಬರುವ ಮಹಾಸಂಹಾರ ಕ್ರಮದಲ್ಲಿ

ಶ್ರೀಮದನಂತಸೂರಿಜನ ಸಮ್ಮತದಿಂದೆಸವೀ ವಿವೇಕ ಚಿಂ
ತಾಮಣಿಯೆಂಬ ಸತ್ಕೃತಿಯನಾಲಿಸಿದರ್ಗೆಡೆಗೊಂಡ ಸಂಶಯ
ಸ್ತೋಮಮಡಂಗಿ ಬೇಚಿ ಬಹುಶಾಸ್ತ್ರವನೋದುವ ಬಾಧೆ ಪಿಂಗಿ ಸ
ತ್ಪ್ರೇಮದೊಳಕ್ಕುಮಿಷ್ಟಫಲಸಿದ್ಧಿ ಸಮುನ್ನತಿ ಶಂಭುಲಿಂಗದಿಂ

ಎಂದು ಬಂದಿದೆ.

ಈ ಕೃತಿಯ ಅವಲೋಕನದಿಂದ ಶಿವಪ್ರಕಾಶಸ್ವಾಮಿಗಳು ಸುಂದರಕಾವ್ಯ ರಚನಾ ಸಾಮರ್ಥ್ಯದಲ್ಲಲ್ಲದೆ, ಜಟಿಲವಾದ ಅರ್ಥಗರ್ಭಿತವಾದ ವೇದಾಂತ ವಿಷಯಗಳನ್ನು ಸುಲಲಿತವಾದ ರೀತಿಯಲ್ಲಿ ತಿಳಿಸಬಲ್ಲ ಸಾಮರ್ಥ್ಯವನ್ನೂ ಹೊಂದಿದ್ದಾರೆ ಎಂಬ ಅಂಶ ವ್ಯಕ್ತವಾಗುವುದು.

ಸಹಾಯಕ ಗ್ರಂಥಗಳು :

1 ಕನ್ನಡ ವಿವೇಕ ಚಿಂತಾಮಣಿ–ಸಂ: ಜಿ. ಎಮ್. ಉಮಾಪತಿಶಾಸ್ತ್ರಿ, 1969.
2 ವೇದಾಂತ ಚೂಡಾಮಣಿ : ಶಿವಪ್ರಕಾಶ ಸ್ವಾಮಿಗಳ್, 1944.

ಮೈಲುಗ ಮೇಳವಾಡಿದ ಪಿಂ[ಪೆಂ] ಬೇರು ಯಾವುದು ?

ಎಂ. ಬಿ. ನೇಗಿನಹಾಳ

ಮೈಲಾರದೇವರು ಕರ್ನಾಟಕ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಪ್ರಾಚೀನ ಕಾಲದಿಂದಲೂ ಮೈಲಾರಲಿಂಗ 'ಮಲ್ಲಯ್ಯ' ಖಂಡೋಬಾ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧನಾಗಿರುವ ಜಾನಪದ ದೈವತ. ಕನ್ನಡ ಸಾಹಿತ್ಯದಲ್ಲಿ ಕ್ರಿ.ಶ. ೧೨ನೇಯ ಶತಮಾನದಿಂದಲೇ ಕಾಣಿಸಿಕೊಳ್ಳುತ್ತ ಬಂದಿರುವ ಈ ದೇವರು ಕರ್ನಾಟಕದ ಎಲ್ಲ ಮತದವರ ಲಕ್ಷ್ಯ ಸೆಳೆದಿದ್ದಾನೆ. ಹಲವು ಜನ ವಚನಕಾರರ ವಚನಗಳಲ್ಲಿ ಉಲ್ಲೇಖಿ ಗೊಂಡಿರುವಂತೆ ಬಸವಣ್ಣನವರಲ್ಲಿಯೂ ಈ ದೇವರ ಉಲ್ಲೇಖಗಳಿರುವುದನ್ನು ವಿದ್ವಾಂಸರು ಈಗಾಗಲೇ ಎತ್ತಿ ತೋರಿಸಿದ್ದಾರೆ.[1] ಬಸವಣ್ಣನವರ ವಚನಗಳಲ್ಲಿ 'ಮೈಲಾರ' ಎಂದು ಕೆಲವೆಡೆಯಲ್ಲಿ ಹೆಸರಿಸಿದ್ದರೆ ಒಂದೆಡೆಯಲ್ಲಿ ಮಾತ್ರ 'ಮೈಲುಗ' ಎಂದು ಪ್ರಯೋಗವಿರುವುದು ಕಂಡುಬರುತ್ತದೆ. ಉದಾ :

ಅಸಮಾಕ್ಷಲಿಂಗಕ್ಕೆ ಅನ್ಯದೈವವ ಸರಿಯೆಂಬನ ಬಾಯಲ್ಲಿ
ಮಸೆದ ಕೂರಲಗಸಿಕ್ಕದೆ ಮಾಣ್ಬನೆ ?
ಹುಸಿಯಾಗಿ ನುಡಿವವನ ನಾಯಾಗಿ ಬಗುಳಿಸನೆ ?
ಹಿರಿಯರುತ್ತಮರೆನ್ನದವರ ಕುದುರೆಯಾಗಿ ಕಟ್ಟಿಸನೆ ?
ಗುರು ಲಘುವೆಂಬವರ ಬಾಯಲ್ಲಿ ಮೆಟ್ಟ ಹುಡಿಹೊಯ್ಯದೆ ಮಾಣ್ಬನೆ ?
ಪರಸ್ತ್ರೀಗಳ ಪಿಡಿದವರ ಓಡಿಕಂಡಗೊಯ್ಯನೆ ?
ಕೂಡಲ ಸಂಗಮದೇವಾ ನಿಮ್ಮ ಹೇಳಿದ ಹೇಳಿಕೆಯಿಂದ
ಪಿಂಬೇರ ಮೈಲಿಗೆ ಮೇಳವಾಡುತ್ತಿದ್ದ ಕಾಣಾ ತ್ರೈಜಗದೊಳಗೆ[2].

ಇಲ್ಲಿನ 'ಪಿಂಬೇರ ಮೈಲಿಗೆ' ಎಂಬುದು ಅಪಪಾಠವಾಗಿದ್ದು 'ಪಿಂಜೇರ ಮೈಲುಗ' ಎಂಬುದು ಅದರ ಸರಿಯಾದ ಪಾಠವೆಂದು ಡಾ|| ಪಿ. ಬಿ. ದೇಸಾಯಿ ಯವರು ತಮ್ಮದೊಂದು ಲೇಖನದಲ್ಲಿ ನಿರ್ಧರಿಸಿದ್ದಾರೆ.[3]

ಇದೇ ರೀತಿ ಪಿಂಬೇರಿನ ಮೈಲಾರದೇವರ ಉಲ್ಲೇಖ ಹಲವು ಕಡೆಗೆ ಬರು ತ್ತಿದ್ದು ಅವುಗಳಲ್ಲಿ ಹರಿಹರನ ಶಂಕರದಾಸಿಮಯ್ಯನ ರಗಳೆ ಮತ್ತು ಮಲ್ಲಿಕಾರ್ಜುನ ಕವಿಯ (ಕ್ರಿ.ಶ. ೧೭೦೦) ಶಂಕರದಾಸಿಮಯ್ಯನ ಪುರಾಣಗಳು ಉಲ್ಲೇಖನೀಯ ವಾದವುಗಳು. ಹರಿಹರ ಮತ್ತು ಮಲ್ಲಿಕಾರ್ಜುನರಿಬ್ಬರೂ ಮೈಲಾರನು

ಶಂಕರದಾಸಿಮಯ್ಯನಿಗೆ ಕೊಡೆ ಹಿಡಿದು ಅವನ ಸೇವೆ ಮಾಡಿದನೆಂದು ತಮ್ಮ ಕೃತಿಗಳಲ್ಲಿ ಹೇಳಿರುವುದನ್ನು ಆಧಾರವಾಗಿಟ್ಟುಕೊಂಡು ಶ್ರೀ ಹಾಲಬಾವಿಯವರು ಸಾತಾರಾಜಿಲ್ಲೆಯ ತರಲಾನದಿ (ಇದರ ಸರಿಯಾದ ಹೆಸರು ತಾರಳಿನದಿ)ಯ ದಡದ ಮೇಲಿನ 'ಪಾಲಿ' ಎಂಬ ಊರಿನ ಖಂಡೋಬಾ (ಮೈಲಾರಲಿಂಗ) ದೇವರ ಕ್ಷೇತ್ರವೇ ಇದೆಂದು ಭಾವಿಸಿದ್ದಾರೆ.[4] ಅವನ್ನೇ ಡಾ॥ ಎಂ. ಚಿದಾನಂದಮೂರ್ತಿಯವರು ತಮ್ಮದೊಂದು ಲೇಖನದಲ್ಲಿ ಸೂಚಿಸಿದ್ದಾರೆ.[5] ಶ್ರೀ ಹಾಲಬಾವಿಯವರ ಈ ಊಹೆ ಪ್ರಬಲವಾದುದಲ್ಲವಾದ ಕಾರಣ ಪ್ರಸ್ತುತ ಲೇಖನದಲ್ಲಿ ಹಿಂಬೇರ ಕ್ಷೇತ್ರ ಎಂದರು ಯಾವುದು ಎಂಬುದನ್ನು ನಿರ್ಧರಿಸಲು ಪ್ರಯತ್ನಿಸಲಾಗುವುದು.

ಶಂಕರದಾಸಿಮಯ್ಯನು ಸೂಜಿ ಕಾಯಕದವನಾಗಿದ್ದು ಅವನ ಊರು ಕಂದಶಿಲೆ ಅಥವಾ ಕಂದಗಲ್ಲು (ಹುನಗುಂದ ತಾ. ವಿಜಾಪುರ ಜಿಲ್ಲೆ) ಎಂದೂ ಅವನ ಆರಾಧ್ಯ ದೈವ ಪ್ರಸ್ತುತ ಕಂದಗಲ್ಲಿನಿಂದ ಪೂರ್ವಕ್ಕೆ ೧೨ ಮೈ. ಅಂತರದಲ್ಲಿ ಕೃಷ್ಣಾತೀರದಲ್ಲಿರುವ ನವಿಲೆ (ಲಿಂಗಸೂರು ತಾ. ರಾಯಚೂರು ಜಿ.)ಯ ಜಡೆಯ ಶಂಕರಲಿಂಗವೆಂಬ ಸ್ಥಾವರಲಿಂಗವೆಂದೂ ತಿಳಿದು ಬರುತ್ತದೆ.[6] ಶಂಕರದಾಸಿಮಯ್ಯನುಜಡೆಯ ಶಂಕರನ ವರಪ್ರಸಾದದಿಂದ ಉರಿಗಣ್ಣು ಪಡೆದು ಕಲ್ಯಾಣಕ್ಕೆ ಹೋದನು. ಅಲ್ಲಿ ತನ್ನ ಉರಿಗಣ್ಣಿನಿಂದ ನರಸಿಂಹನ ವಿಗ್ರಹ ಸುಟ್ಟುಹಾಕಿದನು. ಬರುತ್ತ ದಾರಿಯಲ್ಲಿ ಹೆಂ(ಪೆಂ) ಬೇಜಿನಲ್ಲಿದ್ದ ಮೈಲಾರ ದೇವಸ್ಥಾನದಲ್ಲಿ ತಂಗಿದ್ದು ಅಲ್ಲಿ ಮೈಲಾರದೇವರಿಗೆ ಭಕ್ತರು ಅರ್ಪಿಸುತ್ತಿದ್ದ ಸೇವಾ ಪರಿಕರಗಳನ್ನು ತಾನೇ ಸ್ವೀಕರಿಸಿ ಆತನು ತನ್ನೆಂಜಲನ್ನು ತಿನ್ನುವಂತೆಮಾಡಿ ಅವನಿಂದಲೇ ತನಗೆ ಕೊಡೆ ಹಿಡಿಸಿಕೊಂಡನು. ತರುವಾಯ ಅಲ್ಲಿಯ ಜನರ ಇಚ್ಛೆಯಂತೆ ಮೈಲಾರನನ್ನು ಅಲ್ಲಿಯೆ ಉಳಿಸಿ ಅವನ ಅಪೇಕ್ಷೆಯಂತೆ ಕೊಡೆಯನ್ನಿತ್ತು ಮುಂದೆ ಸಾಗಿದನು. ಅಲ್ಲಿಂದ ಮುಂದೆ 'ಶಿವಭಾರ'ದಲ್ಲಿದ್ದ ಭೈರವನಿಂದ ವಂದಿಸಿಕೊಂಡು ನವಿಲೆಗೆ ಹಿಂತಿರುಗಿ ಬಂದನು[7].

ರಗಳೆಯಲ್ಲಿ ಹೇಳಿರುವ ಈ ಮಾರ್ಗದಲ್ಲಿ ಶಂಕರದಾಸಿಮಯ್ಯನು ಪ್ರಯಾಣ ಮಾಡಿರಲಿ ಅಥವಾ ಮಾಡದೆ ಇರಲಿ[8], ಆದರೆ ಕವಿ ಹರಿಹರನ ವಿಚಾರದಲ್ಲಿ ಪೆಂ(ಹೆಂ) ಬೇರು ಪಟ್ಟಣವು ಕಲ್ಯಾಣ ಮತ್ತು ನವಿಲೆಗಳ ಮಧ್ಯದಲ್ಲಿ ಇತ್ತೆಂಬುದಾಗಿ ಸ್ಪಷ್ಟ ಪಡುತ್ತದೆ. ಈ ಕಾರಣ ಶ್ರೀ ಹಾಲಬಾವಿಯವರು ಪೆಂಬೇರೆಂದು ಊಹಿಸಿರುವ ಪಾಲಕ್ಷೇತ್ರವು ನಿಜವಾದ ಪೆಂಬೇರಲ್ಲೆಂದು ಹೇಳಬೇಕಾಗುತ್ತದೆ.[9] ಪಾಲಕ್ಷೇತ್ರವಾದರೋ ಕಲ್ಯಾಣದ ಪಶ್ಚಿಮ ದಿಕ್ಕಿಗೆ ಸಹ್ಯಾದ್ರಿಯ ಸಾಲಿನಲ್ಲಿ ಬರುತ್ತದೆ. ಅದು ಈಗಿನ ರಾಷ್ಟ್ರೀಯ ಹೆದ್ದಾರಿ ನಂ. ೪ರ ಸಮೀಪ ಕರಾಡ ಮತ್ತು ಸಾತಾರೆಗಳ ನಡುವೆ, ಸಾತಾರೆಯಿಂದ ದಕ್ಷಿಣಕ್ಕೆ ಸು. 15 ಮೈಲುಗಳ ಅಂತರದಲ್ಲಿದೆ. ಚಾಲುಕ್ಯ ಸಮ್ರಾಟ ಜಯಸಿಂಹನು ಇದ್ದ(?) ಕಲ್ಯಾಣ ನಗರವು ಪ್ರಸ್ತುತ ಪಾಲಕ್ಷೇತ್ರದಿಂದ ಕನಿಷ್ಟ ೪೦೦ ಕಿಲೋಮೀಟರು ದೂರವಾದರೂ ಆದೀತು. ರಗಳೆಯಲ್ಲಿನ ಸಂದರ್ಭ

ದಲ್ಲಿ ಶಂಕರದಾಸಿಮಯ್ಯ ಕಲ್ಯಾಣದಿಂದ ನವಿಲೆಗೆ ಬರುವಾಗ ಅಷ್ಟು ದೂರ ಪಶ್ಚಿಮಕ್ಕೆ ಹೋದನೆಂದು ಊಹಿಸುವುದು ತೀರ ಅಸಂಮಂಜಸವೆನಿಸುತ್ತದೆ. ಆದ್ದರಿಂದ ಕಲ್ಯಾಣ–ನವಿಲೆಗಳ ನಡುವೆ ಎಲ್ಲಿಯೋ ಒಂದೆಡೆ 'ಲೋಕವರ್ಚಿಸುವ ಮೈಲಾರನ' ಪ್ರಸಿದ್ಧ ಕ್ಷೇತ್ರವೊಂದು ಬಸವಣ್ಣ-ಹರಿಹರನ ಕಾಲದಲ್ಲಿ ಇದ್ದಿರಬೇಕು. ಮತ್ತು ಆದು ಪೆಂ(ಹೆಂ) ಬೇಜು ಎಂದು ಹೆಸರಾಗಿರಬೇಕು.

ಪ್ರಾಚೀನ ಕಾಲದಲ್ಲಿ ಮೈಲಾರಲಿಂಗ ಬಹು ಜನಪ್ರಿಯನಾಗಿದ್ದ ದೇವರೆಂಬುದಂತೂ ಸ್ಪಷ್ಟವಿದೆ. ನಾನು ಒಂದೆಡೆಯಲ್ಲಿ[10] ಈಗಾಗಲೇ ಪ್ರಸ್ತಾಪಿಸಿರುವಂತೆ ಹನ್ನೊಂದನೆಯ ಶತಮಾನದ ವೇಳೆಗಾಗಲೇ ಈಗಿನ ಹೈದರಾಬಾದ ಪ್ರದೇಶದಿಂದ ದಕ್ಷಿಣದ ತುಂಗಭದ್ರೆಯವರೆಗಿನ ಪ್ರದೇಶದಲ್ಲಿ ಮೈಲಾರದೇವರು ಪೂಜೆಗೊಳ್ಳುತ್ತಿದ್ದ. ಹಲವು ಜನ ವಚನಕಾರರೂ, ನಯಸೇನ–ಬ್ರಹ್ಮಶಿವರಂಥ ಜೈನಮತ ಪ್ರತಿಪಾದಕರೂ ಮೈಲಾರ ಮಾಳಜಿಯರನ್ನು ಪದೇ ಪದೇ ಉಲ್ಲೇಖಿಸುವುದನ್ನು ನೋಡಿದರೆ ಈ ಮಾತು ಸ್ಪಷ್ಟವಾಗುತ್ತದೆ. ಆದುದರಿಂದ ಆ ಕಾಲಕ್ಕಾಗಲೇ ಈ ವಿಸ್ತಾರವಾದ ಪ್ರದೇಶದಲ್ಲಿ ಮೈಲಾರ ದೇವರ ಹಲವಾರು ದೇವಾಲಯಗಳು ಇದ್ದಿರಬೇಕು. ಈಗಂತೂ ಇವೆ.

ಒಟ್ಟು ಕರ್ನಾಟಕದಲ್ಲಿ ಮೈಲಾರಲಿಂಗ ದೇವಸ್ಥಾನಗಳ ಸಂಖ್ಯೆ ಸು. 500ರಷ್ಟು ಆಗಬಹುದು. ಆದರೆ ಅವೆಲ್ಲವೂ ಮಹತ್ವದುವಲ್ಲ. ಭಕ್ತರಿಗೆ ಅತ್ಯಂತ ಪೂಜನೀಯವೆನಿಸಿ ಜಾಗೃತ ಸ್ಥಾನಗಳಾಗಿ ಪ್ರಸಿದ್ಧವಾಗಿರುವ ಕ್ಷೇತ್ರಗಳು ಕೆಲವು ಮಾತ್ರ ಇವೆ. ಉಳಿದವು ಪ್ರಾತಿನಿಧಿಕ ದೇವಾಲಯಗಳು ಮಾತ್ರ. ಪ್ರಸಿದ್ಧ ಕ್ಷೇತ್ರಗಳು ಮತ್ತು ಪಾತಿನಿಧಿಕ ದೇವಾಲಯಗಳಲ್ಲಿ (ಈಗ) ಕಂಡುಬರುವ ಒಂದು ಪ್ರಮುಖ ವ್ಯತ್ಯಾಸವನ್ನು ಇಲ್ಲಿ ಹೇಳಬೇಕು. ಮೈಲಾರಲಿಂಗನ ದೇವಾಲಯಗಳ ಪೈಕಿ ಕೆಲವರಲ್ಲಿ ಮಾತ್ರ ಸ್ವಯಂಭೂ ಲಿಂಗಗಳಿವೆ. ಹಾಗೆ ಸ್ವಯಂಭೂ ಲಿಂಗಗಳಿರುವ ದೇವಾಲಯಗಳು ಜನಾಕರ್ಷಣೆಯ ಕೇಂದ್ರಗಳಾಗಿದ್ದು ಅಲ್ಲಿ ಭಾರಿ ಜನಸ್ತೋಮ ಸೇರಿ ಜಾತ್ರೆ ನಡೆಸುವುದು, ಹರಕೆ–ತೀರಿಸುವುದು ಮುಂತಾದ ಕಾರ್ಯಕ್ರಮಗಳು ಜರುಗುತ್ತವೆ. ಕಾರಣ ಅಂಥ ಒಂದು ಯಾವುದೋ ಕ್ಷೇತ್ರ ನವಿಲೆ ಮತ್ತು ಕಲ್ಯಾಣಗಳ ನಡುವೆ ಅಂದು ಇದ್ದಿರಬೇಕು.

ಸದ್ಯ ಕೃಷ್ಣಾತೀರದ ನವಿಲೆ ಮತ್ತು ಕಲ್ಯಾಣಗಳ ನಡುವೆ (ಕರ್ನಾಟಕದ ಭಾಗದಲ್ಲಿ) ಮೈಲಾರಲಿಂಗನ ಸ್ವಯಂಭೂ ಲಿಂಗಗಳಿರುವ ಕ್ಷೇತ್ರಗಳು ನನಗೆ ತಿಳಿದಿರುವಂತೆ ಇವು : (1) ಮಂಗಸೂಳಿಯ ಮಲ್ಲಯ್ಯ (ಅಥಣಿ ತಾ., ಬೆಳಗಾವಿ ಜಿ.) (2) ದೇವರ ಹಿಪ್ಪರಿಗೆಯ ಮಲ್ಲಯ್ಯ ಅಥವಾ ರಾವುತರಾಯ (ಸಿಂದಗಿ ತಾ., ವಿಜಾಪುರ ಜಿ.) (3) ಯಾತಗಿರಿ–ಮೈಲಾಪುರ ಮಲ್ಲಯ್ಯ (ಯಾದಗೀರ ತಾ.,

ಕಲಬುರ್ಗಿ ಜಿ). (4) ಪ್ರೇಮಪುರ–ಮೈಲಾರ ಅಥವಾ ಭೂತಮೈಲಾರ (ಭಾಲ್ಕಿ ತಾ., ಬೀದರ ಜಿ.) ಈ ನಾಲ್ಕು ಕ್ಷೇತ್ರಗಳು ಬಹು ಪ್ರಸಿದ್ಧವಾಗಿದ್ದು ಇಲ್ಲೆಲ್ಲ ದೊಡ್ಡ ಪ್ರಮಾಣದ ಜಾತ್ರೆಗಳು ನಡೆಯುತ್ತವೆ. ಆದರೆ ಇವುಗಳಲ್ಲಿ ಬೀದರ ಜಿಲ್ಲೆಯ ಮೈಲಾರ ಕ್ಷೇತ್ರವು ತುಂಬ ಗಮನಾರ್ಹವಾದುದು. ಅದನ್ನು ಈಗಲೂ ಪ್ರೇಮಪುರ, ಮೈಲಾರ, ದಕ್ಷಿಣ ಕಾಶಿ, ಪ್ರೇಮಪುರ-ಮೈಲಾರ, ಭೂತ-ಮೈಲಾರ ಮುಂತಾದ ಹೆಸರುಗಳಿಂದ ಕರೆಯುವರಲ್ಲದೆ ಮಹಾರಾಷ್ಟ್ರದ ಭಕ್ತರು ಈಗಲೂ ಇದನ್ನು 'ಪೇಂಬರ' ಎಂದು ಹೇಳುತ್ತಾರೆ. ಅಲ್ಲದೆ ಇಡೀ ಮಹಾರಾಷ್ಟ್ರದಲ್ಲಿ ಈ 'ಪೇಂಬರ ಕ್ಷೇತ್ರ'ವೇ ಖಂಡೋಬಾ (ಮೈಲಾರಲಿಂಗ) ನ ಮೂಲಪೀಠವೆಂದು ನಂಬುತ್ತಾರೆ. ಈ ನಂಬಿಕೆಯನ್ನು ಸಮರ್ಥಿಸುವಂತೆ ಮರಾಠಿಯಲ್ಲಿ ಹುಲುಸಾದ ಸಾಹಿತ್ಯಿಕ ಸಾಮಗ್ರಿ ಉಪಲಬ್ಧವಾಗಿದೆ. ಹದಿನಾರನೆಯ ಶತಮಾನದ ಆದಿಭಾಗದಲ್ಲಿ ರಚಿತವಾದ ಮರಾಠಿ 'ಮಲ್ಲಾರಿ ಮಹಾತ್ಮೆ' ಮತ್ತು ಅದರ ಮೂಲ ಆಕರವಾದ ಸಂಸ್ಕೃತ 'ಮಲ್ಲಾರಿಮಹಾತ್ಮೆ'ಗಳಲ್ಲಿ ಮೈಲಾರ-ಖಂಡೋಬಾನ ಮೂಲಪೀಠ ಪ್ರೇಮಪುರವೆಂದು ಹೇಳಲಾಗಿದ್ದು ಆ ಪ್ರೇಮಪುರವೆಂದರೆ 'ಪೇಂಬರ'ವೇ ಎಂತಲೂ ಅದು (ಬೀದರ ಜಿಲ್ಲೆಯ) ಇದೇ ದೇವಸ್ಥಾನವೆಂತಲೂ ತಿಳಿದುಬರುತ್ತದೆ.[10ಅ] ಪ್ರಸ್ತುತ ದೇವಾಲಯದ ಪರಿಸರವನ್ನು ನಿರೀಕ್ಷಿಸಿದರೆ ಅದು ಬಹು ಪುರಾತನವಾದ ದೇವಾಲಯವೆಂಬುದು ಸ್ಪಷ್ಟಪಡುತ್ತದೆ. ಈ ಸ್ಥಳವಾಚಕಕ್ಕೆ ಮರಾಠಿಯಲ್ಲಿ ಪೇಂಬರ, ಪೇಮರ, ಪೇಮರಿ ಎಂಬಿತ್ಯಾದಿ ಪರ್ಯಾಯಗಳು ಈಗಲೂ ಪ್ರಚಾರದಲ್ಲಿವೆ. ಪೇಂಬರ ಎಂಬುದು ಹಳಗನ್ನಡದ ಪೆಂಬೇಱು ಎಂಬುದರ ಇನ್ನೊಂದು ರೂಪವೇ ಎಂಬುದರಲ್ಲಿ ಅನುಮಾನವಿಲ್ಲ. ಇವನ್ನೇ ಸಂಸ್ಕೃತೀಕರಣಗೊಳಿಸಿ 'ಪ್ರೇಮಪುರ' ಎಂದು ಮಾಡಿಕೊಂಡಿದ್ದಾರೆ. ಈ ಪ್ರವೃತ್ತಿ ನಮ್ಮಲ್ಲಿ ತೀರ ಸಾಮಾನ್ಯವೆಂದು ಬೇರೆ ಹೇಳಬೇಕಿಲ್ಲ. ಆದ್ದರಿಂದ ಬಸವಣ್ಣ, ಹರಿಹರ ಮತ್ತು ಮಲ್ಲಿಕಾರ್ಜುನ ಕವಿ ಇವರು ಹೇಳುವ ಪೆಂ(ಹೆಂ)ಬೇಱೆಂದರೆ ಬೀದರ ಜಿಲ್ಲೆಯ ಈ ಕ್ಷೇತ್ರವೆಂದೇ ತಿಳಿಯಬೇಕು.

ಇಲ್ಲಿ ಶ್ರೀಹಾಲಬಾವಿಯವರು ಹೇಳಿರುವ ಒಂದೆರಡು ಸಂಗತಿಗಳನ್ನು ಕುರಿತು ವಿವರಿಸುವುದು ಆವಶ್ಯಕವೆಂದು ಕಾಣುತ್ತದೆ. ಅವರು ಕರಾಡ ಸಮೀಪದ ಪಾಲ ಅಥವಾ ಪಾಲಿಕ್ಷೇತ್ರಕ್ಕೆ ಪೇಲಂಬರ ಎಂದು ಹೆಸರಿರುವುದನ್ನು ಸೂಚಿಸಿದ್ದಾರೆ.[11] ಆ ಭಾಗದ ಜನ ಆ ಕ್ಷೇತ್ರವನ್ನು ಪಾಲಿ–ಪೇಂಬರ ಎಂದು ಕರೆಯುವುದನ್ನು ಅವರೇ ತಿಳಿಸುತ್ತಾರೆ. ಹಾಗೆ ಆ ಕ್ಷೇತ್ರ ಪಾಲಿ–ಪೇಂಬರ ಎಂದಾಗಲು ಪೇಂಬರ (ಪ್ರೇಮಪುರ)ದ ದೇವರು ಪಾಲಿಯಲ್ಲಿ ಪ್ರಕಟಗೊಂಡದ್ದೇ ಕಾರಣ. ಪಾಲಿಯ ಗೌಳಿಗಿತ್ತಿಯೊಬ್ಬಳ[12] ಭಕ್ತಿಗೆ ಮೆಚ್ಚಿ ಮೈಲಾರಲಿಂಗನು ಸ್ವಯಂಭೂಲಿಂಗರೂಪದಲ್ಲಿ ಆ ಕ್ಷೇತ್ರದಲ್ಲಿ ಪ್ರಕಟವಾದನಂತೆ. ಈ ನಂಬಿಕೆ ಇಡಿ ಮಹಾರಾಷ್ಟ್ರದಲ್ಲಿ ಪ್ರಚಲಿತವಾಗಿದೆ.[13]

ಖಂಡೋಬಾ ಕ್ಷೇತ್ರಗಳು ಮಹಾರಾಷ್ಟ್ರದಲ್ಲಿ ಸ್ಥಾಪಿತವಾದ ಕ್ರಮವನ್ನು ಕೂಡ ಅಲ್ಲಿನ ಜನ ಹೇಳುತ್ತಾರೆ. ಆ ಕ್ರಮ ಹೀಗಿದೆಯಂತೆ ; ಪ್ರೇಮಪುರ (ಪೇಂಬರ)ದಿಂದ ಮೊದಲು ದೇವರು ಪಾಲಿಗಾಂವಕ್ಕೆ ಹೋಗಿ ನೆಲಸಿದನು. ಇದು ನಾಂದೇಡ ಜಿಲ್ಲೆಯಲ್ಲಿದೆ. ಅಲ್ಲಿಂದ ಉಸ್ಮಾನಾಬಾದ ಜಿಲ್ಲೆಯ ನಳದುರ್ಗಕ್ಕೆ ಹೋದನು. ತರುವಾಯ ಸಾತಾರಾ ಜಿಲ್ಲೆಯ ಪಾಲಿಗೂ ತದನಂತರ ಜೆಜೂರಿ, (ಪುಣೆಜಿಲ್ಲೆ)ಗೂ ಹೋದನು. ಇದು ಬೀದರ–ಮೈಲಾರದಲ್ಲಿರುವ ಸ್ಥಾನಿಕರು ನನಗೆ ಹೇಳಿದ ಕ್ರಮ. ಆದರೆ ರಾ. ಬೆಂ. ಢೇರೆ ಎಂಬ ವಿದ್ವಾಂಸರು ಸ್ವಲ್ಪ ಬೇರೆಯಾದ ರೀತಿಯಲ್ಲಿ ಈ ಕ್ರಮವನ್ನು ಹೇಳಿದ್ದಾರೆ.[14] ಅವರ ಪ್ರಕಾರ ಪ್ರೇಮಪುರ (ಪೇಂಬರ) > ಪಾಲಿ > ನಳದುರ್ಗ > ಜೆಜೂರಿ ಈ ಕ್ರಮದಲ್ಲಿ ದೇವಾಲಯಗಳು ನಿರ್ಮಾಣಗೊಂಡವು. ಮಹಾರಾಷ್ಟ್ರದಲ್ಲಿ ಈ ನಂಬಿಕೆ ಸಾರ್ವತ್ರಿಕವಾಗಿದೆಯಂತೆ. ಒಟ್ಟಿನಲ್ಲಿ ಹೇಳಬೇಕೆಂದರೆ ಬೀದರ ಜಿಲ್ಲೆಯ ಪ್ರೇಮಪುರವೇ ಮೂಲ ಪೇಂಬರ ಎಂಬುದು ಮಹಾರಾಷ್ಟ್ರದಲ್ಲಿ ನಿರ್ವಿವಾದ ವಿಷಯವಾಗಿದೆ. ಈ ಕಾರಣದಿಂದಲೇ ಪಾಲಿಗೆ 'ಪಾಲಿ – ಪೇಂಬರ' ಎಂದು ಹೆಸರುಂಟಾದುದು. ಎಂದರೆ ಅದು ಮತ್ತೊಂದು ಪೇಂಬರವಾಯಿತು.

ಎರಡನೆಯದಾಗಿ ಪಾಲಿಯ ದೇವಾಲಯದ ಸ್ವಯಂಭೂಲಿಂಗದ ಮೇಲೆ ಆಚ್ಛಾದಿಸಿರುವ ಹಿತ್ತಾಳಿಯ ಮುಖವಾಡದಲ್ಲಿನ ಪ್ರಭಾವಳಿಯಲ್ಲಿ ಕೊಡೆಯೊಂದು ಇರುವ ವಿಷಯ.[15] ಶಂಕರದಾಸಿಮಯ್ಯನು ಮೈಲಾರನಿಂದ ಕೊಡೆ ಹಿಡಿಸಿಕೊಂಡು ತರುವಾಯ ಅದೇ ಕೊಡೆಯನ್ನು ಅವನ ಅಪೇಕ್ಷೆಯಂತೆ ಅವನಿಗೇ ಹಿಂತಿರುಗಿ ಕೊಟ್ಟನೆಂದು ರಗಳೆ ಮತ್ತು ಪುರಾಣಗಳಲ್ಲಿ ವರ್ಣನೆ ಬಂದಿರುವ ಹಿನ್ನೆಲೆಯಲ್ಲಿ ಈ ಪ್ರಭಾವಳಿಯಲ್ಲಿನ ಕೊಡೆಗೆ ಅವರು ಮಹತ್ವವಿತ್ತಿದ್ದಾರೆ. ಶ್ರೀ ಹಾಲಬಾವಿಯವರು ನೋಡಿದಾಗ ಪಾಲಿ ದೇವಾಲಯದ ಕೊಡೆ ಇದ್ದುದು ಹಾಗೂ ಈಗಲೂ ಅದು ಇರುವುದು ನಿಜ ಸಂಗತಿಯಾದರೂ ಅದು ತೀರ ಚಿಕ್ಕದಾಗಿದೆ. ಅದೇ ರೀತಿ ಅಲ್ಲಿನ ಒಟ್ಟು ಪರಿಸರದಲ್ಲಿ ಆ ಕೊಡೆ ನಗಣ್ಯವಾಗಿದೆ. ಕಾರಣ ರಗಳೆ (ಮತ್ತು ಪುರಾಣ)ಯಲ್ಲಿ ಹೇಳಿರುವ ಕೊಡೆಗೂ ಈ ಕೊಡೆಗೂ ಸಂಬಂಧ ಕಲ್ಪಿಸುವುದು ಅನಗತ್ಯವೆಂದೇ ಹೇಳಬೇಕು.

ಒಟ್ಟು ಮೈಲಾರಲಿಂಗನ ಸಂಪ್ರದಾಯ ಮತ್ತು ಕುರುಬ ಜನಾಂಗದ ಸಂಪ್ರದಾಯಗಳಲ್ಲಿ ಕೆಲವೊಂದು ವಸ್ತುಗಳಿಗೆ ವಿಶೇಷ ಮಹತ್ವವಿರುವುದು ಕಂಡುಬರುತ್ತದೆ. ಅವುಗಳಲ್ಲಿ ಕೊಡೆ ಅಥವಾ 'ಸತ್ತಿಗೆ'ಯೂ ಒಂದು. ಕುರುಬರ ದೇವರುಗಳಾದ ಬೀರ, ಕರಿಸಿದ್ಧ, ಇಟ್ಟಪ್ಪ ಮೊದಲಾದ ದೇವರುಗಳಿಗ 'ಸತ್ತಿಗೆ' ಎಂದು ಕರೆಯಲಾಗುವ ದೊಡ್ಡ ಕೊಡೆಯೊಂದು ಇದ್ದೇ ಇರುತ್ತದೆ. ಹಾಗೂ ಆ ಜನಾಂಗದ ಜನರು ತಮ್ಮ ಲಗ್ನ ಮುಂತಾದ ಮುಖ್ಯ ಕಾರ್ಯಗಳನ್ನು ಆ ಸತ್ತಿಗೆಯ ನೆರಳಿನಲ್ಲಿಯೇ

ನೆರವೇರಿಸುವ ಪದ್ಧತಿ ಈಗಲೂ ರೂಢಿಯಲ್ಲಿದೆ. ಮೈಲಾರ ದೇವರ ಸಂಪ್ರದಾಯದಲ್ಲಿ ಕೂಡ ಕೊಡೆಗೆ ವಿಶೇಷ ಮಹತ್ವವಿದೆ. ಮೈಲಾರಲಿಂಗನ ಮುಖ್ಯ ಕ್ಷೇತ್ರಗಳಾದ ಹಿರೇ ಮೈಲಾರ (ಬಳ್ಳಾರಿ ಜಿಲ್ಲೆ) ದೇವರಗುಡ್ಡ (ಧಾರವಾಡ ಜಿಲ್ಲೆ) ಹಾಗೂ ಬೀದರ ಮೈಲಾರಗಳಲ್ಲಿ ಈಗಲೂ ಪ್ರತ್ಯೇಕ ಕೊಡೆಗಳ ಉಪಯೋಗವಿದ್ದು ಆಯಾ ದೇವಾಲಯಗಳ ಸ್ಥಾನಿಕರು ದೇವಾಲಯಕ್ಕೆ ಸಂಬಂಧಿಸಿದಂತೆ ಅಧಿಕೃತವಾದ ಪೂಜಾವ ಆಚರಣೆ ನೆರವೇರಿಸಿದರೂ ಕುದುರೆಯೊಂದರ ಮೂರ್ತಿ[16] ಮತ್ತು ಕೊಡೆಯ ಸಾನ್ನಿಧ್ಯದಲ್ಲಿಯೇ ನೆರವೇರಿಸುತ್ತಾರೆ. ಗೊರವಪ್ಪ–ಗೊರವಮ್ಮ ಮೊದಲಾದವರ ದೀಕ್ಷೆ, ಬೇರೆ ರೀತಿಯ ಹೊರೆ ಹೊರಿಸುವುದು, ಭಕ್ತರ ಮಕ್ಕಳ ಜವಳ ತೆಗೆಯುವುದು ಭಂಡಾರ ಭಟ್ಟಿಯಲ್ಲಿ ಭಂಡಾರ ಹಂಚುವುದು, ಕಾರಣಿಕ ಹೇಳುವುದು ಮುಂತಾದ ಪ್ರಮುಖ ಆಚರಣೆಗಳೆಲ್ಲವೂ ಆ ಕೊಡೆಯ ನೆರವಿನಿಂದಲೇ ನಡೆಯಬೇಕು. ಕುರುಬ ಜನಾಂಗಕ್ಕೆ ಮಾತ್ರ ಸೀಮಿತವಾಗಿರುವ ಬೀರ, ಕರಿಸಿದ್ಧ ಮೊದಲಾದ ದೇವರುಗಳಿಗೂ ಕೊಡೆ ಅವಶ್ಯವಾಗಿರುವಂತೆ ಡೊಳ್ಳಿನ ಪ್ರತಿಯೊಂದು ವಾಲಗದಲ್ಲಿ ಕೊಡೆಯೊಂದು ಇದ್ದೇ ಇರುತ್ತದೆ. ಇದನ್ನೆಲ್ಲ ನೋಡಿದಾಗ ಶಂಕರದಾಸಿಮಯ್ಯನಂಥ ವರು ಕೊಟ್ಟದ್ದರಿಂದಲೇ ಮೈಲಾರ ದೇವರಿಗೆ ಕೊಡೆಯುಂಟಾಯಿತೆಂದು ಭಾವಿಸುವ ಅವಶ್ಯಕತೆ ಉಳಿಯುವುದಿಲ್ಲ. ಈ ಕಲ್ಪನೆಗೆ ಮೂಲವಾಗಿರುವಂತೆ ತೋರುವ ಬಸವಣ್ಣನವರ ವಚನದಲ್ಲಿಯೂ ಕೊಡೆಯ ಸ್ಪಷ್ಟ ಉಲ್ಲೇಖವಿಲ್ಲ. ಆ ಸಂಪ್ರದಾಯದಲ್ಲಿ ಕೊಡೆ ಪ್ರಮುಖ ಪಾತ್ರ ವಹಿಸುತಿದ್ದುದನ್ನು ಕಂಡ ಹರಿಹರನಂಥ ಕವಿಗಳು ಹಾಗೆ ಚಿತ್ರಿಸಿದ್ದಾರಷ್ಟೆ. "ಶಂಕರ ದಾಸಿಮಯ್ಯ ಶಿವನ ಅವತಾರವೆಂದು ಜನರು ನಂಬಿದ್ದರಿಂದ ಪಿಂಬೇರಿನ ಮೈಲಾರ ಶಂಕರದಾಸಿಮಯ್ಯನಿಗೇ ಕೊಡೆ ಹಿಡಿದು ಊಳಿಗವನ್ನೆಸಗಿದ ಎಂಬ ಕತೆ ಕಲ್ಪಿತವಾಯಿತು" ಎಂದಿರುವ ಡಾ॥ ಚಿದಾನಂದಮೂರ್ತಿಯ ಹೇಳಿಕೆ ಈ ನಿಟ್ಟಿನಲ್ಲಿ ಸಮರ್ಥನೀಯವೇ. ಆದ್ದರಿಂದ ಪೆಂ (ಪಿಂ) ಬೇರು ಕ್ಷೇತ್ರವನ್ನು ನಿಶ್ಚಯಗೊಳಿಸಲು ಕೊಡೆಯೂ ಒಂದು ಆಧಾರವೆಂದು ಶ್ರೀ ಹಾಲಬಾವಿಯವರು ಭಾವಿಸಿದ್ದು ಅಸಮರ್ಪಕವೆಂಬುದು ಸ್ಪಷ್ಟ. ಒಟ್ಟು ಮೇಲಿನ ಸಂಗತಿಗಳ ಬೆಳಕಿನಲ್ಲಿ ನೋಡಿದಾಗ ಶಂಕರ ದಾಸಿಮಯ್ಯನು ಭೆಟ್ಟಿಕೊಟ್ಟಿರಬಹುದಾದ ಅಥವಾ ಬಸವಣ್ಣನವರು ಉಲ್ಲೇಖಿಸಿರುವ ಪಿಂ (ಪೇ) ಬೇಱು (ರು) ಬೀದರಜಿಲ್ಲೆಯ ಪ್ರೇಮಪುರ–ಮೈಲಾರ ಕ್ಷೇತ್ರವೇ ಎಂದು ತಿಳಿಯಲಡ್ಡಿಯಿಲ್ಲ.

ಅಡಿ ಟಿಪ್ಪಣಿಗಳು

1) ಎಂ. ಚಿದಾನಂದಮೂರ್ತಿ — 'ಸಂಶೋಧನ ತರಂಗ' - ಭಾಗ - ೨. ೧೯೭೧, ಬೆಂಗಳೂರು ವಿ. ವಿ. ಪುಟ 207.

2) i) ಬಸವಣ್ಣನವರ ಷಟ್‌ಸ್ಥಳದ ವಚನಗಳು, ಸಂ. ಶಿ. ಶಿ. ಬಸವನಾಳ, ೧೯೬೩, ವಚನ ಸಂಖ್ಯೆ ೫೬೭.

ii) ಬಸವಣ್ಣನವರ ವಚನಗಳು : ಸಂ. ಆರ್. ಸಿ. ಹಿರೇಮಠ ಕ. ವಿ. ವಿ. ಧಾರವಾಡ, ೧೯೬೮, ನಂ. ೫೬೫. ಈ ಸಂಪಾದನೆಯಲ್ಲಿ ಪ್ರಸ್ತುತ ವಚನದ ಪಾಠ ಸ್ವಲ್ಪ ಬೇರೆಯಾಗಿದ್ದು ಅದರಲ್ಲಿ ಹಿಂಬೇರ ಎಂಬುದಕ್ಕೆ ಬದಲು 'ತಿಂಬೆಜ' ಎಂಬ ಪಾಠವಿದೆ.

3) Journal of the Karnatak University Vol. iii-ii

4) ಶಂಕರದಾಸಿಮಯ್ಯ ಪುರಾಣ. ಸಂ. ವಿ. ಬ. ಹಾಲಬಾವಿ. ಪ್ರಸ್ತಾವನೆ.

5) ಅ. ಟಿ. ೧

6) ಅ. ಟಿ. ೪. ಪುಟ ೪೫

7) ನೂತನ ಪುರಾತನರ ರಗಳೆಗಳು–೧೯೭೬, ಸಂ. ಎಂ. ಎಸ್. ಸುಂಕಾಪುರ. ಕ. ವಿ. ವಿ. ಧಾರವಾಡ—'ಶಂಕರ ದಾಸಿಮಯ್ಯನ ರಗಳೆ'

8) ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಶಂಕರ ದಾಸಿಮಯ್ಯನು ನವಿಲೆಯಿಂದ ಕಲ್ಯಾಣಕ್ಕೆ ಹೋಗುವಾಗಲೇ ಪೆಂಬೇರಿನಲ್ಲಿ ಇಳಿದುಕೊಂಡಿದ್ದನೆಂದಿದೆ. ನೋಡಿ ಭೈ. ಕಾ. ಕ. ಸೂ. ರ. ಪುಟ ೮೪

9) ಹಿಂಬೇರ ಎಂಬುದೂ ಅಪಪಾಠವಾಗಿದ್ದು ಬಹುಶಃ ಪೆಂಬೇಲು ಅಥವಾ ಹೆಂಬೇಲು ಎಂಬುದು ಹೆಚ್ಚು ಸರಿಯಾದ ಪಾಠವಾಗಬಹುದು.

10) ಮೈಲಾರಲಿಂಗನ ಪದಗಳು ಭಾಗ–೧, ೧೯೮೨ - ಪುಟ viii

10ಅ) ರಾ. ಚಿಂ. ಢೇರೆ 'ಖಂಡೋಬಾ', ೧೯೬೧, ಪು. ೮೧ ಮತ್ತು ೧೪೪

11) ಅ. ಟಿ. ೪

12) ಇವಳ ಹೆಸರು 'ಪಾಲಾಯಿ' ಎಂದು ಮಹಾರಾಷ್ಟ್ರದ ಜನ ಹೇಳುತ್ತಾರೆ.

13) 'ಖಂಡೋಬಾ' ಪುಟ ೮೧

14) ಅದೇ.

15) ಶಂಕರ ದಾಸಿಮಯ್ಯ ಪುರಾಣ. ಪ್ರಸ್ತಾವನೆ

16) ಭಂಡಾರ, ದೋಣಿ, ಕಬ್ಬಿಣಸರಪಣಿ, ಕೊಡೆ ಮತ್ತು ಕುದುರೆ ಈ ಮುಂತಾದ ಕೆಲವು ಸಂಕೇತಗಳು ಮೈಲಾರ ಸಂಪ್ರದಾಯದಲ್ಲಿ ಬಹು ಮುಖ್ಯಪಾತ್ರ ವಹಿಸುತ್ತವೆ.

ಬಿಜ್ಞಾಂಟಿಯುಂ*

ಅನು : **ಸುಮತೀಂದ್ರ ನಾಡಿಗ**

ದಿನದ ಅಶುದ್ಧ ಪ್ರತಿಮೆಗಳು ಓಂಜರಿದಿವೆ ;
ರಾಜಾಧಿರಾಜನ ಮತ್ತ ಸೈನಿಕರು ನಿದ್ರಿಸಿದ್ದಾರೆ ;
ರಾತ್ರಿ ಮಾರ್ದನಿ ಕರಗಿ ಚರ್ಚುಗಂಟೆಯು ಬಳಿಕ
ಅಲೆಮಾರಿ ಹಾಡು ; ನಕ್ಷತ್ರವೋ ಚಂದ್ರನೋ
ಬೆಳಗಿರುವ ಗುಮ್ಮಟವೊಂದು ತಿರಸ್ಕರಿಸುವುದು
ಮಾನವನ ಎಲ್ಲವನ್ನೂ
ಗೋಜು ಗೋಜನ್ನು,
ಮನುಷ್ಯನ ನರನಾಳಗಳ ಕೆರಳುವಿಕೆ, ರೊಚ್ಚಿಯನ್ನು.

ನನ್ನೆದುರು ತೇಲುವುದೊಂದು ಪ್ರತಿಮೆ, ಮನುಷ್ಯನೊ ಅಥವಾ ನೆರಳೊ
ಮನುಷ್ಯನಿಗಿಂತ ನೆರಳಿಗೇ ಹತ್ತಿರ, ನೆರಳಿಗಲ್ಲ ಪ್ರತಿಮೆಗೆ,
ರಕ್ಷಿತ ಶವವಸ್ತ್ರ ಸುತ್ತಿರುವ ಪಾತಾಳ-ಕಂಡಿಕೆಯೊಂದು
ಸುತ್ತಿಕೊಳ್ಳುವ ಪಥವ ಬಿಚ್ಚಬಹುದು,
ಆರ್ದ್ರತೆಯಿಂರದ, ಉಸಿರೂ ಇರದ ಬಾಯೊಂದು
ಉಸಿರಿರದ ಬಾಯಿಗಳ ಕರೆಯುಬಹುದು :
ಅತಿಮಾನುಷಕ್ಕೆ ತಲೆಬಾಗುತ್ತೇನೆ ;
ಸಾವಿನಲ್ಲಿನ ಬದುಕೆ, ಬದುಕಿನಲ್ಲಿನ ಸಾವೆ ಎಂದು ಕರೆಯುತ್ತೇನೆ.

ಇದು ಪವಾಡ, ಹಕ್ಕಿಯೋ ಚಿನ್ನದ ಕೆಲಸವೊ,
ಹಕ್ಕಿಗಿಂತ ಪವಾಡ ಅಥವಾ ಕೈಕಸುಬಿಗಿಂತ,
ತಾರಾದೀಪ್ತ ಸ್ವರ್ಣಕುಂಜದ ಮೇಲೆ ಇರಿಸಿದ್ದು,
ಪಾತಾಳದ ಹುಂಜಗಳಂತೆ ಕೂಗಬಲ್ಲದ್ದು,
ಅಥವಾ ಚಂದ್ರಮನಿಂದ ಖತಿಗೊಂಡು
ನಿರಂತರ ಲೋಹ ವೈಭವದಲ್ಲಿ ಕೀಳೆಂದು ಕೂಗೀತು
ಸಾಮಾನ್ಯ ಹಕ್ಕಿಯನ್ನು, ಹೂವಿನೆಸಳನ್ನು,
ಕೆಸರಿನ ಅಥವಾ ನೆತ್ತರಿನ ಬಗೆ ಬಗೆಯ ಗೋಜು ಗೋಜನ್ನು.

* (ಮೂಲ) W. B. ಯೇಟ್ಸ್‌ನ Byzantium

ರಾಜಧಿರಾಜನ ಕಿರುಜಗುಲಿ ಮೇಲೆ ಚಲಿಸುತ್ತಾವೆ ಪ್ರತಿ ರಾತ್ರಿ
ಸೌದೆ ಉರಿಸದ ಜ್ವಾಲೆ, ಉಕ್ಕು ಹೊತ್ತಿಸದ,
ಬಿರುಗಾಳಿ ಅಲ್ಲಾಡಿಸದ, ಜ್ವಾಲೆ ಸಂಜನಿತ ಜ್ವಾಲೆಗಳು
ಅಲ್ಲಿ ಬರುತ್ತಾವೆ ರಕ್ತಕ್ಕೆ ಜನಿಸಿರುವ ಪ್ರಾಣಗಳು
ತೊರೆಯುಂತ್ತಾವೆ ಕೆರಳುವಿಕೆ ಹುಟ್ಟಿಸಿದ ತಮ್ಮೆಲ್ಲ ಗೋಜಲನ್ನು,
ಸಾವೇ ಕುಣಿತವಾಗಿ
ನೋವೇ ಸಮಾಧಿಯಾಗಿ
ಜ್ವಾಲೆಯು ನೋವು ಒಂದು ಅಂಗಿಯ ತೋಳೂ ಸುಡಲಾರವು.

ಡಾಲ್ಫಿನ್ನಿನ ಕೆಸರು - ರಕ್ತದ ಮೇಲೆ ಕಾಲಗಲ ಹಾಕಿ
ಪ್ರಾಣಗಳ ಸಾಲು ! ಕುಲುಮೆಂಗಳು ಈ ಸೆರೆಯ ಮುರಿಯುತ್ತವೆ,
ಅಂತಿಂಥ ಕುಲುಮೆಗಳಲ್ಲ, ರಾಜಾಧಿ ರಾಜನ ಸ್ವರ್ಣಕುಲುಮೆಂಗಳು !
ನೃತ್ಯಶಾಲೆಯ ಅಮೃತ ಶಿಲೆ ಹಾಸುಗಳು
ಗೋಜಲಿನ ಉಗ್ರತೆಯನ್ನು ಮುರಿಯುತ್ತವೆ,
ಆ ಪ್ರತಿಮೆಗಳು ಇನ್ನೂ
ಹೆರುತ್ತವೆ ಹೊಸ ಪ್ರತಿಮೆಗಳನ್ನು
ಡಾಲ್ಫಿನ್ನು ಸೀಳಿರುವ ಗಂಟೆ ತಳಮಳಿಸಿರುವ ಜಲಧಿಯನ್ನು.

ಹೈದರಾಬಾದ ಕರ್ನಾಟಕದ ಜನಪದ ಕಥೆಗಳು —ಒಂದು ಚಿಂತನೆ

ವೀರಣ್ಣ ದಂಡೆ

ಹೈದರಾಬಾದ ಕರ್ನಾಟಕದಲ್ಲಿ ಜನಪದ ಕಥೆಗಳ ಸಂಗ್ರಹ

ಕಲಬುರ್ಗಿ ಜಿಲ್ಲೆಯಲ್ಲಿ ಜನಪದ ಸಾಹಿತ್ಯ ಸಂಗ್ರಹಕಾರ್ಯ ನಡೆದಷ್ಟು ಹೈದರಾಬಾದ ಕರ್ನಾಟಕದ ರಾಯಚೂರು ಮತ್ತು ಬೀದರ ಜಿಲ್ಲೆಗಳಲ್ಲಿ ನಡೆದಿಲ್ಲ. ಜನಪದ ಕಥೆಗಳ ಸಂಗ್ರಹ ಕಾರ್ಯವನ್ನು ಗಮನಿಸಿ ಹೇಳುವುದಾದರೆ ಟಿ. ಎಸ್. ರಾಜಪ್ಪ ಅವರ 'ರಾಯಚೂರು ಜಿಲ್ಲೆಯ ಜನಪದ ಕಥೆಗಳು' ಹಾಗೂ ಕ್ಯಾತನಹಳ್ಳಿ ರಾಮಣ್ಣನವರ 'ಬೀದರ ಜಿಲ್ಲೆಯ ಜನಪದ ಕಥೆಗಳು' ಎಂಬ ಎರಡು ಸಂಕಲನಗಳು ಕಾಣಸಿಗುತ್ತವೆ. ಆದರೆ ಕಲಬುರ್ಗಿ ಜಿಲ್ಲೆಯಿಂದ ಜನಪದ ಕಥೆಗಳ ಒಂದು ಸಂಕಲನ ಕೂಡ ಹೊರಬಂದಿಲ್ಲ. ಎಚ್. ಎಲ್. ನಾಗೇಗೌಡ ಅವರ ಸಂಪಾದಕತ್ವದ ಹೆಸರಿನಲ್ಲಿ ಪ್ರಕಟಗೊಂಡ ಅನೇಕ ಜನ ಸಂಗ್ರಹಿಸಿಕೊಟ್ಟ ಕಥೆಗಳ ಸಂಕಲನ 'ಕರ್ನಾಟಕದ ಜನಪದ ಕಥೆಗಳು' ಎಂಬುದರಲ್ಲಿ—ಕಲಬುರ್ಗಿ, ರಾಯಚೂರು ಹಾಗೂ ಬೀದರಿನ ತಲಾ ಐದೈದು ಕಥೆಗಳು ಮಾತ್ರ ಸೇರಿಸಿಕೊಂಡಿವೆ.

ಸಂಗ್ರಹಗೊಂಡು ಪ್ರಕಟವಾಗದೇ ಉಳಿದ ಹೈದರಾಬಾದ ಕರ್ನಾಟಕದ ಜನಪದ ಸಾಹಿತ್ಯ ವಿಪುಲವಾಗಿದೆ. ಕಲಬುರ್ಗಿ ವಿಶ್ವವಿದ್ಯಾಲಯವು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಸ್ನಾತಕೋತ್ತರ ಕೇಂದ್ರವಾಗಿದ್ದಾಗ, ಅಲ್ಲಿನ ಕನ್ನಡ ವಿಭಾಗವು ಜನಪದ ಸಾಹಿತ್ಯದ ಸಂಗ್ರಹಕಾರ್ಯ ಕೈಕೊಂಡಿತ್ತು. 'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಸಂಗ್ರಹ, ಸಂಪಾದನೆ ಮತ್ತು ಪ್ರಕಟಣೆ' ಎಂಬ ಯೋಜನೆಯೊಂದು 1975-76 ರಲ್ಲಿ, ವಿಶ್ವವಿದ್ಯಾಲಯದ ನೆರವಿನಡಿ, ಡಾ॥ ಬಿ. ಬಿ. ಹೆಂಡಿ ಅವರ ನೇತೃತ್ವದಲ್ಲಿ ಕೆಲಸ ಪ್ರಾರಂಭಿಸಿತು. ಇದೇ ವೇಳೆಗೆ "ಉತ್ತರ ಕರ್ನಾಟಕದ ಐದು ಜಿಲ್ಲೆಗಳ ಜನಪದ ಕಥೆ, ಹಾಡುಗಳ ಸಂಗ್ರಹ ಸಂಪಾದನೆ ಮತ್ತು ಪ್ರಕಟನೆ" ಎಂಬ ಬಹು ದೊಡ್ಡ ಯೋಜನೆಯೊಂದು, ಯುಜಿಸಿಯ ನೆರವಿನಿಂದ, ಡಾ॥ ಬಿ. ಬಿ. ಹೆಂಡಿ ಅವರ ನೇತೃತ್ವದಲ್ಲಿ ಕಾರ್ಯಪ್ರವೃತ್ತವಾಯಿತು.

ದಿನಾಂಕ ೧೦, ೧೧ ಮತ್ತು ೧೨ ಮೇ, ೧೯೮೫ ರಂದು, ಶಿವಮೊಗ್ಗೆಯಲ್ಲಿ ನಡೆದ 'ಅಖಿಲ ಕರ್ನಾಟಕ ಜಾನಪದ ಸಮ್ಮೇಳನ'ದಲ್ಲಿ ದಿನಾಂಕ ೧೧ ರಂದು ಸಾದರಪಡಿಸಿದ ಲೇಖನ.

ಈ ಎರಡು ಯೋಜನೆಗಳಡಿ ಜನಪದ ಕಥೆ ಹಾಗೂ ಹಾಡುಗಳ ವಿಪುಲವಾದ ಸಂಗ್ರಹಕಾರ್ಯ ನಡೆಯಿತು. ಅವೆಲ್ಲ ಇಂದು ಕಲಬುರ್ಗಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ವ್ಯವಸ್ಥಿತವಾದ ಹೊಂದಾಣಿಕೆಯೊಂದಿಗೆ, ಹಸ್ತಪ್ರತಿಗಳಲ್ಲಿ ದೊರೆಯುತ್ತವೆ. ಈ ಸಂಗ್ರಹದಲ್ಲಿ ಹೈದರಾಬಾದ ಕರ್ನಾಟಕದಿಂದ ಸಂಗ್ರಹಿತಗೊಂಡ ಸುಮಾರು ೩೦೦೦ ಕಥೆಗಳು ಕಾಣಸಿಗುತ್ತವೆ. ಇವೆಲ್ಲ ಸಂಪಾದನೆಗೊಂಡು, ಪ್ರಕಟವಾದಾಗ ಅಭ್ಯಾಸಕ್ಕೆ ಲಭ್ಯವಾಗಬಹುದು.

'ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು' ಎಂಬ ಸಂಶೋಧನಾ ಪ್ರಬಂಧವೊಂದು ಇದೇ ಲೇಖಕನಿಂದ ತಯಾರಿಸಲ್ಪಟ್ಟಿವೆ. ಇದು ಪ್ರಾದೇಶಿಕ ಮಟ್ಟದಲ್ಲಿ ಕಥೆಗಳ ಅಭ್ಯಾಸ ನಡೆದಾಗ, ದೊರೆಯುಬಹುದಾದ ಫಲ ಎಂತಹುದು ಎಂಬುದನ್ನು ಎತ್ತಿ ತೋರಿಸಬಹುದಾಗಿದೆ.

ಪ್ರಾದೇಶಿಕ ಮಟ್ಟದಲ್ಲಿ ಜನಪದ ಕಥೆಗಳ ಅಧ್ಯಯನ

ಜನಪದ ಕಾವ್ಯವನ್ನು ಕುರಿತು ಅಭ್ಯಾಸ ಮಾಡುವಾಗ ಪ್ರಾದೇಶಿಕ ಅಧ್ಯಯನದ ಮಹತ್ವ ಎಷ್ಟು ಪ್ರಮುಖವಾದುದೋ ಜನಪದ ಕಥೆಗಳನ್ನು ಕುರಿತು ವಿಚಾರ ಮಾಡುವಾಗಲೂ ಅಷ್ಟೇ ಆವಶ್ಯಕವೆನಿಸುತ್ತದೆ. ಆದರೆ ಕಥೆಗಳ ಪ್ರಾದೇಶಿಕ ಮಟ್ಟದ ಅಧ್ಯಯನದಲ್ಲಿ ಗಮನಿಸಬೇಕಾದ ಸಂಗತಿಗಳು, ದೃಷ್ಟಿ-ಧೋರಣೆಗಳು ಭಿನ್ನವಾಗುತ್ತವೆ. ವ್ಯಾಪಕವಾಗುತ್ತವೆ.

ಜನಪದ ಗೀತೆಗಳಾದರೋ ಪ್ರಾದೇಶಿಕ ಪ್ರತಿನಿಧಿಗಳಾಗಿದ್ದು ಸ್ಥಳೀಯ ಬಣ್ಣದಿಂದ ಲಕಲಕನೆ ಹೊಳೆಯುತ್ತಿರುತ್ತವೆ. ಪ್ರಾದೇಶಿಕತೆ ಜನಪದ ಕಾವ್ಯದ ಜೀವಾಳ. ಅವರ ಜೊತೆಗೆ ಗಾದೆ, ಒಗಟು, ಒಡಪು ಇತ್ಯಾದಿಗಳೆಲ್ಲ ತಾವು ಪ್ರಸಾರಗೊಂಡಿರುವ ಪರಿಸರದ ಕೂಸುಗಳಾಗಿ ಕಾಣಿಸಿಕೊಳ್ಳುತ್ತದೆ. ಒಂದು ಗೊತ್ತಾದ ಪ್ರದೇಶ ಅಥವಾ ಸಾಂಸ್ಕೃತಿಕ ಪರಿಸರವು ಜನಪದ ಕಾವ್ಯವನ್ನು ನಿಯಂತ್ರಿಸುತ್ತದೆ. ಅದಕ್ಕೆ ವಸ್ತುವನ್ನು, ಆವರಣವನ್ನು ಒದಗಿಸಿಕೊಡುತ್ತದೆ. ಹೀಗಾಗಿ ಅವುಗಳಲ್ಲಿ ಆಯಾ ಪ್ರದೇಶದ ಕುರುಹುಗಳು ಸಹಜವಾಗಿ ಕಾಣಿಸಿಕೊಳ್ಳುತ್ತವೆ. ಜನಪದ ಕಾವ್ಯದಲ್ಲಿ ಭಿನ್ನತೆ ಕಾಣಿಸಿಕೊಳ್ಳುವಾಗ, ಅದು ಆ ಪ್ರದೇಶದ ಸಂಸ್ಕೃತಿಯ ಭಿನ್ನತೆಯಿಂದುಂಟಾದ, ಕವಿಯ ಸಮಷ್ಟೀ ಪ್ರಜ್ಞೆಯ ದ್ಯೋತಕವಾಗಿರುತ್ತದೆ.

ಕಥೆಗಳ ವಸ್ತು ಪ್ರಾದೇಶಿಕ ಮಟ್ಟಕ್ಕೇ ಸೀಮಿತವಾಗಿರದೆ, ಅದು ಮಾನವನ ನಾಗರೀಕತೆಯ ಬೆಳವಣಿಗೆಯ ಹಂತಗಳಿಂದ ಉಳಿಸಿಕೊಂಡ ಪಳೆಯುಳಿಕೆಗಳನ್ನು, ನಂಬಿಕೆ, ಆಚರಣೆಗಳನ್ನು ತನ್ನ ವಸ್ತುವಾಗಿ ಪಡೆದಿರುತ್ತದೆ. ಕಥೆಗಳ ಅವತಾರಗಳಲ್ಲಿ ಕಾಣಿಸಿಕೊಳ್ಳುವ ಬದಲಾವಣೆಗಳು, ವಕ್ತಾರನಿಗೆ ಸಂಬಂಧಿಸಿದಂತೆ-ವಿವರಣೆಯ ಹಂತದಲ್ಲಿಯ ಹೇರು ಪೇರುಗಳೆನಿಸುತ್ತವೆ. ಅವು ವಕ್ತಾರನ ವಯುಕ್ತಿಕ ಜಾಣ್ಮೆಯನ್ನು

ಅವಲಂಬಿಸಿರುತ್ತವೆ. ಈತನಿಂದಾಗಿ ಕಥೆಯು ವಿವರಣೆಯ ಮೇಲ್ಮೈಯಲ್ಲಿ ಕೆಲ ಪ್ರಾದೇಶಿಕ ಗುಣಗಳು ಸೇರಿಕೊಳ್ಳಬಹುದಾಗಿದೆ. ಆದರೆ ಇದರಿಂದ ಕಥೆಯ ವಸ್ತು (ಕ್ರಿಯೆ)ವಿನಲ್ಲಿ ಯಾವುದೇ ಬದಲಾವಣೆಯಾಗುವದಿಲ್ಲ.

ಆದರೆ ಕಥೆಗಳ ವಿಪುಲವಾದ ಬೆಳವಣಿಗೆ, ಸುಗಮವಾದ ಪ್ರಸಾರ, ಅವುಗಳ ವಿವರಣೆಯಲ್ಲಿ ವಿರೂಪವಾಗದೆ ಇರುವಿಕೆ, ಕಥಾ ಸಂವಿಧಾನದ ಕ್ರಮಬದ್ಧತೆ, ಬಾಯಿಮಾತಿನ ಪರಂಪರೆಯಲ್ಲಿ ಕಥೆ ಉಳಿದುಕೊಂಡು ಬರಲು ಕೇಳುಗರನ್ನು ಆಕರ್ಷಿಸುವ ಗುಣ, ಸಾಹಿತ್ಯಿಕ ಜಿಗುಟುತನ-ಇವೆಲ್ಲವುಗಳ ಮೇಲೆ ಆಯಾ ಪ್ರದೇಶದ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಅಂಶಗಳು ಪ್ರಭಾವ ಬೀರುತ್ತವೆ. ಸಾಕ್ಷರತೆ–ನಿರಕ್ಷರತೆಗಳು, ನಗರ ಸಂಪರ್ಕ–ನಾಗರೀಕರಣಗಳು ಕಥೆಗಳಲ್ಲಿ ಬದಲಾವಣೆಗಳನ್ನು ತರುತ್ತವೆ. ಎಲ್ಲಕ್ಕಿಂತಲೂ ಹೆಚ್ಚಾಗಿ–ಪರಭಾಷೆ ಪರಸಂಸ್ಕೃತಿಗಳಿಂದ–ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಆಗುವ ಪರಿಣಾಮಗಳು, ಆ ಪ್ರದೇಶದ ಜನಪದ ಕಥೆಗಳ ಮೇಲೂ ಬೀರುತ್ತವೆ.

ಪ್ರಪಂಚದಾದ್ಯಂತ ದೊರೆಯುವ ಜನಪದ ಕಥೆಗಳ ಸ್ವರೂಪ-ಲಕ್ಷಣಗಳು ಒಂದೆ ಬಗೆಯಾಗಿದ್ದು, ಒಂದು ಪ್ರದೇಶದ ಕಥೆಗಳ ಅಧ್ಯಯನ ಮಾಡುವುದೆಂದರೆ, ಅದು ಒಂದು ಮಟ್ಟದಲ್ಲಿ–ಪ್ರಪಂಚದ ಕಥೆಗಳೊಂದಿಗಿನ ತೌಲನಿಕ ಅಧ್ಯಯನವಾಗಿಯೇ ಬೆಳೆಯುತ್ತದೆ.

ಈ ಎಲ್ಲ ಅಂಶಗಳನ್ನು ಗಮನಿಸದೆ ಕೇವಲ ಪ್ರಾದೇಶಿಕ ಅಂಶಗಳನ್ನಷ್ಟೇ ಕಥೆಗಳಲ್ಲಿ ಹುಡುಕುತ್ತ ಹೋದರೆ ವ್ಯಾನ್‌ಸಿಡೋ ಮಹಾಶಯನಂತೆ ಸ್ಥಳಮಾದರಿಗಳನ್ನು ಗುರುತು ಹಚ್ಚುವ ವ್ಯರ್ಥ ಪ್ರಯತ್ನದಂತಾಗುತ್ತದೆ. ಹಾಗಾದರೆ ನಾವು ಮಾಡುವ ಪ್ರಯತ್ನಕ್ಕೆ ಕೇವಲ ಐತಿಹ್ಯಗಳು ಮಾತ್ರ ನಮ್ಮ ಕೈಗೆ ಸಿಗುತ್ತಹೋಗುತ್ತವೆ.

ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಹೈದರಾಬಾದ ಕರ್ನಾಟಕದ ಹಿನ್ನೆಲೆಯನ್ನು ಅವಲೋಕಿಸುವದು ಅವಶ್ಯಕವೆನಿಸುತ್ತದೆ.

ಐತಿಹಾಸಿಕ ಹಿನ್ನೆಲೆ :

1956 ಭಾಷಾವಾರು ಪ್ರಾಂತರಚನೆಯ ಮುಂಚೆ ಕರ್ನಾಟಕವು ಹಲವು ಭಾಗಗಳಲ್ಲಿ ಹರಿದು ಹಂಚಿಹೋಗಿತ್ತು. ಕರ್ನಾಟಕದ ದಕ್ಷಿಣ ಭಾಗವು–ಮೈಸೂರು ಪ್ರಾಂತಕ್ಕೆ ಸೇರಿದ್ದರೆ, ಉತ್ತರದ ಭಾಗಗಳು–ಮುಂಬೈ, ಮದ್ರಾಸ ಮತ್ತು ಹೈದರಾಬಾದ ಪ್ರಾಂತಗಳಲ್ಲಿ ಹರಿದು ಹಂಚಿ ಹೋಗಿದ್ದವು.

ಕಲಬುರ್ಗಿ, ರಾಯಚೂರ ಮತ್ತು ಬೀದರ ಜಿಲ್ಲೆಗಳು-1948 ರ ಹಿಂದೆ ಅನೇಕ ವರ್ಷಗಳವರೆಗೆ ಮುಸ್ಲೀಮರ ಆಡಳಿತಕ್ಕೆ ಒಳಪಟ್ಟಿದ್ದವು. ಹಸನಗಂಗು ಬಹಮನಿ ಎಂಬವನು 1347 ರ ಅಗಸ್ಟ 13 ರಂದು, ಕಲಬುರ್ಗಿಯನ್ನು ತನ್ನ ರಾಜ್ಯಧಾನಿಯನ್ನಾಗಿಸಿಕೊಂಡು, ರಾಜ್ಯವಾಳಲು ಪ್ರಾರಂಭಿಸಿದಂದಿನಿಂದ, ಈ ಜಿಲ್ಲೆಗಳ ಒಂದಿಲ್ಲಾ ಒಂದು ಭಾಗಗಳು ಮುಸ್ಲೀಮರ ಆಡಳಿತಕ್ಕೆ ಒಳಪಡುತ್ತ ಬಂದವು. 1885 ರಿಂದ 1948ರ ವರೆಗೆ ಖಾಯಂ ಆಗಿ ಈ ಜಿಲ್ಲೆಗಳು ಹೈದರಾಬಾದಿನ ನೈಜಾಮ ಆಡಳಿತಕ್ಕೆ ಒಳಪಟ್ಟಿದ್ದವು.

ಮುಸ್ಲೀಮರ ಆಡಳಿತದ ಅವಧಿಯಲ್ಲೆಲ್ಲ ಈ ಭಾಗದಲ್ಲಿ ಉರ್ದು–ಶೈಕ್ಷಣಿಕ ಮತ್ತು ಆಡಳಿತ ಭಾಷೆಯಾಗಿತ್ತು. ನಮ್ಮ ನಾಡು ಕರ್ನಾಟಕ, ನಮ್ಮ ಭಾಷೆ ಕನ್ನಡ ಎಂಬ ಅರಿವು ಈ ಭಾಗದ ಜನರ ಸ್ಮೃತಿಯಿಂದ ದೂರಸರಿದು ಹೋಗಿದ್ದವು.

ಹೈದರಾಬಾದ ಸ್ಟೇಟ :

1909 ಒಂದು ವರದಿಯ ಪ್ರಕಾರ-ನಿಜಾಮನ ವಶದಲ್ಲಿದ್ದ 'ಹೈದರಾಬಾದ ಸ್ಟೇಟ್'ದ ಒಟ್ಟು ವಿಸ್ತೀರ್ಣ 82,698 ಚದುರ ಮೈಲುಗಳಷ್ಟಾಗಿತ್ತು. ಉತ್ತರಕ್ಕೆ 15° 10′ ಮತ್ತು 20° 40′ ಅಲ್ಲದೆ, ಪೂರ್ವಕ್ಕೆ 74° 40′ ಮತ್ತು 80° 35′- ಈ ಅಳತೆಗಳಲ್ಲಿ ಹೈದರಾಬಾದ ಸ್ಟೇಟ್ ಹಬ್ಬಿಕೊಂಡಿತ್ತು. ಸರಿಸುಮಾರಾಗಿ ದಕ್ಷಿಣ ಭಾರತದ ಮಧ್ಯಕ್ಕೆ ಹಬ್ಬಿಕೊಂಡಿದ್ದ ಈ ಪ್ರದೇಶದ ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಬೆರಾರ(ದ) ಮತ್ತು ಬಾಂಬೆ ಪ್ರಾಂತಗಳು ಹರಡಿಕೊಂಡಿದ್ದವು. ದಕ್ಷಿಣಕ್ಕೆ ಕೃಷ್ಣಾನದಿ ಹರಿದಿತ್ತು. ಪೂರ್ವಕ್ಕೆ ಮದ್ರಾಸ ಪ್ರಾಂತವಿತ್ತು.

ಆಗಿನ ಹೈದರಾಬಾದ ಸ್ಟೇಟಿನಲ್ಲಿ-ಔರಂಗಾಬಾದ, ಗುಲಬರ್ಗಾ, ಗುಲಶನ್‌ಬಾದ ಮತ್ತು ವರಂಗಲ್ ಎಂಬ ನಾಲ್ಕು ಡಿವಿಜನ್ನುಗಳಿದ್ದವು. ಕರ್ನಾಟಕದ–ಕಲಬುರ್ಗಿ, ರಾಯಚೂರು ಮತ್ತು ಬೀದರ ಪ್ರದೇಶಗಳು, ಗುಲಬರ್ಗಾ ಡಿವಿಜನ್ನಿಗೆ ಸೇರಿದ್ದವು.

1948ರ ನಂತರ ನೈಜಾಮನ ಆಳ್ವಿಕೆಯಿಂದ ಈ ಪ್ರದೇಶ ಹೊರಗಾಯಿತು. 1956ರಲ್ಲಿ ಭಾಷಾವಾರು ಪ್ರಾಂತರಚನೆಗಳಿಂದಾಗಿ–ಈ ಮೂರು ಜಿಲ್ಲೆಗಳು ಮೈಸೂರು ರಾಜ್ಯಕ್ಕೆ ಸೇರಿಕೊಂಡವು.

ಕಲಬುರ್ಗಿ ಜಿಲ್ಲೆ :

ಈಗಿನ ಕಲಬುರ್ಗಿ ಜಿಲ್ಲೆಯು 16, 224 ಚ. ಕಿ. ಗಳಲ್ಲಿ ಹಬ್ಬಿಕೊಂಡಿದೆ. 1304 ಗ್ರಾಮಗಳು, 12 ಪಟ್ಟಣಗಳು, 10 ತಾಲೂಕಾಗಳಲ್ಲಿ ವಿಭಾಗಿಸಲ್ಪಟ್ಟವೆ. 1971 ರ ಜನಗಣತಿಯ ಪ್ರಕಾರ–17ಲಕ್ಷ 39 ಸಾವಿರ 220 ಜನರಲ್ಲಿ ಕೇವಲ 3

ಲಕ್ಷ 25 ಸಾವಿರ ಜನರು ಮಾತ್ರ ಅಕ್ಷರಸ್ಥರು, ಇದು ನೂರಕ್ಕೆ 18.17 ರಷ್ಟು ಮಾತ್ರ ಆಗುತ್ತದೆ.

ಕಲಬುರ್ಗಿ ಜಿಲ್ಲೆ ಅತಿ ಕಡಿಮೆ ಮಳೆಬೀಳುವ ಪ್ರದೇಶವಾಗಿದೆ. ರಾಜ್ಯದ ಒಟ್ಟು ನೀರಾವರಿ ಪ್ರದೇಶದ ಶೇಕಡ 2.11 ಹೆಕ್ಟೇರ ಜಮೀನು ಮಾತ್ರ ನೀರಾವರಿಗೆ ಒಳಪಟ್ಟಿದೆ. ಇಲ್ಲಿನ ಒಕ್ಕಲುತನ ಬಹುತೇಕ ಮಳೆಯನ್ನೇ ಅವಲಂಬಿಸಿರುವದರಿಂದ ಮೇಲಿಂದ ಮೇಲೆ ಭೀಕರ ಬರಗಾಲಗಳಿಗೆ ತುತ್ತಾಗುತ್ತ ಇರುತ್ತದೆ. ಈ ಪ್ರದೇಶದಲ್ಲಿ ಹರಿಯುವ ಕೃಷ್ಣ, ಭೀಮಾ ನದಿಗಳಿಂದಲೂ; ಮುಲ್ಲಾಮಾರಿ, ಅಮರ್ಜಾ, ಕಾಗಿಣಾ, ಬೆಣ್ಣೆತೊರಾ ಮುಂತಾದ ಚಿಕ್ಕತೊರೆಗಳಿಂದಲೂ ಯಾವುದೇ ಲಾಭ ಆಗಿಲ್ಲ.

ಈ ಜಿಲ್ಲೆಯ ಉತ್ತರಕ್ಕೆ ಬೀದರ ಹಾಗೂ ದಕ್ಷಿಣಕ್ಕೆ ರಾಯಚೂರುಜಿಲ್ಲೆಗಳು ಹಬ್ಬಿಕೊಂಡಿವೆ. ಪಶ್ಚಿಮದ ಆಳಂದ,ಅಫಜಲಪೂರ,ತಾಲೂಕಾಗಳಿಗೆ ಮಹಾರಾಷ್ಟ್ರದ ಸೋಲಾಪೂರಜಿಲ್ಲೆಯ ಉಮರ್ಗಾ, ಸೋಲಾಪೂರ, ಅಕ್ಕಲಕೋಟ ತಾಲೂಕಾಗಳ ಭಾಗಗಳು ಹತ್ತಿಕೊಂಡಿವೆ. ಆದರೆ ಈ ಭಾಗಗಳು ಕನ್ನಡದ ಪ್ರಭಾವವುಳ್ಳ ಭಾಗಗಳೇ ಆದುದರಿಂದ ಮರಾಠಿಗರ ಗಾಢ ಪ್ರಭಾವವೇನೂ ಕಾಣಿಸುವದಿಲ್ಲ. ಆದರೆ ಪೂರ್ವದ-ಚಿಂಚೋಳಿ, ಸೇಡಂ ಹಾಗೂ ಯಾದಗೀರ ತಾಲೂಕಾಗಳಿಗೆ ಆಂಧ್ರದ ತಾಂಡೂರ, ಕೊಡಂಗಲ್ ನಾರಾಯಣಪೇಟ ಭಾಗಗಳು ಹತ್ತಿಕೊಂಡಿದ್ದು, ಇಲ್ಲಿ ತೆಲುಗಿನ ಗಾಢ ಪ್ರಭಾವ ಎದ್ದು ಕಾಣಿಸುತ್ತದೆ.

ರಾಯಚೂರು ಜಿಲ್ಲೆ

ಚಿನ್ನ, ಬೆಳ್ಳಿಗಳು ದೊರೆವ ನಾಡು ರಾಯಚೂರು. ಕಲಬುರ್ಗಿಜಿಲ್ಲೆಗಿಂತಲೂ ಸ್ವಲ್ಪ ಸಣ್ಣ ಪ್ರದೇಶವಾದ ಇದು 14,005 ಚ.ಕಿ.ಗಳ ವಿಸ್ತೀರ್ಣದಲ್ಲಿ ಹಬ್ಬಿಕೊಂಡಿವೆ. 1387 ಹಳ್ಳಿಗಳು, 10 ಪಟ್ಟಣಗಳು, 9 ತಾಲೂಕಾಗಳಲ್ಲಿ ಹಂಚಲ್ಪಟ್ಟಿವೆ. 14 ಲಕ್ಷದ 15 ಸಾವಿರದ 740 ಜನರಲ್ಲಿ 2 ಲಕ್ಷ 86 ಸಾವಿರದ 609 ಜನ, ಅಂದರೆ ನೂರಕ್ಕೆ 20.2 ರಷ್ಟು ಜನ ಮಾತ್ರ ಸಾಕ್ಷರರು (1971).

ತಕ್ಕಮಟ್ಟಿಗೆ ನೀರಾವರಿ ಇದ್ದೂ ಇಲ್ಲಿನ ಒಕ್ಕಲತನ ಮಳೆಯನ್ನೇ ಆಶ್ರಯಿಸಿದೆ. ಇಲ್ಲಿ-ಹತ್ತಿ, ಭತ್ತ ಹೆಚ್ಚಾಗಿ ಬೆಳೆಯಲಾಗುತ್ತದೆ. ಬಂಡೆಗಳಿಂದ ತುಂಬಿದ ಗುಡ್ಡಗಳು ಅತಿಯಾಗಿ ಕಾಣಬರುತ್ತವೆ.

ರಾಯಚೂರು ಜಿಲ್ಲೆಯ ಪಶ್ಚಿಮಕ್ಕೆ ಧಾರವಾಡ, ದಕ್ಷಿಣಕ್ಕೆ ಬಳ್ಳಾರಿ ಜಿಲ್ಲೆಗಳು ಹಬ್ಬಿಕೊಂಡಿವೆ. ಉತ್ತರದ ಬಹುಭಾಗಕ್ಕೆ ಕಲಬುರ್ಗಿ ಮತ್ತು ಬಿಜಾಪೂರ ಜಿಲ್ಲೆಯ ಭಾಗಗಳು ಹತ್ತಿಕೊಂಡಿವೆ. ಪೂರ್ವದ ಮಾನ್ವಿ ಮತ್ತು ರಾಯಚೂರು ತಾಲೂಕಿನ

ಗಡಿ ಹಾಗೂ ಉತ್ತರದ ಸ್ವಲ್ಪಭಾಗ ಆಂಧ್ರಕ್ಕೆ ಅಂಟಿಕೊಂಡಿರುವುದರಿಂದ ಇಲ್ಲಿ ತೆಲುಗರ ಪ್ರಭಾವ ಕಂಡುಬರುತ್ತದೆ.

ಬೀದರ ಜಿಲ್ಲೆ

ಪರಭಾಷೆ ಪರಸಂಸ್ಕೃತಿಗಳಿಗೆ ತುತ್ತಾಗಿ ಜರ್ಜರಿತವಾದ ಜಿಲ್ಲೆಯೆಂದರೆ ಬೀದರ ಇದು ವಿಸ್ತೀರ್ಣದಲ್ಲಿ ಅತಿ ಚಿಕ್ಕ ಪ್ರದೇಶವಾದುದರಿಂದ–ಪರಕೀಯ ಪ್ರಭಾವಗಳ ತೀವ್ರ ಹೊಡೆತಕ್ಕೆ ತುತ್ತಾಗಿದೆ. ಅವುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ, ಸಂಪೂರ್ಣವಾಗಿ ಹಾಳಾಗಿದೆ. ಇದರ ದಕ್ಷಿಣ ತುದಿ ಕಲಬುರ್ಗಿಜಿಲ್ಲೆಗೆ ಹತ್ತಿಕೊಂಡದ್ದನ್ನು ಬಿಟ್ಟರೆ, ಉಳಿದೆಲ್ಲ ಭಾಗಗಳಿಗೆ ಬೇರೆ ರಾಜ್ಯದ ಗಡಿಗಳೇ ಹಬ್ಬಿಕೊಂಡಿವೆ. ಪೂರ್ವದ ಹುಮ್ನಾಬಾದ, ಬೀದರ ಹಾಗೂ ಭಾಲ್ಕಿ ತಾಲೂಕಾಗಳಿಗೆ ಆಂಧ್ರದ ನಿಜಾಮಾಬಾದ, ಮೇಡಕ್ ಹಾಗೂ ಸಂಗಾರೆಡ್ಡಿ ಪೇಟೆ ಭಾಗಗಳು ಅಂಟಿಕೊಂಡಿವೆ. ಪಶ್ಚಿಮ ಹಾಗೂ ಉತ್ತರದ ಬಸವಕಲ್ಯಾಣ, ಭಾಲ್ಕಿ ಹಾಗೂ ಔರಾದ ತಾಲೂಕಾಗಳು ಸಂಪೂರ್ಣವಾಗಿ ಮಹಾರಾಷ್ಟ್ರದ ಉಸ್ಮಾನಾಬಾದ, ನಾಂದೇಡಜಿಲ್ಲೆಗಳ ಭಾಗಗಳಿಗೆ ತುತ್ತಾಗಿವೆ. ಜೊತೆಗೆ ಈ ಜಿಲ್ಲೆಯಲ್ಲಿ ಮುಸ್ಲೀಮ ಜನಾಂಗ ದಟ್ಟವಾಗಿದ್ದು, ಉರ್ದುವಿನ ಪ್ರಭಾವ ತೀರ ಗಾಢವಾಗಿದೆ. ಹೀಗೆ ಹೊರನಾಡಿನ ಮರಾಠಿ ತೆಲುಗುಗಳು, ಒಳನಾಡಿನ ಮುಸ್ಲೀಮ ಉರ್ದುಗಳು ಬೀದರನ್ನು ಜಜ್ಜಿ ಹಾಕಿವೆ.

ಯಾವುದೇ ಖನಿಜಗಳಿಲ್ಲದ, ಕೆಂಪು ಮಸಾರಿ ಭೂಮಿಯುಳ್ಳ ಈ ಜಿಲ್ಲೆಯಲ್ಲಿ ಅಲ್ಪ ಸ್ವಲ್ಪ ನೀರಾವರಿ ಒಕ್ಕಲತನವಿದ್ದರೂ ಮಳೆಯ ಮೇಲೆ ಅವಲಂಬನೆಯಾದ ಭಾಗವೇ ಅತಿಯಾಗಿದೆ. ಮಾಂಜ್ರಾ, ಕಾರಂಜಾ, ಮುಲ್ಲಾಮಾರಿಗಳೆಂಬ ಹಳ್ಳಗಳಿಂದ ಯಾವ ಪ್ರಯೋಜನವೂ ಆಗಿಲ್ಲ. ಕಬ್ಬು, ಮುಂಗಾರಿಜೋಳ, ಸೇಂಗಾ, ಕಡ್ಲಿ ಇಲ್ಲಿಯ ಪ್ರಮುಖ ಬೆಳೆಗಳು.

ಈ ಜಿಲ್ಲೆ ಕೇವಲ ಐದು ತಾಲೂಕಾಗಳ ಅತಿ ಸಣ್ಣ ಪ್ರದೇಶ. ಇದರ ಒಟ್ಟು ವಿಸ್ತೀರ್ಣ 5 ಸಾವಿರದ 451 ಚ.ಕಿ ಗಳು ಮಾತ್ರ. ಇಲ್ಲಿನ 591 ಹಳ್ಳಿ ಹಾಗೂ 5 ಪಟ್ಟಣಗಳಲ್ಲಿ 8 ಲಕ್ಷ 24 ಸಾವಿರದ 59 ಜನರು ವಾಸಿಸುತ್ತಾರೆ (1971). ಇದರಲ್ಲಿ 1 ಲಕ್ಷ 64 ಸಾವಿರದ 970 ಜನರು, ಅಂದರೆ ನೂರಕ್ಕೆ 20 ಜನ ಮಾತ್ರ ಸಾಕ್ಷರರು.

ಇಲ್ಲಿಯವರೆಗೆ ಹೈದರಾಬಾದ ಕರ್ನಾಟಕದ-ಮೂರು ಜಿಲ್ಲೆಗಳ ಸಂಕ್ಷಿಪ್ತವಾದ ಪರಿಚಯವನ್ನು ಮಾಡಿಕೊಡಲಾಯಿತು. ಈ ಜಿಲ್ಲೆಗಳಲ್ಲಿ ಜನಪದ ಸಾಹಿತ್ಯದ ಸಂಗ್ರಹದ ಬಗ್ಗೆ ನಡೆದ ಪ್ರಯತ್ನಗಳನ್ನು ತಿಳಿಸಲಾಯಿತು. ಜೊತೆಗೆ ಜನಪದ ಕಥೆಗಳ ಬಗ್ಗೆ ಹೊರಬಂದ ಸಂಕಲನಗಳ ಬಗ್ಗೆ, ನಡೆದ ಅಭ್ಯಾಸದ ಬಗ್ಗೆ ಗಮನ ಹರಿಸ

ಲಾಯಿತು. ಜನಪದ ಕಥೆಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಅಭ್ಯಾಸ ಮಾಡುವಾಗ ಗುರುತಿಸಬೇಕಾದ ಅಂಶಗಳನ್ನು ಲೆಕ್ಕಹಾಕಲಾಯಿತು.

ನಾನು ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಬಗ್ಗೆ ಅಲ್ಪಮಟ್ಟಿಗೆ ಅಭ್ಯಾಸ ಮಾಡಿದವನು. ಈ ಲೇಖನ ತಯಾರಿಸಬೇಕಾಗಿ ಬಂದಾಗ-ರಾಯಚೂರು ಮತ್ತು ಬೀದರ ಜಿಲ್ಲೆಗಳ ಕಥೆಗಳನ್ನು ಅವಲೋಕಿಸಿದೆನು. ಈ ಎಲ್ಲ ಅಭ್ಯಾಸಗಳ ಸಹಾಯ ದಿಂದ ಮತ್ತು ಇಲ್ಲಿಯವರೆಗೆ ಗಮನಿಸಿದ ಓದಿನ್ನೆಲೆಯ ಆಧಾರದಿಂದ ನಾನು ಈ ಕೆಲವು ನಿರ್ಣಯಂಗಳಿಗೆ ಬರಲು ಸಾಧ್ಯವಾಯಿತು.

೧. ಹೈದರಾಬಾದ ಕರ್ನಾಟಕದ ಜಿಲ್ಲೆಗಳಲ್ಲಿ ಅನಕ್ಷರಸ್ಥರ ಸಂಖ್ಯೆ ಜಾಸ್ತಿ ಯಿರುವದರಿಂದ, ಬಹು ಪ್ರಾಚೀನ ಕಾಲದ ಜನಪದ ಸಾಹಿತ್ಯದ ಪ್ರಕಾರಗಳು ಇಲ್ಲಿ ಕಾಣಸಿಗುತ್ತವೆ.

೨. ಈ ಮೂರು ಜಿಲ್ಲೆಗಳು ರಾಜ್ಯದಲ್ಲಿಯೇ ಅತಿ ಕಡಿಮೆ ಮಳೆ ಬೀಳುವ ಪ್ರದೇಶಗಳಾದರೂ ಇವು ಮಳೆಯನ್ನೇ ಅವಲಂಬಿಸಿದ ಒಕ್ಕಲುತನ ಹೊಂದಿರುವುದ ರಿಂದ-ಆರ್ಥಿಕವಾಗಿ ಮುನ್ನಡೆ ಸಾಧಿಸಲು ಸಾಧ್ಯವಾಗಿಲ್ಲ. ಹೀಗಾಗಿ ನಗರಗಳ ಸಂಪರ್ಕ ಮತ್ತು ನಾಗರೀಕರಣಗಳು ಅಷ್ಟೊಂದು ತೀವ್ರಗತಿಯಲ್ಲಿ ಸಾಗದೆ, ತೀರ ಮಂದಗತಿಯಲ್ಲಿ ಕಾಣಿಸುತ್ತದೆ. ಹೀಗಾಗಿ ಬಹುಕಾಲದಿಂದಲೂ ಉಳಿದುಕೊಂಡು ಬಂದ ಇಲ್ಲಿಯ ಜನಪದ ಸಾಹಿತ್ಯ ಪ್ರಕಾರಗಳಿಗೆ ಹೆಚ್ಚಿನ ಅಪಾಯವೇನೂ ಆಗಿಲ್ಲ.

೩. ಹೈದರಾಬಾದ ಕರ್ನಾಟಕವು ಅನೇಕ ವರ್ಷಗಳವರೆಗೆ ಮುಸ್ಲೀಮರ ಆಡಳಿತಕ್ಕೆ ಒಳಪಟ್ಟುದರಿಂದ ಮತ್ತು ಪರಭಾಷೆಯ ಗಡಿ ಪ್ರದೇಶಗಳಿಗೆ ಈ ಪ್ರದೇಶದ ಗಡಿಗಳು ಹತ್ತಿಕೊಂಡಿರುವುದರಿಂದ–ನಾನಾಕಡೆಗಳಿಂದ ಹರಿದು ಬಂದ ಜನಪದ ಸಾಹಿತ್ಯ ಪ್ರಕಾರಗಳು ಈ ನಾಡಿನಲ್ಲಿ ಪ್ರಚಲಿತದಲ್ಲಿರುವುದನ್ನು ಕಾಣ ಬಹುದಾಗಿದೆ.

೪. ಇನ್ನೊಂದು ಭಾಷೆ, ಸಂಸ್ಕೃತಿಯ ಅತಿಯಾದ ಪ್ರಭಾವಗಳಿಂದ ಒಂದು ಭಾಷೆ ತನ್ನ ಓಜಸ್ಸನ್ನು, ಹರಿತವನ್ನು ಕಳೆದುಕೊಳ್ಳುತ್ತದೆ. ವಿಷಯವನ್ನು ವೈಭವೀಕರಿಸುವ ಗುಣ ಆ ಭಾಷೆಯಲ್ಲಿ ಇಲ್ಲವಾಗುತ್ತದೆ. ಹೀಗಾಗಿ ಸಂಪೂರ್ಣ ವಾಗಿ ಬಾಯಿಮಾತಿನ ಶ್ರೀಮಂತಿಕೆಯನ್ನೇ ಅವಲಂಬಿಸಿದ ಜನಪದ ಸಾಹಿತ್ಯದ ಬೆಳವಣಿಗೆ ಕುಂಠಿತವಾಗುತ್ತದೆ.

ಈ ಮಾತಿಗೆ ಬೀದರ ಜಿಲ್ಲೆ ಒಳ್ಳೆಯ ನಿದರ್ಶನವಾಗಿ ದೊರೆಯುತ್ತದೆ. ವಿಸ್ತೀರ್ಣದಲ್ಲಿ ತೀರ ಚಿಕ್ಕದಾದ ಈ ಜಿಲ್ಲೆ ಪರಭಾಷೆ, ಪರಸಂಸ್ಕೃತಿಗಳ ತುಳಿತಕ್ಕೆ ಈಡಾಗಿ, ಇಲ್ಲಿಯ ಕನ್ನಡ ತನ್ನ ಶ್ರೀಮಂತಿಕೆಯನ್ನು ಕಳೆದುಕೊಂಡು ಬರಡಾಗಿದೆ.

ಇದರಿಂದಾಗಿ ಇಲ್ಲಿ ಜನಪದ ಸಾಹಿತ್ಯದ ವಿಪುಲವಾದ ಬೆಳವಣಿಗೆಗೆ ಪೆಟ್ಟು ಬಿದ್ದಿದೆ. ಅದರಲ್ಲೂ ಜನಪದ ಸಾಹಿತ್ಯದ ದೊಡ್ಡ ಪ್ರಕಾರಗಳಾದ ಕಥೆ, ಬಯಲಾಟಗಳು ಇಲ್ಲಿ ಸಮೃದ್ಧಿಯಾಗಿ ಬೆಳೆಯಲು ಆಗಿಲ್ಲ. ಜನಪದ ಕಥೆಗಳ ಜೀವಂತಿಕೆ–ವಕ್ತಾರನ ಜಾಣ್ಮೆ ಮತ್ತು ಭಾಷೆಯ ಚಮತ್ಕಾರವನ್ನು ಅವಲಂಬಿಸಿದೆ. ಇಲ್ಲಿನ ವಕ್ತಾರನಲ್ಲಿ ಭಾಷೆಯ ಚಮತ್ಕಾರ ಕಾಣದೆ ಕಥಾ ವಿವರಗಳು ತೇಪೆ ಹಾಕಿದಂತೆ ಕಾಣುತ್ತವೆ. ಒಂದೊಂದು ಸಲ ತೀರ ವಿಕಾರತೆಯನ್ನು ಪಡೆಯುತ್ತವೆ.

ರಾಯಚೂರಿನ ಮೇಲೆ ವ್ಯಾಪಕವಾಗಿ ಮುಸ್ಲೀಮ–ಉರ್ದುಗಳ, ಮತ್ತು ಪೂರ್ವದ ಒಂದು ತುದಿಯಿಂದ ತೆಲುಗರ ಪ್ರಹಾರವಾಗಿದೆ. ಆದರೂ ಕೂಡ ಪರಕೀಯ ಪ್ರಭಾವಗಳನ್ನು ತಾಳಿಕೊಂಡು ಸ್ವಂತಿಕೆಯನ್ನು ಪ್ರದರ್ಶಿಸಲು ರಾಯಚೂರು ಸಾಕಷ್ಟು ಹೆಣಗಾಡಿದೆ. ಹೀಗಾಗಿ ಅಲ್ಪಮಟ್ಟಿನ ಜನಪದ ಸಾಹಿತ್ಯದ ಬೆಳವಣಿಗೆ ಇಲ್ಲಿ ಆದಂತೆ ತೋರುತ್ತದೆ.

ಕಲಬುರ್ಗಿ ಜಿಲ್ಲೆ ವಿಸ್ತಾರವಾದ ನಾಡಾದುದರಿಂದ ಪರಕೀಯ ಪ್ರಭಾವ ವಿದ್ದೂ, ಅದರ ಒಳನಾಡುಗಳಲ್ಲಿ ಈ ಪ್ರಭಾವದ ಮೊತ್ತ ಅಲ್ಪಮಟ್ಟಿಗೆ ಪೇಲವವಾಗುತ್ತ ಹೋಗಿದೆ. ಉರ್ದುವಿನ ಪ್ರಭಾವ ಎಲ್ಲಕಡೆ ಕಂಡರೂ ಅದು ಭಾಷೆಯ ಹೊದಿಕೆಯಲ್ಲಿ ಕೆಲ ಪದಗಳನ್ನು ಬಳಸುವಷ್ಟರ ಮಟ್ಟಿಗೆ ನಿಂತು ಹೋಗಿದೆ. ಹೀಗಾಗಿ ಜನಪದ ಸಾಹಿತ್ಯದ ತಕ್ಕಮಟ್ಟಿನ ಬೆಳವಣಿಗೆಗೆ ಪರಕೀಯ ಪ್ರಭಾವ ಪೆಚ್ಚಿನ ಆತಂಕಗಳನ್ನು ಒಡ್ಡಲು ಸಾಧ್ಯವಾಗಿಲ್ಲವೆನಿಸುತ್ತದೆ.

೫. ಸಾಹಿತ್ಯದ ಮೊದಲ ಕೃಷಿ ಜನಪದ ಸಾಹಿತ್ಯ. ಇದರ ಸಹಾಯದಿಂದಲೇ ಪುರಾಣ ಸಾಹಿತ್ಯದ ಉಗಮ ಪ್ರಾರಂಭವಾಗುವದು. ಮೂರನೆಯ ಹಂತ ಶಿಷ್ಟ ಸಾಹಿತ್ಯದ್ದು.

ಪರಕೀಯರ ತೀವ್ರ ಹೊಡೆತಕ್ಕೆ ಒಳಗಾದ ಬೀದರಿನಲ್ಲಿ ವಿಪುಲವಾದ ಜನಪದ ಸಾಹಿತ್ಯದ ಸೃಷ್ಟಿ ನಡೆಯಲಿಲ್ಲ. ತನ್ಮೂಲಕ ರೂಪು ಪಡೆಯುವ ಪುರಾಣಗಳೂ ಕೂಡ ಅಲ್ಲಿಂದ ಹೊರಬರಲಿಲ್ಲ. ಹೀಗಾಗಿ ಬೀದರಿಗೆ ಇವತ್ತಿಗೂ ಪ್ರತಿಭಾವಂತನಾದ ಒಬ್ಬ ಸಾಹಿತಿಯನ್ನು ಕೂಡ ಕೊಡಲಾಗಲಿಲ್ಲ. ಆದರೆ ವಚನಕಾರರ ಕ್ರಾಂತಿ ಮತ್ತು ವಚನಗಳ ನಿರ್ಮಾಣ ನಡೆದು ಹೋದದ್ದು ಪರಭಾಷಾ ಪರಸಂಸ್ಕೃತಿಗಳ ದಬ್ಬಾಳಿಕೆಯ ಪ್ರಭಾವ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಎಂಬುದು ತೀರ ಗಮನಾರ್ಹ ಸಂಗತಿಯಾಗಿದೆ.

ಕಲಬುರ್ಗಿ ಜಿಲ್ಲೆಯಲ್ಲಿ ಕವಿರಾಜಮಾರ್ಗಕಾರ ಮತ್ತು ದೇವರದಾಸಿಮಯ್ಯ ಮುಂತಾದವರು ಆಗಿ ಹೋದದ್ದು ಕೂಡ ಮುಸ್ಲೀಮರ ಆಡಳಿತ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ. ಕಲಬುರ್ಗಿ ಬೀದರಿನಷ್ಟು ಅನಾಹುತಕ್ಕೆ ಒಳಗಾಗಲಿಲ್ಲ.

ಜನಪದ ಸಾಹಿತ್ಯದ ತಕ್ಕಮಟ್ಟಿನ ಬೆಳವಣಿಗೆ ಇಲ್ಲಿ ನಡೆಯಿತು. ಪುರಾಣಕಾರರ ಆಗರವಾಯಿತು.

ರಾಯಚೂರು ಜಿಲ್ಲೆಯಲ್ಲಿ ಕಲಬುರ್ಗಿಗೆ ಸರಿಸಮಾನವಾದ ಜನಪದ ಸಾಹಿತ್ಯದ ಸೃಷ್ಟಿ ನಡೆಯಲಿಲ್ಲವೇನೋ ಅನಿಸುತ್ತದೆ. ಏಕೆಂದರೆ ಕಲಬುರ್ಗಿ ಜಿಲ್ಲೆ ಶರಣರ–ವೈಚಾರಿಕ, ಧಾರ್ಮಿಕ ಕ್ರಾಂತಿಯಿಂದ ಬೀದರಿಗಿಂತಲೂ ವ್ಯಾಪಕವಾಗಿ ಪ್ರಭಾವ ಕ್ಕೊಳಗಾಯಿತು. ಇಲ್ಲಿಯ ಮಠಮಾನ್ಯಗಳು ಜಾಗೃತಗೊಂಡವು. ಈ ಫಲವಾಗಿ ಮುಸ್ಲೀಮ, ಉರ್ದುಗಳ ಪ್ರಭಾವವನ್ನು ಮೀರಿನಿಂತು - ಜನಪರವಾದ ವೀರಶೈವ ಪುರಾಣಗಳು ಬೆಳೆದು ಬಂದವು. ಈ ಪುರಾಣಗಳ ಪರಂಪರೆ ಜನಪದ ಸಾಹಿತ್ಯಕ್ಕೆ ಪೂರಕವಾಗಿ ಬೆಳೆಯಿತು. ಆದರೆ ರಾಯಚೂರು ಜಿಲ್ಲೆ ಮುಸ್ಲೀಮರ ಆಡಳಿತಕ್ಕೆ ತುತ್ತಾದ ನಂತರ ಅದರಿಂದ ತಪ್ಪಿಸಿಕೊಳ್ಳುವ ಯಾವುದೇ ಸಾಂಸ್ಕೃತಿಕ ಕ್ರಾಂತಿ ಅಲ್ಲಿ ನಡೆಯಲಿಲ್ಲ. ಮೇಲಾಗಿ ಮೊದಲಿನಿಂದಲೂ ಹಲವಾರು ಕದನಗಳ ಯುದ್ಧ ಭೂಮಿಯಾಗಿ ರಾಯಚೂರು ಕಾಣಿಸಿಕೊಳ್ಳುತ್ತದೆ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲೂ ಅನೇಕ ಯುದ್ಧಗಳಿಗೆ ತುತ್ತಾಯಿತು. ಹದಿನಾರನೇ ಶತಮಾನದ ಕೊನೆ, ಹದಿನೇಳನೆ ಶತಮಾನದ ಪ್ರಾರಂಭದಲ್ಲಿ ಇದು ದಾಸರ ಕೇಂದ್ರಸ್ಥಾನವಾಗಿ, ದೈವಪರ ವೈದಿಕ ಪುರಾಣಗಳು ಸಾಕಷ್ಟು ಬೆಳಕಿಗೆ ಬಂದವು. ಈ ಎಲ್ಲ ಚಾರಿತ್ರಿಕ ಅಂಶಗಳು ಇಲ್ಲಿಯ ಜನಪದ ಸಾಹಿತ್ಯದ ಸಮೃದ್ಧಿಗೆ ಯಾವ ಸಹಾಯವನ್ನೂ ಮಾಡಲಿಲ್ಲವೆನಿಸುತ್ತದೆ. ಹೀಗಾಗಿ ಈ ಎಲ್ಲ ಅನಾನುಕೂಲಗಳ ಮಧ್ಯ ರಾಯಚೂರಿನಿಂದ ಒಬ್ಬ ಶಿಷ್ಟಸಾಹಿತಿಯೂ ಕಾಣಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ.

ಏನಿದ್ದರೂ ಹೈದರಾಬಾದ ಕರ್ನಾಟಕದ ಜಿಲ್ಲೆಗಳ ಸಾಹಿತ್ಯ ಕೃಷಿ ಜನಪದ ಸಾಹಿತ್ಯ ಮತ್ತು ಪುರಾಣ ಸಾಹಿತ್ಯದ ಹಂತಕ್ಕೇ ನಿಂತಿದ್ದು, ಶಿಷ್ಟಸಾಹಿತ್ಯದ ಬೆಳವಣಿಗೆಗೆ ಆವಶ್ಯಕವಾದ ವಾತಾವರಣ ನಿರ್ಮಾಣವಾಗಲೇ ಇಲ್ಲ ಎಂಬುದನ್ನು ಗಮನಿಸಬೇಕು. ಸೃಷ್ಟಿಗೊಂಡ ಶಿಷ್ಟಸಾಹಿತ್ಯವೂ ಪರಕೀಯ ಪ್ರಭಾವ ಪ್ರಾರಂಭವಾಗುವದಕ್ಕಿಂತ ಮುಂಚಿನದು ಎಂಬುದು ಗಮನಾರ್ಹ ಸಂಗತಿ. 1321 ರಲ್ಲಿ ತುಘಲಕನ ಕಿರಿಕಿರಿ ಪ್ರಾರಂಭಗೊಂಡು, 1347, ಅಗಸ್ಟ 13ರ ನಂತರ, ಸಾರ್ವತ್ರಿಕವಾಗಿ ಈ ಪ್ರದೇಶದ ಮೂರೂ ಜಿಲ್ಲೆಗಳು, ಸುಮಾರು ಆರು ಶತಮಾನಗಳವರೆಗೆ (1347-1948), ಒಂದಿಲ್ಲಾ ಒಂದು ಹಂತದಲ್ಲಿ ಮುಸ್ಲೀಮ ಮತ್ತು ಉರ್ದುವಿನ ಅಧೀನದಲ್ಲಿ ಉಳಿದವು. ಜೊತೆಗೆ ನೆರೆಭಾಷೆ, ಸಂಸ್ಕೃತಿಗಳ ಹೊಡೆತಕ್ಕೆ ತುತ್ತಾದವು. ಹೀಗಾಗಿ ಈ ನಾಡಿನ ಹೆಚ್ಚಿನ ಶಕ್ತಿಯೆಲ್ಲ ಪರಕೀಯ ಪ್ರಭಾವವನ್ನು ಎದುರಿಸುವಲ್ಲಿಯೇ ವ್ಯಯವಾಯಿತೆನ್ನಬೇಕು.

೬. ಇನ್ನು ಜನಪದ ಕಥೆಗಳನ್ನು ಗಮನಿಸಿ ಹೇಳುವುದಾದರೆ–ಕಲಬುರ್ಗಿ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಜನಪದ ಕಥೆಗಳೇ ಸರಿಸುಮಾರಾಗಿ ಬೀದರ ಮತ್ತು

ರಾಯಚೂರು ಜಿಲ್ಲೆಗಳಲ್ಲೂ ಪ್ರಚಾರದಲ್ಲಿವೆ. ಆದರೆ ಬೀದರಿನ ಕಥೆಗಳ ವಿವರಣೆಯಲ್ಲಿ ಸ್ಪಷ್ಟತೆ ಎದ್ದು ಕಾಣಿಸುವದಿಲ್ಲ. ಕಲಬುರ್ಗಿ ಮತ್ತು ರಾಯಚೂರು ಜಿಲ್ಲೆಗಳ ಕಥೆಗಳ ವಿವರಣೆಗಳು ಹೆಚ್ಚಿನಮಟ್ಟಿಗೆ ಒಂದೇ ಬಗೆಯಾಗಿವೆ.

ಹೈದರಾಬಾದ ಕರ್ನಾಟಕದಲ್ಲಿ ದೊರೆಯುವ ಪ್ರಸಿದ್ಧ ಮಾದರಿಗಳು :

ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಅಧ್ಯಯನದ ಬಲದಿಂದ, ರಾಯಚೂರು ಮತ್ತು ಬೀದರ ಕಥೆಗಳ ಅವಲೋಕನದಿಂದ–ಜನಪದ ಕಥಾಮಾದರಿಗಳನ್ನು ಗಮನಿಸುವುದಾದರೆ–ಸುಮಾರು 154 ಜಗತ್ಪ್ರಸಿದ್ಧವಾದ ಕಥಾಮಾದರಿಗಳು ಹೈದರಾಬಾದ ಕರ್ನಾಟಕದ ಪ್ರದೇಶದಲ್ಲಿ ಪ್ರಚಲತದಲ್ಲಿದ್ದುದು ತಿಳಿದು ಬರುತ್ತದೆ.[1] ಅವಳಿ ಜವಳಿ ಸಹೋದರರು (303), ಮಂತ್ರವಾದಿ ಮತ್ತು ಅವನ ಶಿಷ್ಯರು (325), ಹಣ್ಣಿನಲ್ಲಿಯ ಹೆಣ್ಣು (408), ಕೊರಳ ಹಾರದಲ್ಲಿ (ಬಾಹ್ಯ) ಜೀವವಿರುವ ಯುವತಿ–ಯುವಕ (412), ಕಪ್ಪೆಯ ರೂಪದಲ್ಲಿದ್ದ ರಾಜಕುಮಾರ (440), ಸಿಂಡ್ರೆಲ್ಲಾ (510ಎ), ಒಕ್ಕಣ್ಣು ಇಕ್ಕಣ್ಣು ಮುಕ್ಕಣ್ಣು (511), ನಂಬಿಗಸ್ಥ ಸೇವಕ (516), ಮಾಟದ ಮಾವಿನಹಣ್ಣು (567), ಮಾಟದ ಹಕ್ಕಿ ಮತ್ತು ಅಗಲಿದ ಸಹೋದರರು (567), ಹತ್ತುಂಡ್ಯೋ ಬಿಟ್ಟುಂಡ್ಯೋ (571), ಚೋಟು ಹುಡುಗ (700), ಮಾತನಾಡುವ ಗಿಳಿ, ಹಾಡುವ ಗಿಡ, ಬಂಗಾರವರ್ತಿ ನೀರು (707), – ಮುಂತಾದ ಇನ್ನೂ ಅನೇಕ ಪ್ರಸಿದ್ಧ ಮಾದರಿಗಳು ಈ ಪ್ರದೇಶದ ತುಂಬೆಲ್ಲ ದೊರೆಯುತ್ತವೆ.

ಪ್ರಸಿದ್ಧ ಭಾರತೀಯ ಕಥಾಗುಚ್ಛಗಳಾದ ಕಥಾಸರಿತ್ಸಾಗರ, ಪಂಚತಂತ್ರ ; ಗ್ರೀಸಿನ ಇಸೋಫನ ನೀತಿಕಥೆಗಳು, ತುರ್ಕಿದೇಶಗಳಿಗೆ ಸಂಬಂಧಿಸಿದ ಅರೇಬಿಯನ್ ನೈಟ್ಸ್, ಗುಲ್‌ಬಕಾವಲಿ–ಮುಂತಾದವುಗಳಲ್ಲಿಯ ಕಥಾ ಮಾದರಿಗಳ ರೂಪಗಳು ಈ ಭಾಗದಲ್ಲಿ ಕಂಡುಬರುತ್ತವೆ. 'ತಂದೆಯ ಉಪಶಮನಕ್ಕಾಗಿ ಶೋಧ ನಡೆಸಿದ್ದು' (551), ಎಂಬ ಮಾದರಿ ಗುಲ್‌ಬಕಾವಲಿ ಎಂಬ ಪ್ರಸಿದ್ಧ ಕಥೆಯಾಗಿದೆ. ಎರಡು ಪ್ರಸಿದ್ಧ ಮಾದರಿಗಳಾದ ಅಲ್ಲಾವುದ್ದೀನ್ (561), ಸೇಸಮ್ ತೆರೆ–ನಾಲ್ವತ್ತು ಜನ ಕಳ್ಳರು (950) ಎಂಬವು ಅರೇಬಿಯನ್ ನೈಟ್ಸ್ ಕಥಾಗುಚ್ಛದಿಂದ ಪ್ರಸಿದ್ಧಿಗೆ ಬಂದಂತಹುಗಳಾಗಿವೆ.

ತೋಳ ಬಂತಲೇ ತೋಳ (1333), ಕೊಡಲಿ ನೀರಿನಲ್ಲಿ ಬಿದ್ದಿತು. (729) ಅಲ್ಲದೆ–ಹಿಂಬಡಿಯನ್ನು ಕಚ್ಚಿ ಹಿಡಿಯುವದು (5), ಮಂಗವು ಬೆಣ್ಣೆಯನ್ನು ಪಾಲು ಮಾಡಿಕೊಟ್ಟಿತು (51***), ಬಾಯೊಳಗೆ ಮಾಂಸ ಹಿಡಿದ ಕಾಗೆ (57), ಬೆಕ್ಕಿಗೆ

1. ಅವುಗಳ ಯಾದಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ಗಂಟೆ ಕಟ್ಟುವವರು ಯಾರು (110), ಮೊಲ ಮತ್ತು ಆಮೆಯ ಸ್ಪರ್ಧೆ (275ಎ) -ಮುಂತಾದ ಇನ್ನೂ ಕೆಲವು ಪ್ರಾಣಿಕಥೆಗಳು ಇಸೋಫನ ನೀತಿ ಕಥೆಗಳಿಂದ ಪ್ರಸಿದ್ಧವಾದವುಗಳಾಗಿವೆ. ಪ್ರಾಣಿಕಥೆಗಳ ಇನ್ನೂ ಹೆಚ್ಚಿನ ಮಾದರಿಗಳಾದ ಮುಂಗುಲಿ ಮತ್ತು ಬ್ರಾಹ್ಮಣ (178ಎ), ಆನೆ ಮತ್ತು ಟಿಟ್ಟಿಭ (248ಎ) ಮುಂತಾದ ಕಥೆಗಳು ಪಂಚತಂತ್ರದಿಂದ ಬಂದವುಗಳಾಗಿವೆ. ಇವಲ್ಲದೆ-ಅಕಬರ ಬೀರಬಲ್ಲರ ಕಥೆಗಳು, ಕಾಳಿದಾಸ ಭೋಜರಾಜರ ಕಥೆಗಳು, ಬತ್ತಿಸ ಪುತ್ಥಳಿಯ ಕಥೆಗಳು, ಬೇತಾಳನ ಕಥೆಗಳು, ಚಂದ್ರಹಾಸ ಚರಿತೆ – ಮುಂತಾದ ಕೃತಿಗಳಲ್ಲಿ ದೊರೆಯುವ ಅನೇಕ ಕಥಾಮಾದರಿಗಳು ಹೈದರಾಬಾದ ಕರ್ನಾಟಕದ ಪ್ರದೇಶದಲ್ಲಿ ಪ್ರಚಲಿತದಲ್ಲಿವೆ.

ಈ ಪ್ರದೇಶದಲ್ಲಿ ಪ್ರಾಣಿಕಥೆಗಳು ತೀರ ಕ್ವಚಿತ್ತಾಗಿ ದೊರೆಯುತ್ತವೆ. ಸಿಗುವ ಕಥೆಗಳಲ್ಲಿ – ಹೆಚ್ಚಿನವು ಈಗಾಗಲೇ ಪ್ರಸಿದ್ಧ ಪ್ರಾಣಿ ಕಥಾಸಂಕಲನಗಳಾದ ಪಂಚ ತಂತ್ರ, ಇಸೋಫನ ನೀತಿಕಥೆಗಳು ಮುಂತಾದವುಗಳಲ್ಲಿ ಕಾಣಿಸಿಕೊಂಡವುಗಳು. ಅದರಲ್ಲೂ ಕೆಲವು ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಪಠ್ಯಪುಸ್ತಕಗಳಿಂದ ಪ್ರಸಿದ್ಧಿಯಾದಂತವುಗಳು. ಹೊಸ ಪ್ರಾಣಿಕಥೆಗಳೇನಾದರೂ ದೊರೆಯಬಹುದೇ ಎಂದು ಪ್ರಯತ್ನ ಮಾಡಿದರೆ - ಬಹಳವೆಂದರೆ ಬೆರಳೆಣಿಕೆಯ ಮಾದರಿಗಳನ್ನು ಮಾತ್ರ ಗುರುತಿಸಲು ಸಾಧ್ಯವಾಗಬಹುದಾಗಿದೆ. ಈ ಪ್ರಾಣಿಕಥೆಗಳಲ್ಲಿ ನರಿ ಮತ್ತು ಮಂಗಗಳು ಕ್ರಮವಾಗಿ ಮೊದಲನೆಯ ಮತ್ತು ಎರಡನೆಯ ತಂತ್ರಿಗಳಾಗಿ ಕಾಣ ಸಿಗುತ್ತವೆ. ಕೇವಲ ಪ್ರಾಣಿಕಥೆಗಳಲ್ಲಿ ಅಲ್ಲದೆ, ಸಾಮಾನ್ಯ ಜನಪದ ಕಥೆಗಳಲ್ಲೂ ನರಿ ಮತ್ತು ಮಂಗಗಳೇ ತಂತ್ರಿಗಳಾಗಿ ಪಾತ್ರವಾಡುವುದನ್ನು ನೋಡಬಹುದಾಗಿದೆ.

ಉಪಸಂಹಾರ :

'ಕೆರೆ ಹಳ್ಳ ಬಾವಿಗಳು ಮೈದೆಗೆದರೆ–ಗುಳ್ಳೆ, ಗೊರಜೆ, ಚಿಪ್ಪುಗಳು ಕಾಣು ವಂತೆ, ವಾರಿಧಿ ಮೈದೆಗೆದರೆ ರತ್ನಗಳು ಕಾಣುವಂತೆ,' ಜನಪದ ಕಥೆಗಳು ಮೈದೆಗೆದರೆ ಗತೇತಿಹಾಸದ ಕುರುಹುಗಳನ್ನು, ಪ್ರಸ್ತುತ ಜೀವನವು ಆ ಗತಕಾಲದೊಂದಿಗೆ ಬೆಸೆದು ಕೊಂಡ ಕೊಂಡಿಗಳನ್ನು ಕಾಣಬಹುದಾಗಿದೆ. ಅದಕ್ಕಾಗಿ ಜನಪದ ಕಥೆಗಳನ್ನು ಪ್ರಾದೇಶಿಕ ಮಟ್ಟದಲ್ಲಿ ಅಧ್ಯಯನ ಮಾಡುವಾಗ, ಈ ಕಥೆಗಳು ಸಾಂಸ್ಕೃತೀಕರಣ ಗೊಂಡ ಬಗೆಯನ್ನು ಶೋಧಿಸುವ ಕೆಲಸ ಮಾಡಬೇಕಾಗುತ್ತದೆ. ಹಾಗೆ ಮಾಡಿದಾಗ ಒಂದು ನಾಡಿನ ಇಡಿಯಾದ ಚರಿತ್ರೆಯ ಛಾಯೆಯ ಎಳೆಗಳು ಅವುಗಳ ಆಳದಲ್ಲಿ ಹುದುಗಿರುವುದನ್ನು ಕಾಣುತ್ತೇವೆ. ಹೀಗೆ ಒಂದು ನಾಡಿನ ಚಾರಿತ್ರಿಕ, ಸಾಂಸ್ಕೃತಿಕ ರಂಗಪರಿಕರಗಳ ಸಹಾಯದಿಂದಲೇ ವ್ಯಾಪಕವಾಗಿ ವಿಶ್ವದಾದ್ಯಂತ ತೋರುವ ಸಮಾನ ಕ್ರಿಯೆಗಳನ್ನು ಒಂದು ಕಥೆ ಪ್ರದರ್ಶಿಸುತ್ತಿರುತ್ತದೆ.

ಹೈದರಾಬಾದ ಕರ್ನಾಟಕದ ಕಥೆಗಳ ಆವರಣಗಳನ್ನು ಬಿಚ್ಚಿ ನೋಡಿದರೆ ಅಲ್ಲೆಲ್ಲ ಇಡೀ ಕರ್ನಾಟಕದ, ತನ್ಮೂಲಕ ಇನ್ನೂ ವ್ಯಾಪಕವಾಗಿ ಇಡೀ ಇಂಡಿಯಾದ ಸಾಂಸ್ಕೃತಿಕ, ಚಾರಿತ್ರಿಕ, ಪರಿಸರಗಳನ್ನು ಕಾಣಬಹುದಾಗಿದೆ : ಮೊದಲನೆಯದಾಗಿ, ಹೈದರಾಬಾದ ಕರ್ನಾಟಕದ ಕಥೆಗಳಲ್ಲಿ, ಮುಸ್ಲೀಮ ಆಡಳಿತದ ಕುರುಹುಗಳಾಗಿ–ನ್ಯಾಯಾಧೀಶ ಖಾಜಿಯನ್ನು, ಗಸ್ತಿ ತಿರುಗುವ ಸಾಬನನ್ನು, ಜವಾಬಕೊಡುವ ಮುಲ್ಲಾನನ್ನು, ಮಾಟಗಾರ ಭಿಕ್ಷುಕರಾದ ಬಾವಾ, ಫಕೀರಸಾಬರುಗಳನ್ನು ಕಾಣಬಹುದಾಗಿದೆ. ಇವರಿಗಿಂತಲೂ ಮಿಗಿಲಾಗಿ, ಬಹುಕಾಲದ ಹಿಂದೆ ವೈಭವದ ದಿನಗಳನ್ನು ಕಂಡ ರಾಜ-ಮಹಾರಾಜರು, ಮಂತ್ರಿ–ಮಹೋದಯರು, ರಾಜಕುಮಾರ-ರಾಜಕುಮಾರಿಯರು–ಕಥೆಗಳ ತುಂಬ ಅಡ್ಡಾಡುತ್ತಾರೆ. ಕಾದಾಡುತ್ತಾರೆ. ಶೌರ್ಯ ಸಾಹಸಗಳನ್ನು ಮೆರೆಯುತ್ತಾರೆ. ಅರಸರ ಮನೆಯಲ್ಲಿ ಅರಸರ ಹೆಂಗಸರ (ಬಿಬಿಜಿ, ಗದ್ದಲ. ಮನೆಯಲ್ಲಿ ರಾಣಿಯರು, ನೆರೆಮನೆಯಲ್ಲಿ ಮಾನದನ್ನೆಯರು. ಅರಸನ ಆಡಳಿತದಲ್ಲಿ ನೆರವಾಗುವ-ರಾಜಸೇವಕರು, ಪರಿಚಾರಕರು, ಸೈನಿಕರು, ಚಾಂಡಾಲರು ಮುಂತಾದವರು. ಇವರೆಲ್ಲ ನಮ್ಮವರೆ. ನಮ್ಮ ನಾಡಿನವರೆ.

ಕಥೆಗಳ ತುಂಬ ಹರಡಿಕೊಂಡಿರುವವು ಒಂದಾನೊಂದು ಕಾಲಕ್ಕೆ ಆಳರಸರುಗಳನ್ನು ಕಂಡು ವಿಜೃಂಭಿಸಿದ, ಸುತ್ತಲೂ ಕೋಟೆ (ಬೇಲಿ), ಕೊತ್ತಲುಗಳುಳ್ಳ ಹೆಬ್ಬಾಗಿಲಿನ (ಅಗಸಿ) ಊರುಗಳು, ಊರನ್ನಾಳುವಗೌಡ, ಕಾನೂನು ಬಲ್ಲ ಕುಲಕರ್ಣಿ, ಊರಬಾಗಿಲ ಕಾಯುವ ತಳವಾರ, ರಾತ್ರಿ ಗಸ್ತು ತಿರುಗುವ ವಾಲಿಕಾರ, ಡಂಗೂರ ಸಾರುವ ಮಾದಿಗ—ಇವರೆಲ್ಲ ಅರಸನ ಆಡಳಿತ ವರ್ಗಕ್ಕೆ ಸೇರಿದವರು. ಅವನ ಆಜ್ಞೆಯಂತೆ ಊರಿನ ದಿನನಿತ್ಯದ ಆಗುಹೋಗುಗಳನ್ನು ನೋಡಿಕೊಳ್ಳುವ ಜವಾಬ್ದಾರರು.

ಊರೆಂದಮೇಲೆ ಅದಕ್ಕೊಂದು ಹೊಲಗೇರಿ. ನೂರೆಂಟು ಜಾತಿ ಜನಾಂಗಗಳು. ಉದ್ಯೋಗಸ್ಥರು. ಸಾಮಾಜಿಕ ಹೊರೆಗಳನ್ನು ಹೊತ್ತ ಆಯಗಾರರು : ಕಟ್ಟಿಗೆಯ ಕುಶಲಕರ್ಮಿ ಬಡಿಗ, ಕಬ್ಬಿಣ ಕಾಸಿ ಕುಡಗೋಲು ಕುರುಪಿ ತಯಾರಿಸುವ ಕಂಬಾರ, ಗಡಿಗೆ ಮಡಿಕೆಗಳ ಕುಂಬಾರ, ಬಟ್ಟೆ ತೊಳೆಯುವ ಅಗಸ, ಎಣ್ಣೆ ತೆಗೆಯುವ ಗಾಣಿಗ, ಹೂಪತ್ರೆಯ ಜೀರ, ಕ್ಷೌರ ಮಾಡುವ ನಾವಿದ, ಇವರೆಲ್ಲರಿಗೂ ಮಿಕ್ಕಿದ ಮನೆಯ ಲೆಂಕಮಗ. ಎಲ್ಲ–ಎಲ್ಲರೂ ನಮ್ಮವರೆ. ಖಾಸ ನಮ್ಮೂರ ಮಣ್ಣಿನ ಮಕ್ಕಳೆ. ಈ ಮಕ್ಕಳ ರೂಪವನ್ನು ನೀವು ಬೇರೊಂದು ದೇಶದಲ್ಲಿ ಕಾಣಲಾರಿರಿ. ಇವರಷ್ಟೆ ಅಲ್ಲ-ರೈತ, ಬ್ಯಾಡ, ಬೆಸ್ತ, ವ್ಯಾಪಾರಿ, ಬಳೆಗಾರ, ಮಣಿಗಾರ, ಮುತುಗಾರ, ಗೊಲ್ಲ, ಡೊಂಬ, ಕೊರವ, ಬ್ರಾಹ್ಮಣ, ಬುಡಬುಡಕ್ಯಾ. ಜಂಗಮ, ಅಕ್ಕಸಾಲಿ, ವೈದ್ಯ. ಇವರೆಲ್ಲ ನಮ್ಮ ಕಥೆಗಳಲ್ಲಿ ಕಾಣಸಿಗುವ ಸಾಮಾಜಿಕರು.

ಇಲ್ಲಿಯ ಕೌಟುಂಬಿಕ ದೃಶ್ಯಗಳಲ್ಲಿ ಕಾಣಸಿಗುವವರು ಬೇರೆ ಯಾರೂ ಅಲ್ಲ, ನಾವೇ. ನಾನು-ನೀವು. ನಮ್ಮಜ್ಜ-ಅಜ್ಜಿ, ಅಪ್ಪ–ಅವ್ವ, ನಮ್ಮ ಒಡಹುಟ್ಟಿದವರು, ನಮ್ಮ ಹೆಂಡರು-ಮಕ್ಕಳು, ಅಳಿಯ-ಮಾವ, ಭಾವ-ಮೈದುನ, ಅತ್ತೆ–ಸೊಸೆ, ನಾದಿನಿ-ನೆಗೆಯಣ್ಣಿ. ಎಲ್ಲರೂ ನಮ್ಮ ನಿಮ್ಮ ಸಂಬಂಧಿಕರೇ. ಹರಿದು ಹಂಚಿದ ಕರುಳ ಬಳ್ಳಿಯವರೇ. ಇವರ ಜೊತೆಗೆ ಮುಂದುಕ-ಮುದುಕಿ, ಪಾರ-ಪೋರಿ ಎಲ್ಲರೂ ನಾವು ನಂಬಿದಂತೆ, ನಮ್ಮ ಸಂಪ್ರದಾಯಂಗಳಂತೆ ಪಾತ್ರವಾಡುತ್ತಾರೆ. ಮದುವೆ ಮುಂಜಿವೆಗಳನ್ನು ಮಾಡಿಕೊಳ್ಳುತ್ತಾರೆ. ಹೆಂಡರು - ಮಕ್ಕಳಿಗಾಗಿ ತೊಳಲಾಡುತ್ತಾರೆ. ಹರಕೆ ಹೊರುತ್ತಾರೆ. ಪೂಜೆ ಸಲ್ಲಿಸುತ್ತಾರೆ.

ನಾವು ಪೂಜಿಸುವ ದೈವಗಳು - ಅದೇ ಊರ ಹೊರಗಿನ ಹನುಮ, ನಮ್ಮ ದರಿದ್ರ ಹಣೆಬರಹ ಬರೆಯುವ ಶಟವಿ. ಶಿವ-ಪಾರ್ವತಿಯರು ಎಲ್ಲರಿಗೂ ಮಿಗಿಲಾದ ವರು. ಆದರೂ ನಮ್ಮ ನಿಮ್ಮಂತೆ ಭೂಮಿಯ ಮೇಲೆ ಅಡ್ಡಾಡುತ್ತಾರೆ. ಬೇಕಾದವರು ಕರೆದರೆ ಓಗೊಡುತ್ತಾರೆ. ಮಳಿರಾಜ, ಚಂದ್ರರಂತೂ ತೀರ ಲಂಪಟ ಮಹಾಶ ಯರು. ನಮ್ಮ ಮಾವಂದಿರು, ಚೆಂದದ ಹೆಣ್ಣನ್ನು ಕಂಡರೆ ಭೂಮಿಯ ಮೇಲೆ ಬಂದು ಬೀಗಸ್ತನ ಮಾಡುವವರು. ಆಕಾಶದಲ್ಲಿರುವ ಗಂಡಸರ ಪಾಡು ಇದಾದರೆ ಹೆಂಗಸರೇನೂ ಕಡಿಮೆಯವರಲ್ಲ. ದೇವಗನ್ನಕಿಯರು, ಗಂಧರ್ವಕನ್ಯೆಯರು, ಬೇಕಾದ ಚಂದದ ಗಂಡು ಸಿಕ್ಕರೆ, ಅಂತರ್ತಿ ಇರುವುದನ್ನು ಬಿಟ್ಟು ಅಂಜಿಕೆಯಿಲ್ಲದೆ ಭೂಮಿಯ ಮೇಲೆ ಸಂಸಾರ ಹೂಡುತ್ತಾರೆ. ಇವರೆಲ್ಲರಿಗೂ ಮಿಕ್ಕಿ-ಸತ್ತು ದೆವ್ವಾದವರು, ಅಡವಿಯಲ್ಲಿ ಬದುಕಿ ರಾಕ್ಷಸರೆನಿಸಿಕೊಂಡವರು. ಎಲ್ಲರೂ ನಮಗೆ ಮೊದಲಿನಿಂದಲೂ ಪರಿಚಯಸ್ಥರೆ. ಅಜ್ಜಿಯ ಸೀರೆಗೋ ಅಜ್ಜನ ಪಂಜೆಗೋ ಹತ್ತಿಕೊಂಡವರೇ.

ಇವರೆಲ್ಲ ಕಥೆಗಳಲ್ಲಿ ಪ್ರವೇಶಿಸಿ ತಮ್ಮ ತಮ್ಮ ಸ್ವಭಾವಗಳಿಗೆ ತಕ್ಕಂತೆ ವರ್ತಿಸು ತ್ತಾರೆ. ಅಳುತ್ತಾರೆ, ನಗುತ್ತಾರೆ. ಈ ಸಹಜ ವರ್ತನೆಗಳೊಂದಿಗೆ ಒಬ್ಬೊಬ್ಬರೂ ಕಥೆಯ ಒಟ್ಟು ಕ್ರಿಯೆಯ ಹಿನ್ನೆಲೆಯಲ್ಲಿ ಪಾತ್ರವಾಡುತ್ತಿರುತ್ತಾರೆ. ಅರ್ಥಾತ್ ಈ ವರ್ತನೆಗಳೇ ಕಥೆಯ ಕ್ರಿಯೆಗಳನ್ನು ಹುಟ್ಟುಹಾಕುತ್ತವೆ. ಪ್ರಪಂಚದಲ್ಲೆಲ್ಲ ಒಂದೇ ರೂಪದಲ್ಲಿ ಕಾಣಿಸುವ ಕಥೆಗಳನ್ನು ಹೆಣೆಯುತ್ತವೆ. ಇದೊಂದು ವಿಚಿತ್ರ ಕುಶಲಕಲೆ.

ಹೋಳಿಗೆ ತಯಾರಿಸಲು ಬೇಕಾದ ಬ್ಯಾಳಿ-ಬೆಲ್ಲ, ಹೂರಣ-ಕಣಕ, ಒಲೆ-ಹಂಚು, ಎಲ್ಲ ನಮ್ಮ ಸ್ವಂತ ಮನೆಯವೆ. ಹೋಳಿಗೆ ಮಾಡಲು ಕುಳಿತ ಮಂದು ಕಿಯೂ ನಮ್ಮವಳೆ. ಆದರೆ ಆಕೆ ಲಟ್ಟಿಸಿದ ಹೋಳಿಗೆಯಲ್ಲಿ ಪ್ರಪಂಚವೆ ಕಾಣಿಸುವ ದೊಂದು ಸೋಜಿಗದ ಸಂಗತಿ.

ಅನುಬಂಧ

ಹೈದರಾಬಾದ ಕರ್ನಾಟಕದ ಜನಪದ ಕಥೆಗಳ ಮಾದರಿ ಸೂಚಿ

[ಕಲಬುರ್ಗಿ ಜಿಲ್ಲೆಯ ಜನಪದ ಕಥೆಗಳ ಆಧಾರದಿಂದ ತಯಾರಿಸಲ್ಪಟ್ಟಿದ್ದು, ನನ್ನ ಅಪ್ರಕಟಿತ Ph.D ನಿಬಂಧದಿಂದ ಎತ್ತಿಕೊಳ್ಳಲಾಗಿದೆ.]

I ಪ್ರಾಣಿ ಕಥೆಗಳು

1-299 : ಪ್ರಾಣಿಕಥೆಗಳು

1-99 : ಕಾಡುಪ್ರಾಣಿಗಳು

5. ಹಿಂಬಡಿಯನ್ನು ಕಚ್ಚಿ ಹಿಡಿಯುವುದು.
9ಬಿ. ಬೆಳೆಯ ಪಾಲುಗಾರಿಕೆಯಲ್ಲಿ ನರಿ ಧಾನ್ಯ ತೆಗೆದುಕೊಂಡಿತು.
51.***ಮಂಗವು ಬೆಣ್ಣೆಯನ್ನು ಪಾಲು ಮಾಡಿಕೊಟ್ಟಿತು.
57. ಬಾಯೊಳಗೆ ಮಾಂಸ ಹಿಡಿದ ಕಾಗೆ.
66ಎ. ಓಗೊಡು ಮನೆ.
68. ಸತ್ತ ಪ್ರಾಣಿಯ ದೇಹದೊಳಗೆ ಸಿಕ್ಕುಬಿದ್ದ ನರಿ.
68ಎ ಗಡಿಗೆಯಲ್ಲಿ ಮುಖ ತುರುಕಿದ ಪ್ರಾಣಿ ಹಾಗೂ ಮೂರ್ಖ ನ್ಯಾಯವಾದಿ.
73. ಕಾವಲುಗಾರರನ್ನು ಕುರುಡಾಗಿಸುವುದು.
91. ಎದೆಯ ಕಾಳಜವನ್ನು ಗಿಡದಲ್ಲಿ ಬಿಟ್ಟುಬಂದ ಮಂಗ.
92. ತನ್ನ ಪ್ರತಿಬಿಂಬವನ್ನೇ ಸಂಹಾರಮಾಡಲು ಬಾವಿಗೆ ಜಿಗಿದ ಸಿಂಹ.

100-149 : ಕಾಡುಪ್ರಾಣಿಗಳು ಹಾಗೂ ಸಾಕು ಪ್ರಾಣಿಗಳು

110. ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ?

150-199 ಮಾನವ ಮತ್ತು ಕಾಡು ಪ್ರಾಣಿಗಳು.

155. ಕೃತಘ್ನ ಹಾವು (ಹುಲಿ, ಮೊಸಳೆ) ತಿರುಗಿ ಬಂಧನಕ್ಕೊಳಗಾಯಿತು.
160. ಕೃತಘ್ನ ಪ್ರಾಣಿಗಳು, ಕೃತಜ್ಞ ಮನುಷ್ಯ-ತಗ್ಗಿನಿಂದ ಕಾಪಾಡುವುದು.
170ಎ. ಬಾಲ ಹೋಗಿ ಕತ್ತಿ ಬಂತು ಡುಂಡುಂ: (ಜಾಣ ಪ್ರಾಣಿ ಹಾಗೂ ಭಾಗ್ಯಶಾಲಿ ಬದಲಾವಣೆಗಳು). 2029ಸಿ*.

177. ಕಳ್ಳ ಮತ್ತು ಹುಲಿ.

178ಎ. ಬ್ರಾಹ್ಮಣನೂ ಹಾಗೂ ಮುಂಗುಸಿಯು.

200-219 : ಸಾಕು ಪ್ರಾಣಿಗಳು.

207ಸಿ. ನ್ಯಾಯದ ಗಂಟೆ : ಪ್ರಾಣಿಗಳು ಗಂಟೆ ಬಾರಿಸಿ ನ್ಯಾಯ ಬೇಡಿದವು.

214ಎ. ಕತ್ತೆಯು ಒದರಿದುದರಿಂದ ಒಂಟೆ ಹಾಗೂ ಕತ್ತೆ ಎರಡನ್ನೂ ಸೆರೆ ಹಿಡಿಯಲಾಯಿತು (ಜೆ 2137.6).

214ಬಿ. ಹುಲಿಯ (ಸಿಂಹದ) ತೊಗಲನ್ನು ಹೊದ್ದ ಕತ್ತೆ ಕೂಗಿಕೊಂಡಾಗ ಅದರ ನಿಜಸ್ಥಿತಿ ಹೊರಬಿದ್ದಿತು.

217. ಬೆಕ್ಕು ಮತ್ತು ದೀಪ.

220-249 : ಪಕ್ಷಿಗಳು

232ಡಿ*. ಕಾಗೆ ತನಗೆ ನೀರು ಕುಡಿಯಲು ಸಾಧ್ಯವಾಗುವಂತಾಗಲು ನೀರಿರುವ ಜಗ್ಗಿನಲ್ಲಿ ಹರಳುಗಳನ್ನು ಹಾಕಿತು (ಜೆ 101).

239. ಚಿಗರಿ ಬಲೆಯಿಂದ ಪಾರಾಗಲು ಕಾಗೆ ಸಹಾಯ ಮಾಡಿತು.

240ಎ*. ನೊಣ (ಇರುವೆ) ನೀರಿನಲ್ಲಿ ಬಿದ್ದಿತು.

248ಎ. ಆನೆ ಮತ್ತು ಟಿಟ್ಟಿಭ.

275-299 : ಇತರ ಪ್ರಾಣಿಗಳು ಮತ್ತು ವಸ್ತುಗಳು

275ಎ. ಮೊಲ ಮತ್ತು ಆಮೆಯ ಸ್ಪರ್ಧೆ

285ಜಿ*. ಮನುಷ್ಯನ ಹೊಟ್ಟೆಯಿಂದ ಹಾವು ಹೊರಬಂದಿತು.

II. ಸಾಮಾನ್ಯ ಜನಪದ ಕಥೆಗಳು

300–749 : ಎ–ಮಾಂತ್ರಿಕ ಕಥೆಗಳು

300–399 : ಅದ್ಭುತ ಎದುರಾಳಿಗಳು

300–359 : ರಾಕ್ಷಸ, ಸರ್ಪ, ದೆವ್ವ ಇತ್ಯಾದಿಗಳು ಸೋಲನಪ್ಪಿದವು.

301. ಅಪಹರಿಸಲ್ಪಟ್ಟ ರಾಜಕುಮಾರಿ.

302. ರಾಕ್ಷಸ (ದೈತ್ಯ, ಭೂತ)ನ ಬಾಹ್ಯಜೀವ ಗಿಳಿಯಲ್ಲಿ.

302ಎ. (+462) : ಯುವಕನನ್ನು ದೈತ್ಯರಲ್ಲಿಗೆ ಕಳುಹಿಸಲಾಯಿತು.

303. (+413+448) : ಅವಳಿ-ಜವಳಿ ಸಹೋದರರು.

306ಎ. ಅಪ್ಸರೆಯನ್ನು ಪಡೆಯುವುದು–413.

315ಎ. ರಾಕ್ಷಸೀ ಸಹೋದರಿ.

316. ಕೆರೆಯೊಳಗಿನ ಜಕಣಿಯರು.

325. ಮಂತ್ರವಾದಿ ಮತ್ತು ಅವನ ಶಿಷ್ಯರು.

400–459 : ಅಸಾಧಾರಣ ಇಲ್ಲವೆ ಮಾಟಕ್ಕೊಳಗಾದ ಪತಿ-ಪತ್ನಿ ಅಥವಾ ಇತರ ಸಂಬಂಧಿಕರು.

400–424 : ಪತ್ನಿ

402. ವಧುವಾದ ಕಪ್ಪೆ.

408. ಹಣ್ಣಿನಲ್ಲಿಯ ಹೆಣ್ಣು — 780 ಎ.

411. (+285ಬಿ*) : ಜಮೀನ್ದಾರ ಮತ್ತು ನಾಗಕನ್ಯ.

412. ಕೊರಳಹಾರದಲ್ಲಿ (ಬಾಹ್ಯ) ಜೀವವಿರುವ ಯುವತಿ (ಯುವಕ) (ಇ 711.4).

413. (303+306ಎ+408+465) : ಬಟ್ಟೆ ಕದ್ದು ಅಪ್ಸರೆಯನ್ನು ಮದುವೆಯಾಗುವುದು.

425–449 : ಪತಿ

432. ಪಕ್ಷಿರೂಪದ ರಾಜಕುಮಾರ.

437. ಮೋಸದಿಂದ ಅವಾಂತರಗೊಂಡ ಹೆಂಡತಿ, ಅಥವಾ ಮಾಟದ ಮುಳ್ಳು ಚುಚ್ಚುವುದರಿಂದ ಸಾವನ್ನಪ್ಪಿದ ನಾಯಕ.

440. ಕಪ್ಪೆಯ ರೂಪದಲ್ಲಿದ್ದ ರಾಜಕುಮಾರ.

449. ಸನ್ಯಾಸಿಯೊಂದಿಗೆ ಸಂಗ ಬೆಳೆಸಿ ರಾಜನನ್ನು ನಾಯಿಯಾಗಿಸಿದ ರಾಣಿ

459. ಕಣಕದ ಗೊಂಬೆಯನ್ನು ನಿಜ ಕೂಸೆಂದೇ ನಂಬಿಸಲಾಯಿತು.

460–499 : ಅದ್ಭುತ ಕಥೆಗಳು

460–462 : ಪ್ರಶ್ನೆಗಳು

461 ಎ. ದೇವರ ಭೇಟಿಗಾಗಿ ಪ್ರಯಾಣ : ಉಪದೇಶ ಪಡೆಯಲು ಅಥವಾ ಪ್ರತಿಫಲಕ್ಕಾಗಿ.

462. ಹೊರದೂಡಲ್ಪಟ್ಟ ರಾಣಿಯರು ಮತ್ತು ರಾಕ್ಷಸಿ (ದೈತ್ಯ) ರಾಣಿ: 590.

465. (+413) : ತನ್ನ ಸುಂದರ ಹೆಂಡತಿಗೋಸ್ಕರ ಕಿರುಕುಳಕ್ಕೊಳಗಾದ ವ್ಯಕ್ತಿ.

500–559 : ಅಸಾಮಾನ್ಯ ಸಹಾಯಕರು

510ಎ. ಮಂಸುರೆ ತಿಕ್ಕುವವಳು (ಸಿಂಡ್ರೆಲ್ಲಾ).

511. ಒಕ್ಕಣ್ಣು, ಇಕ್ಕಣ್ಣು, ಮುಕ್ಕಣ್ಣು.

516. (+1511+916) : ನಂಬಿಗಸ್ಥ ಸೇವಕ.

516ಎ. ರಾಜಕುಮಾರಿಯ ಸಾಂಕೇತಿಕ (ಒಗಟಿನ) ಮಾತುಗಳು.

530-559 : ಸಹಾಯಕ ಪ್ರಾಣಿಗಳು

534. (+511+511ಎ**). ಎಮ್ಮೆಗಳನ್ನು ಕಾಯುವ ಯುವಕ.

550. ಹಕ್ಕಿ, ಕುದುರೆ ಮತ್ತು ರಾಜಕುಮಾರಿ. (ಭಾರತದ ಕಥಾಮಾದರಿ ಸೂಚಿ).

551. (+507ಸಿ+875ಡಿ). ತಂದೆಯ ಅದ್ಭುತ ಉಪಶಮನಕ್ಕಾಗಿ ಶೋಧ ನಡೆಸಿದ್ದು.

560-649 : ಮಾಟದ ಸಾಧನಗಳು

560-568 : ನಾಯಕನಿಂದ ಮಾಟದ ವಸ್ತು ಅಪಹರಿಸಲ್ಪಟ್ಟಿತು, ಆದರೆ ಆತ ಅದನ್ನು ತಿರುಗಿ ಪಡೆಯಲು ಒತ್ತಾಯಿಸಿದನು

560. ಮಾಟದ ಉಂಗುರ.

561. ಅಲ್ಲಾವುದ್ದೀನ.

566. ಮೂರು ಮಾಟದ ಸಾಧನಗಳು ಮತ್ತು ಅದ್ಭುತ ಹಣ್ಣುಗಳು.

567. ಮಾಟದ (ಮಾವು) ಹಕ್ಕಿಯ ಹೃದಯ.

567ಎ. ಮಾಟದ ಹಕ್ಕಿ ಮತ್ತು ಅಗಲಿದ ಸಹೋದರರು.

571. ಹತ್ತೆಂಡ್ಯೋ ಬಿಟ್ಟೆಂಡ್ಯೋ.

590. ರಾಜಕುಮಾರ ಮತ್ತು ಕೈಗಂಟೆ (ದಿ ಪ್ರಿನ್ಸ್ ಅಂಡ್ ಆರ್ಮಬ್ಯಾಂಡ್ಸ್).

610-619 : ಮಾಂತ್ರಿಕ ಉಪಶಮನಗಳು

612ಎ. ಕೃತಘ್ನ ಹೆಂಡತಿಯನ್ನು ಮರುಜೀವಗೊಳಿಸುವುದು.

613. ಇಬ್ಬರು ಯಾತ್ರಿಕರು (ಪುಣ್ಯವಂತ ಮತ್ತು ಸೋಟ).

650-699 : ಅಸಾಮಾನ್ಯ ಸಾಮರ್ಥ್ಯ ಅಥವಾ ಜ್ಞಾನ

655. ಬುದ್ಧಿವಂತ ಸಹೋದರರು–ಹಾದರಕ್ಕೆ ಹುಟ್ಟಿದ ರಾಜನು.

674. ತಪ್ಪಿ ಹೋದ ಹಾದರ–ಮಾತನಾಡುವ ಪ್ರಾಣಿ–516ಎ.

676. ಸೇಸಮ್ ತೆರೆ. ಅಲಿಬಾಬಾ ಮತ್ತು ನಾಲ್ವತ್ತು ಜನ ಕಳ್ಳರು.

700-749 : ಇತರ ಅದ್ಭುತ ಕಥೆಗಳು

700. ಚೋಟು ಹುಡುಗ.

705-712 : ಹೊರದೂಡಲ್ಪಟ್ಟ ಹೆಂಡತಿ ಅಥವಾ ಕನ್ಯ

707. ಮಾತನಾಡುವ ಗಿಳಿ, ಹಾಡುವ ಗಿಡ, ಬಂಗಾರವರ್ತಿ ನೀರು.

709ಎ. ರಾಕ್ಷಸನ ಹಲ್ಲು ನೆಟ್ಟ ಮಗಳು.

729. ಕೊಡಲಿ ನೀರಿನಲ್ಲಿ ಬಿದ್ದಿತು.

736. ದೈವ ಮತ್ತು ದ್ರವ್ಯ.

750–849 : ಬಿ. ಧಾರ್ಮಿಕ ಕಥೆಗಳು

750–779 : ದೇವರ ಪ್ರತಿಫಲ ಮತ್ತು ಶಿಕ್ಷೆ

750ಸಿ. ನೀಚ ಹೆಂಗಸಿಗೆ ಶಿಕ್ಷೆ.

750*. ಅತಿಥಿಯ ಆಶೀರ್ವಾದ.

780-789 : ಸತ್ಯವು ಬೆಳಕಿಗೆ ಬಂದಿತು.

780ಎ. ನಿಜವನ್ನರುಹಿದ ಹೂ. 408.

800–809 : ಸ್ವರ್ಗದಲ್ಲಿ ಮಾನವ

827. ದೇವರ ಬಗ್ಗೆ ಏನೂ ತಿಳಿಯದ ಕುರುಬ.

850-999 : ಸಿ. ಸಾಹಸ ಕಥೆಗಳು

870–879 : ನಾಯಕಿ ರಾಜಕುಮಾರನನ್ನು ಮದುವೆಯಾಗುವುದು.

875ಬಿ. ಎತ್ತಿನ ಹಾಲು (ಕೋಣನ ತುಪ್ಪ).

876. ಬುದ್ಧಿವಂತ ಪ್ರಿಯೆ ಮತ್ತು ಪ್ರಿಯಕರ.

880-899 : ಸ್ವಾಮಿಭಕ್ತಿ-ನಿಷ್ಠೆ ಮತ್ತು ಮುಗ್ಧತೆ

888. ನಂಬಿಕೆಯ ಹೆಂಡತಿ (ವಿಶ್ವಾಸದ ಹೆಂಡತಿ).

891. (+891*–III) : ತನ್ನ ಹೆಂಡತಿಯನ್ನು ನಿರ್ಜನ ಪ್ರದೇಶದಲ್ಲಿಟ್ಟವ ಮತ್ತು ತನಗೊಂದು ಮಗುವನ್ನು ಒದಗಿಸುವ ಕೆಲಸ ವಹಿಸಿದವ.

891ಬಿ*. ಅಪವಾದಕ್ಕೊಳಗಾದ ಹೆಂಡತಿ.

896. ಕಾಮುಕ ಬ್ರಾಹ್ಮಣನೂ ಮತ್ತು ಪೆಟ್ಟಿಗೆಯಲ್ಲಿ ಕನ್ಯೆ.

910–915 : ಹಿತವಚನಗಳು

910ಸಿ. ನೀರಾಗ ಎದ್ದತಿ, ಕಲ್ಲಿಗ ತಿಕ್ತಿ, ತಿಳೀತ ನಿನ್ನ ಗತ್ರ.

910ಎಚ್. ಪ್ರಸಂಗ ನೋಡಿ ನಿದ್ರೆಕಾಯಿ, ಅಥವಾ ಸಂಗಡಿಗನಿಲ್ಲದೆ ಪ್ರಯಾಣ ಹೊರಡಬೇಡ.

910ಕೆ. ಹಿತವಚನ ಮತ್ತು ತನ್ನನ್ನು ಕೊಲೆಗೈಯ್ಯುವಂತೆ ಬರೆದ ಪತ್ರವನ್ನು ಹೊತ್ತೊಯ್ಯುತ್ತಿರುವ ನಾಯಕ.

911*. ಸಾಧುಗಳ ಮೂರು ಹಿತವಚನಗಳು.

916. (+516) : ಅರಸನ ಶಯ್ಯಾಗಾರವನ್ನು ಕಾಯುತ್ತಿರುವ ಸಹೋದರ (ಸಹಾಯಕ) ಮತ್ತು ಹಾವು.

920–929 : ಜಾಣತನದ ನಟನೆ ಮತ್ತು ಮಾತುಗಳು

923ಬಿ. ತನ್ನ ಅದೃಷ್ಟದ ಬಗ್ಗೆ ತಾನೇ ಹೊಣೆಗಾರಳಾದ ರಾಜಕುಮಾರಿ (ಎಚ್ 592).

930–949 : ಹಣೇಬರಹದ ಕಥೆಗಳು

930. ಭವಿಷ್ಯ (ಹಣೇಬರಹ).

931. ತಾಯಿಗಂಡ : ಮಗನ ಹೆಂಡತಿ, ಗಂಡನ ಸೊಸೆ.

934ಬಿ. ಯುವಕನು ತನ್ನ ಮದುವೆಯ ದಿನ ಸಾಯುತ್ತಾನೆ.

935. ಅನಾಥ—ನಾಯಕನು ಹಿಂದಿರುಗಿದನು.

938. ಶಾಂತಮೂರ್ತಿ (Placidas)

938ಬಿ. ಹರೆಯಂಕ್ಕೆ ಬಾ.

938ಎ. ತಿರುಗಿ ಬಂದ ಮಗನನ್ನು ಕೊಲ್ಲುವುದು.

946ಸಿ*. ಅದೃಷ್ಟ ಮತ್ತು ಅನುಗ್ರಹಗಳ ಆಶೀರ್ವಾದ-ಸ್ಪರ್ಧೆ.

950–969 : ಕಳ್ಳರು ಮತ್ತು ಕೊಲೆಗಡುಕರು

950. ತಂದೆಯು ರುಂಡ ಕಡಿದುಕೊಂಡ ಕಳ್ಳನನ್ನು ಹಿಡಿಯಲು ಮಾಡಿದ ಅಯಶಸ್ವೀ ಪ್ರಯತ್ನಗಳು.

970–999 : ಇತರ ಅದ್ಭುತ ಕಥೆಗಳು

976ಎ. ಕಥೆಯ ನಿರೂಪಣೆಯಿಂದ ಕಳ್ಳನನ್ನು ಗುರುತಿಸಿದ್ದು.

978. ಯುವಕನು ಮೋಸಗಾರರ ನಾಡಿನಲ್ಲಿ.

980ಎ. ಹರಿದ ಕೋರಿ ; ತಂದೆಗೆ ಬುದ್ಧಿ ಕಲಿಸಿದ ಮಗ.

982. ಅತ್ತೆಯ ಲೋಡಿನಲ್ಲಿ ದ್ರವ್ಯವಿರಬೇಕೆಂದು ಸೊಸೆ ಅತ್ತೆಯನ್ನು ಕಾಳಜಿಯಿಂದ ನೋಡಿಕೊಂಡಳು.

1000-1199 : ಡಿ. ಮೂರ್ಖದೈತ್ಯರ ಕಥೆಗಳು

1000. ಕರಾರು-ಸಿಟ್ಟು ಮಾಡಬಾರದು (ದುಡಿಯಲು ಸಾಕೆನ್ನಬಾರದು).

1000ಎ. ಬ್ರಾಹ್ಮಣನೂ (ಮಾಲೀಕ) ಹಾಗೂ ಅವನ ಸೇವಕನೂ.

1002. (+1007) : ಮಾಲೀಕನೂ ಮೂರ್ಖ ಆಳುಗಳೂ.

1030-1059 : ಮಾನವ ಮತ್ತು ದೈತ್ಯರ ಪಾಲುಗಾರಿಕೆ

1030. ಬೆಳೆಯ ಪಾಲುಗಾರಿಕೆ.

1152. ವಸ್ತುಗಳನ್ನು ಪ್ರದರ್ಶಿಸುವ ಮೂಲಕ ರಾಕ್ಷಸವನ್ನು ಅಂಜಿಸಲಾಯಿತು.

1154. (+676-II, 1168ಎ-II). ದೆವ್ವಗಳು ಮತ್ತು ಗಿಡದಿಂದ ಬಿದ್ದವನು.

1168ಎ. (+676-II, 11-54II). ರಾಕ್ಷಸನೂ ಮತ್ತು ಕನ್ನಡಿಯೂ

III ಹಾಸ್ಯ ಹಾಗೂ ಅಡ್ಡಕಥೆಗಳು

ದಡ್ಡ-ಮೂರ್ಖರ ಕಥೆಗಳು

1215. ತಂದೆ ಮಗ ಕತ್ತೆ—ಎಲ್ಲರನ್ನೂ ಸಂತೋಷಪಡಿಸಲು ಮಾಡಿದ ಯತ್ನ.

1240. (+1313ಎ+1692). ತಾನು ಕುಳಿತ ಟೊಂಗೆಯನ್ನೇ ಕಡಿದವನು.

1287. ಹನ್ನೆರಡು ಜನ ಬುದ್ಧಿವಂತರು (ತಾವೆಷ್ಟು ಜನರೆಂಬುದನ್ನು ಎಣಿಸಿಕೊಳ್ಳಲು ಬಾರದಿದ್ದವರು).

1313ಎ. (+1240+1692): ತನ್ನಷ್ಟಕ್ಕೆ ತಾನು ಸತ್ತೆನೆಂದು ತಿಳಿದುಕೊಂಡವನು.

1317. ಆನೆ ಹಾಗೂ ಆರು ಜನ ಕುರುಡರು.

1319. ಕುಂಬಳಕಾಯಿಯನ್ನು ಕತ್ತೆಯ ತತ್ತಿಯೆಂದು ಮಾರಲಾಯಿತು.

1332. (+1384+1685ಎ): ಯಾರು ಹೆಚ್ಚಿಗೆ ಮೂರ್ಖರು (ಜೆ 1712).

1333. ತೋಳ ಬಂತಲೇ ತೋಳ.

1335ಎ. ಚಂದ್ರನನ್ನು ಕಾಪಾಡುವುದು.

ಮದುವೆಯಾದ ದಂಪತಿಗಳ ಕಥೆಗಳು

1350. ಪ್ರೇಮದ ಹೆಂಡತಿ-1510

1351. ಗಪ್ಪು ಕುಳಿತವರಿಗೆ ಮೂರನೆ ಕಡಬು.

1358ಬಿ. ಮಿಂಡನು ಅಡಗಿ ಕುಳಿತ ಪೆಟ್ಟಿಗೆಯನ್ನು ಗಂಡನು ಹೊತ್ತನು (ಕೆ 1555).

1365ಎ. ಹೇಳಿದ ಮಾತಿಗೆ ತದ್ವಿರುದ್ಧವಾಗಿ ವರ್ತಿಸುವ ಹೆಂಡತಿ.

1380. (+1535+1536ಬಿ): ಅಪನಂಬಿಕೆಯ ಹೆಂಡತಿ.

1380-1404 : ಮೂರ್ಖ ಸತಿ ಮತ್ತು ಅವಳ ಪತಿ

1391. ಮೂರ್ಖ ಹೆಂಗಸು : ಮಾತನಾಡಿದ ಯೋನಿ.

1405-1429 : ದಡ್ಡನು ಹಾಗು ಅವನ ಹೆಂಡತಿಯು

1419ಇ. ಮಿಂಡನ ಮನೆಯವರೆಗೆ ನೆಲಮಾರ್ಗ-891ಬಿ.

1426. ಪೆಟ್ಟಿಗೆಯಲ್ಲಿಟ್ಟ ಹೆಂಡತಿ-612ಎ.

1450-1474 : ಕನ್ಯಾನ್ವೇಷಣೆ

1457. ತೊದಲು ಮಾತನಾಡುವ ಕನ್ಯೆಯರು.

1500-1534 : ಹೆಣ್ಣಿಗೆ ಸಂಬಂಧಿಸಿದ ಇತರ ಅಡ್ಡತೆಗಳು.

1510. (+1350) : ವಿಧವೆಯ ಪೋಷಣೆ.

1511. (+516) : ಅಪನಂಬಿಕೆಯ ರಾಣಿ.

ಒಬ್ಬನಿಗೆ ಸಂಬಂಧಿಸಿದ ಕಥೆಗಳು : ಜಾಣ ಮನುಷ್ಯ

1525ಬಿ. ಕುದುರೆಯ ಅಪಹರಣ.

1534ಎ. ನೇಣಿಗೆ ತಕ್ಕ ಮನುಷ್ಯನನ್ನು ಆರಿಸಲಾಯಿತು.

1535.(+1380) : ಶ್ರೀಮಂತ ಮತ್ತು ಬಡ ಒಕ್ಕಲಿಗ.

1536ಬಿ. ಹಾದರಕ್ಕೆ ಬಂದು ಸತ್ತ ಏಳು ಜನ ಹೆಣಗಳನ್ನು ಸಾಗಿಸಲಾಯಿತು.

1539. (+1545+978 ಎ) : ಜಾಣತನ ಮತ್ತು ಹೆಡ್ಡತನ.

1545. ಅನೇಕ ಹೆಸರಿನ ಹುಡುಗ.

1579. ಹುಲಿ, ಕುರಿ, ಕಡಲಿಕಡಪಿ–ನೀರಿನ ಹಳ್ಳ ದಾಟುವುದು ಹೇಗೆ ?

1592 ಬಿ. (+1735) : ಗಡಿಗೆ ಒಂದು ಮಗುವನ್ನು ಹಾಕಿತು. ಆದರೆ ಅದು ಸತ್ತು ಹೋಯಿತು.

1630ಬಿ*. ಕರಡಿಯನ್ನು ಕಂಬಳಿಯೆಂದು ಭಾವಿಸಿದ್ದು. (ಜೆ. 1761.9)

ದೈವಾನುಕೂಲಗಳು

1640. (+177) ನೊಣಗಳ ಬೇಟೆಗಾರ.

1641. ಡಾಕ್ಟರನು ಎಲ್ಲವನ್ನೂ ತಿಳಿದಿರುತ್ತಾನೆ.

1646. (+735ಸಿ) : ಸುದೈವದ ಹೊಡೆತ.

ಮೂರ್ಖ ಮನುಷ್ಯ

1685ಎ. ಈಳಗಣ್ಣನ ಅಳಿಯನು ಎಮ್ಮೆಯ ಬಾಲ ಹಿಡಿದು ಅತ್ತೆಯ ಮನೆಗೆ ಹೋದನು.

1687. ಮರೆತ ಶಬ್ದ.

1689ಎ. ರಾಜನಿಗೆ ಇಬ್ಬರಿಂದ ಕೊಡುಗೆ.

1692. (+1340+1313ಎ). ಮೂರ್ಖ ಕಳ್ಳ-177, 1240,1313ಎ.

1696. ನಾನು ನಿನಗೆ ಏನನ್ನು (ಮಾಡಲು) ಹೇಳಿದೆ.

1698ಎ. ಕಳೆದ ಪ್ರಾಣಿಯ ಅನ್ವೇಷಣೆ.

1698ಬಿ. ಕಿವುಡರು ಮತ್ತು ಅವರ ಅಸಂಬದ್ಧ ಮಾತುಗಳು.

1699. ಪರಭಾಷೆ ಅರಿಯದ್ದರಿಂದ ತಪ್ಪು ಭಾವಿಸುವುದು.

1800-1849 ಪುರೋಹಿತರು ಅಥವಾ ಧಾರ್ಮಿಕ ಬಗೆಗಿನ ಹಾಸ್ಯಗಳು

1846. ಪಾಪಕೊಳ್ಳೊಂದು ಹರಳು.

IV. ಸೂತ್ರಬದ್ಧ ಕಥೆಗಳು

ಸಂಚಿತ ಕಥೆಗಳು

2029ಸಿ*. ಇಲಿ (ಮೃಗ) ಒಂದರ ಬದಲಿಗೆ ಮತ್ತೊಂದರಂತೆ ಅನೇಕ ವಸ್ತುಗಳನ್ನು ಪಡೆಯುವುದು.

2031ಸಿ. ಬಲಶಾಲಿ ಮತ್ತು ಅತಿ ಬಲಶಾಲಿ.

2031ಎ*. ಗೋಡೆಬಿದ್ದು ಒಬ್ಬನು ಸತ್ತನು.

2037ಎ*. ಉಪಾಯದ ಅನೇಕ ಬದಲಾವಣೆಗಳು.

2041. ಅಘಾತಕೊಳ್ಳಗಾಗದ ಹಕ್ಕಿ.

2045ಎ*. ಇಲಿಗಳನ್ನು ಖುಷಿ ಕೊಲ್ಲಬೇಕಾಗುವುದು.

ಗ್ರಂಥಋಣ

1. The Types of the Folktales—Aarne, S. Thompson, 1973 FFC.
2. Hyderabad State (Gazetteer), 1909, Calcutta.
3. Gazetteer of Gulbarga Dist.
4. Gazetteer of Raichur Dist.
5. Gazetteer of Bidar Dist.
6. ಕರ್ನಾಟಕದ ಪರಂಪರೆ, ಸಂ. ೧, ೨.
7. ಕರ್ನಾಟಕದ ಯಾತ್ರೆ, ಜೀರಿಗೆ ಕಟ್ಟಿ ಬಸವಪ್ಪ, 1973, ಕ.ಸಾ.ಪ.
8. ಸಚಿತ್ರ ಕರ್ನಾಟಕ ರಾಜ್ಯ, 1973, ಕರ್ನಾಟಕ ಸರ್ಕಾರ.
9. ಕಲಬುರ್ಗಿಜಿಲ್ಲೆಯ ಜನಪದ ಕಥೆಗಳ ಆಶಯ ಮತ್ತು ಮಾದರಿಗಳು (ಅಪ್ರಕಟಿತ ಪಿಎಚ್.ಡಿ. ಪ್ರಬಂಧ), ಡಾ॥ ವೀರಣ್ಣ ದಂಡೆ.
10. ರಾಯಚೂರು ಜಿಲ್ಲೆಯ ಜನಪದ ಕಥೆಗಳು, —ಟಿ. ಎಸ್. ರಾಜಪ್ಪ, 1976, ಮೈ. ವಿ. ವಿ.
11. ಬೀದರ ಜಿಲ್ಲೆಯ ಜನಪದ ಕಥೆಗಳು, —ಕ್ಯಾತನಹಳ್ಳಿ ರಾಮಣ್ಣ, 1976, ಮೈ. ವಿ. ವಿ.
12. ಕರ್ನಾಟಕದ ಜನಪದ ಕಥೆಗಳು, —ಎಚ್. ಎಲ್. ನಾಗೇಗೌಡ, ಕ. ಸಾ. ಪ.

ಕೆಱೆ : ಗ್ರಾಮನಾಮ ವಿವೇಚನೆ

ಚೆನ್ನಕ್ಕ ಎಲಿಗಾರ

ಸ್ಥಳನಾಮ ಅಧ್ಯಯನ ಆಯಾ ಗ್ರಾಮ ಮತ್ತು ಪ್ರದೇಶಗಳ ಭೌಗೋಲಿಕ, ಸಾಮಾಜಿಕ ಪರಿಸರಗಳ ಮೇಲೆ ಮಹತ್ವದ ಬೆಳಕು ಚೆಲ್ಲುತ್ತವೆ. ಇಲ್ಲಿ ಪಾಮರ ನಿಷ್ಪತ್ತಿ, ಪಂಡಿತ ನಿಷ್ಪತ್ತಿಗಿಂತ ನಿಜ ನಿಷ್ಪತ್ತಿಗೆ ಗಮನಕೊಟ್ಟು ಅಧ್ಯಯನ ನಡೆಸುವುದು ಇಂದಿನ ಅಗತ್ಯವಾಗಿದೆ.

ಕನ್ನಡದ ಸ್ಥಳನಾಮಗಳು ಮುಖ್ಯವಾಗಿ ಎರಡು ಆಕೃತಿಮಗಳಿಂದ ರೂಪಿತವಾದುವು. ಇವುಗಳಲ್ಲಿ ಪೂರ್ವದ ಆಕೃತಿಮವನ್ನು ನಿರ್ದಿಷ್ಟ ಅಥವ ಘಟಕವೆಂದೂ, ಉತ್ತರ ಆಕೃತಿಮವನ್ನು ವಾರ್ಗಿಕವೆಂದೂ ಕರೆಯುವದುಂಟು.

ನಾಡಿನ ಸಂಸ್ಕೃತಿ ನಿರ್ಮಾಣದಲ್ಲಿ ಕೆರೆಯ ಪಾತ್ರ ಪ್ರಮುಖವಾದುದು. ಕೆರೆಯ ನಿರ್ಮಾಣ ಊರ ನಿರ್ಮಾಣಕ್ಕೆ ಹಾಕುವ ಭದ್ರ ತಳಹದಿಯೆನ್ನಬೇಕು. ಕೆರೆ, ಬಾವಿ, ಜಲಸಂಚಯವಿದ್ದ ಸ್ಥಳದ ಸುತ್ತ ಕುಟುಂಬಗಳು ತಳವೂರಿ ಗ್ರಾಮಗಳು ರೂಪಗೊಂಡವು. ಜಲವಾಚಕಕ್ಕೆ ಸಂಬಂಧಪಟ್ಟಂತೆ ಶಾಸನಗಳಲ್ಲಿ ಅಂಬುಧಿ, ಆರ್, ಏರಿ, ಏರು, ಕಟ್ಟೆ, ಕಾಲುವೆ, ಕುಂಟೆ, ಕೆರೆ, ಕುಳಿ, ಕೊಳ, ಕೋಡಿ, ಗುಂಡಿ, ,ತಟಾಕ, ತೀರ್ಥ, ತೊರೆ, ದಿಗ್ಗಿಗೆ, ಡೋಣಿ, ನೀರು, ಬಾವಿ, ಬೆಂಚೆ, ಬೆಳ್ಳ, ಮಡವು (ಮಡು), ವಜ್ರ (ಒಜ್ಜರ–ಚಿಲುಮೆ) ಸರೋವರ, ಸಮುದ್ರ, ಸಾಗರ, ಹಳ್ಳ, ಹೊಂಡ, ಹೊಳೆ. ಇವರಂತೆ ತುಳುವಿನಲ್ಲಿ ಆಲ್, ಆರ್, ಬೆ(ಚೊ)ಳ್ ಮುಂತಾದ ಜಲವಾಚಕ ಪ್ರತ್ಯಯಗಳು ಬಳಕೆಯಲ್ಲಿವೆ.

'ಕೆಱೆ' ಉತ್ತರ ಕರ್ನಾಟಕದಲ್ಲಿ ಅಧಿಕವಾಗಿ ಪ್ರಯೋಗಗೊಂಡ ಪದ. ಕೆಱೆ/ಕೆರೆ/ಕೇರಿ, ಗೆಱೆ/ಗೆರೆ/ಗೇರಿ ಎಂಬ ವಿವಿಧ ರೂಪಗಳಲ್ಲಿ ದೊರಕುವ ವಾರ್ಗಿಕವಿದು. ಕೆಱೆ/ಕೆರೆ, ಗೆಱೆ/ಗೆರೆ, ಕೇರಿ/ಗೇರಿಯಾಗಿರುವುದು ಕಂಡುಬರುತ್ತದೆ.

ಅಬ್ಬೆಯಂಗೆಱೆ > ಅಬ್ಬೆಗೆಱೆ > ಅಬ್ಬೆಗೆಱೆ > ಅಬ್ಬಿಗೆರೆ > ಅಬ್ಬಿಗೇರಿ

ಅಣ್ಣಯನಕೆಱೆ > ಅಣ್ಣೆಗೆಱೆ > ಅಣ್ಣೆಗೆಱೆ > ಅಂಣಿಗೆರೆ > ಅಣ್ಣೆಗೇರಿ

ಬಟ್ಟಕೆಱೆ > ಬಟ್ಟಗೆರೆ > ಬೆಟಗೆರೆ > ಬೆಟಗೇರಿ

ಮುಂತಾದ ಸ್ಥಳನಾಮಗಳನ್ನು ಗಮನಿಸಬಹುದಾಗಿದೆ.

'ಕೆಱೆ' ವಾರ್ಗಿಕದ ಗ್ರಾಮ ನಾಮಗಳಲ್ಲಿ ಸುಮಾರು ಎರಡು, ಮೂರು, ನಾಲ್ಕು ಆಕೃತಿಮಗಳಿರುವ ಹೆಸರುಗಳೂ ಉಂಟು.

ವೀಲ + ಗೆರೆ
ವಳ + ಗೆರೆ
ಮಿಕ್ಕ + ಗೆಱೆ

ಬೆಳ + ವಾಡಿ + ಗೇರಿ
ಸಿರಿ + ಪೊಳಲ + ಕೆರೆ
ಕಲ್ಲ + ಮೋಳೆ + ಕೆರೆ

ಬಡ + ಬಟ್ಟೆ + ಯ + ಕೆರೆ
ಕಿಳು + ವನ + ಕುಳಿ + ಕೆರೆ
ಎಡೆ + ಹಳ್ಳಿ + ಯ + ಗೆರೆ
ಆರ + ಕಲ + ವಾಡಿ + ಕೆಱೆ

ಕೆರೆ ನಿರ್ಮಾಣಗೊಂಡ ಪ್ರಯುಕ್ತ ಗ್ರಾಮಕ್ಕೆ ಆ ಹೆಸರು ಬಂದಂತೆ ಗ್ರಾಮ ನಿರ್ಮಾಣಗೊಂಡ ಕೆಲ ಕಾಲದ ಮೇಲೆ ಕೆರೆ ನಿರ್ಮಿಸಲ್ಪಟ್ಟಿದ್ದರೂ ಕೆರೆಯ ಪ್ರಸಿದ್ಧಿಯಿಂದ ಮೂಲ ಗ್ರಾಮನಾಮ ಮಾಯವಾಗಿ, ಕೆರೆ ಅದೂ, ಇದರ ಪರ್ಯಾಯಗಳು ವಾರ್ಗಿಕವಾಗಿದ್ದುದು ಉಂಟು.

ಕೆರೆ ವಾರ್ಗಿಕದ ಒಂದೆ ಈ ಕೆಳಗಿನ ಘಟಕಗಳು ಶಾಸನಗಳಲ್ಲಿ ಕಂಡುಬರುತ್ತವೆ. ಅತ್ತಿ, ಊರ, ಕಿಟ್ಟ, ಕುರುವ, ಕಂಚು ಕಂಬಳಿ, ಕುಡಿ, ಕೆಲ್ಲ, ಕೊಳ್ಳ, ಗುತ್ತಿ, ಗುಳಿ, ಗೊಟ್ಟಿ, ಘಟ್ಟ, ತಟ್ಟೆ, ದಿಗ್ಗಗೆ, ನಗರ, ಪಟ್ಟಣ, ಬಳ್ಳ, ಬಳ್ಳಿ, ಹಳ್ಳಿ, ಹೊಳಲ, ಹೊಳೆ ಮುಂತಾದ ಪದಗಳು ಕೆರೆ ವಾರ್ಗಿಕಕ್ಕೆ ನಿರ್ದಿಷ್ಟ ಘಟಕಗಳಾಗಿರುವುದು ಉಂಟು.

ಕೆರೆ ವಾರ್ಗಿಕದ ಗ್ರಾಮನಾಮಗಳು ಕಾಲದಿಂದ ಕಾಲಕ್ಕೆ ವ್ಯತ್ಯಾಸಗೊಳ್ಳುವಲ್ಲಿ ಕೆಲವು ವಿಕೃತರೂಪಗೊಂಡಿದ್ದರೆ, ಇನ್ನು ಕೆಲವು ಮೂಲ ಹೆಸರನ್ನೇ ಬದಲಿಸಿ ಮತ್ತೊಂದು ಹೆಸರು ಇರಿಸಿಕೊಂಡುದು ಕಂಡುಬರುತ್ತದೆ.

ದಿಂಡಿಗನಕೆರೆ > ದಡಗ
ಆನೆಗನಕೆರೆ > ಆನೇಗೆರೆ
ಕಲ್ಕೆರೆ > ಕಂಕೇರಿ
ಎಲವಂಗೆರೆ > ಎಲೂಗೆರೆ
ಚಟ್ಟಮಗೆರೆ > ಚಟ್ಟಗೆರೆ

ಸಿಂದಗೆರೆ > ಸಿಂದಿಗೆರೆ
ಸೆನವಗೆರೆ > ಶಾನೇಗೆರೆ
ಮೇಗಣಗೆರೆ > ಹಿರೇಮಗಳಗೇರಿ
ಬಟ್ಟಕೆರೆ > ಬೆಟಗೇರಿ
ಬೆಳ್ಗೆರೆ > ಬೆಳಗೆರೆ
ಬೆರಟೆಯಕೆರೆ > ಬೆಂಟಿಕೆರೆ
ಬೆನಚಟಿಕೆರೆ > ಬೆನಚಿಗೆರೆ
ಎರಡುಕೆರೆ > ಎರಡೂಕೇರ

ಈ ಉದಾಹರಣೆಗಳಲ್ಲಿ ಕೆಲವು ಮಹತ್ವದ ಅಂಶಗಳಿರುವುದನ್ನು ಗುರುತಿಸಬಹುದು. ಬಹುಶಃ ಎಲ್ಲ ಧ್ವನಿ ಉಚ್ಚಾರ ವ್ಯತ್ಯಾಸಗಳ ಮೂಲ ಸೌಲಭ್ಯಾಕಾಂಕ್ಷೆ ಇದಕ್ಕೆ ಅನುಗುಣವಾಗಿ ಇಲ್ಲಿ ಭಾಷಿಕ ವ್ಯತ್ಯಾಸಗಳು ಕಂಡುಬರುತ್ತವೆ.

ಮೂಲದಲ್ಲಿ ಇಟ್ಟ ಹೆಸರನ್ನು ಬದಲಾಯಿಸಿದುದಕ್ಕೆ ಅಂದಿನ ಸೂಳೆಕೆರೆ ಇಂದಿನ ಶಾಂತಿಸಾಗರವಾದುದು ಒಂದು ಉದಾಹರಣೆ. ಸುಶಿಕ್ಷಿತರಿಗೆ ಇದು ಶಾಂತಿ ಸಾಗರವಾದರೂ ಅಲ್ಲಿಯ ಸಾಮಾನ್ಯರಿಗೆ ಸೂಳೆಕೆರೆಯೆ. ಹಳೆಯ ಹೆಸರುಗಳು ಸುಲಭವಾಗಿ ಹೋಗುವುದಿಲ್ಲವೆಂಬುದಕ್ಕೆ ಇದೊಂದು ಉತ್ತಮ ನಿದರ್ಶನವೆನಿಸಿದೆ.

ಎಷ್ಟೋ ಸಂದರ್ಭಗಳಲ್ಲಿ ಮೂಲರೂಪಗಳು ಯಾವುದೇ ಬದಲಾವಣೆ ಹೊಂದದೆ ಇರುವ ಸಾಧ್ಯತೆ ಇದೆ. ಸಿಂದಗೆರೆಯಂತಹ ಗ್ರಾಮನಾಮಗಳು ಇಲ್ಲಿ ಉಲ್ಲೇಖನೀಯ. ಜನಾಂಗದ ಪದರು ಪದರುಗಳಲ್ಲಿ ಬೆರೆತ ಸ್ಥಳನಾಮಗಳು ಅಷ್ಟು ಸುಲಭವಾಗಿ ಹೋಗಲಾರವು. ಯಾವುದೇ ಆತಂಕಕ್ಕೆ ಒಳಗಾಗಿ ಮೂಲರೂಪ ವಿಕಾರಗೊಂಡಿದ್ದರೂ ಅದು ಪಳೆಯುಳಿಕೆಯಾಗಿ ಉಳಿದೇ ಉಳಿಯುತ್ತದೆ ಎಂಬುದು ವಿದ್ವಾಂಸರ ಹೇಳಿಕೆ.

ಬ್ರಾಹ್ಮಣರಿಗೆ ನೀಡಲಾದ ಗ್ರಾಮಗಳನ್ನು ಅಗ್ರಹಾರಗಳೆಂದು ಮಂಗಲ ಎಂದು ಕರೆಯುವುದುಂಟು. ಸಾಮಾನ್ಯವಾಗಿ ಕೆರೆ ವಾರ್ಗಿಕದ ಬಹಳಷ್ಟು ಗ್ರಾಮ ನಾಮಗಳನ್ನು ಅಂದರೆ ಕೆರೆಯುಳ್ಳ ಗ್ರಾಮಗಳನ್ನು ಬ್ರಾಹ್ಮಣರು ಅಗ್ರಹಾರವಾಗಿ ಪಡೆಯುತ್ತಿದ್ದರು.

—ಕೆರೆ ವಾರ್ಗಿಕ ಗ್ರಾಮನಾಮದ ಘಟಕಗಳಲ್ಲಿ ಜನಾಂಗವಾಚಿ, ವ್ಯಕ್ತಿವಾಚಿ, ಪ್ರಕೃತಿವಾಚಿ, ದಿಗ್ವಾಚಿ, ಸಂಖ್ಯಾವಾಚಿ, ಜಲವಾಚಿ ಮೊದಲಾದ ಪದಗಳು ಕಂಡು ಬರುವುದುಂಟು. ಉದಾ : ನಾಗರಕೆರೆ, ಮಲೆಯರಕೆರೆ, ಮುಂಜರಕೆರೆ, ಸಿಂದರಕೆರೆ, ಗಗ್ಗರಕೆರೆಗಳು ಜನಾಂಗವಾಚಿ ಘಟಕದ ಗ್ರಾಮನಾಮಗಳು. ಡಾ. ಕಲಬುರ್ಗಿ

ಯವರ ಹೇಳಿಕೆಯಂತೆ ಇಲ್ಲಿಯು ಮಧ್ಯ 'ರ'ಕಾರ ಜನಾಂಗಸೂಚಿಯಾಗಿರುವುದರ ಸೂಚನೆಯಾಗಿದೆ.

ಅಂಜಾಗನಕೆರೆ, ಕಾಳಿಸೆಟ್ಟಿಯಕೆರೆ, ಕಬ್ಬಿಲಕೇತನಕೆರೆ, ಕಿತನಕೆರೆ, ಕೇತಮಾನಕೆರೆ, ಚಾಮರಸನಕೆರೆ ಮೊದಲಾದವು ವ್ಯಕ್ತಿ ಕಟ್ಟಿಸಿದ ಅಥವಾ ವ್ಯಕ್ತಿಯ ಹೆಸರಿನಲ್ಲಿ ರಚಿಸಲ್ಪಟ್ಟ ಕೆರೆಗಳು. ಸ್ತ್ರೀವಾಚಿಯಾಗಿ ಅವ್ವೆಯರಕೆರೆ, ಕಂಚಿಯಂಗೆರೆ, ಅಬ್ಬೆಯಗೆರೆ, ಕನ್ನಿಯಗೆರೆ, ಚಿಕ್ಕಲಬ್ಬೆಯಕೆರೆ, ಲೊಕಿಯಕೆರೆ, ಮಾಸಿಯಗೆರೆ, ಮಾದವಿಯಕೆರೆ ಮುಂತಾದವುಗಳನ್ನು ನೋಡಬಹುದು.

ವ್ಯಕ್ತಿಯ ಅಧಿಕಾರ, ಅಂತಸ್ತುಗಳಿಗೆ ಅನುಗುಣವಾಗಿ ಅರಸನಕೆರೆ, ಹಿರಿಯರ ಕೆರೆ, ಮನ್ನೆಯಗೆರೆ, ಗಾವುಂಡಗೆರೆ, ಗಂಗನರಸಿಕೆರೆ, ರಾಣಿಗೆರೆ, ಗವುಡಿಗೆರೆ ಮುಂತಾದ ಪ್ರತಿಷ್ಠಿತರ ಹೆಸರಿನ ಕೆರೆಗಳನ್ನು ಉದಾಹರಿಸಬಹುದು. ಬಹುಶಃ ಜನಸಾಮಾನ್ಯ ಕಾಳಿಬ, ತಗಚಿ, ಆನೆಗ, ಕಿಳುವ, ಕಿತ್ತ, ಕತನ, ಬೂಕ, ಜಣಬ, ಕೊನ್ನಿ, ಚೌಳಿ, ಮಸಣಿ ಎಂಬ ವ್ಯಕ್ತಿಗಳು ಕಟ್ಟಿಸಿದ ಕೆರೆಗಳ ಸುತ್ತ ಬೆಳೆದ ಊರುಗಳು ಇವೆ.

ಕೆಲವೊಮ್ಮೆ ಜಾತಿ, ವೃತ್ತಿ, ಪಂಗಡಗಳವರು ಕಟ್ಟಿಸಿದುದಕ್ಕೆ ಕುಂಬಾರ, ಸುಂಕಿಗ, ಕುರುಬ, ಬೇಡ, ಹರದ, ಹಾರುವ, ಸೆಟ್ಟಿ, ಬಣಜಿಗ, ಬಾಣಸು, ಉಗುರ ಮುಂತಾದ ಘಟಕಗಳನ್ನು ನೋಡಬಹುದು.

ಶಾಸನಗಳಲ್ಲಿ ಬರುವ ಗ್ರಾಮನಾಮಗಳ ಪೂರ್ವ ಘಟಕದ ಅಂತ್ಯದಲ್ಲಿ 'ಲ' ಇದ್ದರೆ ಅದು ಸ್ತ್ರೀ ಹೆಸರನ್ನು ಸೂಚಿಸುವುದೆಂದು ಕಂಡುಬರುತ್ತದೆ. ಜಕ್ಕಿಲ, ರಾವಲ, ಬೆಳ್ಳಲ, ದೇವಿಲ, ರಾಜಲ ಹೆಸರಿನ ಸ್ತ್ರೀಯರು ಕಟ್ಟಿಸಿದ ಕೆರೆಯ ಸುತ್ತ ಬೆಳೆದ ಗ್ರಾಮಗಳೇ ಜಕ್ಕಿಲಗೆರೆ, ರಾವಲಗೆರೆ, ಬೆಳ್ಳಲಗೆರೆ, ದೇವಿಲಗೆರೆ, ರಾಜಲಗೆರೆ ಮುಂತಾದವು.

ಈ ಎಲ್ಲ ವಿವರಗಳನ್ನು ಗಮನಿಸಿದಾಗ ಸ್ಥಳನಾಮ ಅಧ್ಯಯನ ಒಂದು ಮಹತ್ವಪೂರ್ಣ ಅಧ್ಯಯನವೆಂದೇ ಹೇಳಬೇಕು.

---

* ದಿನಾಂಕ 28–10–1984 ರಂದು ದಾಂಡೇಲಿಯಲ್ಲಿ ಜರುಗಿದ ಕನ್ನಡ ಅಧ್ಯಾಪಕರ ಶಿಬಿರದಲ್ಲಿ ಮಂಡಿಸಿದ ಪ್ರಬಂಧ.

ಕವಲುದಾರಿ

ಎಚ್. ಎಚ್. ಗಂಗಾಧರಾಚಾರ್

ಕಗ್ಗತ್ತಲ ರಾತ್ರಿಯಲ್ಲಿ
ದಟ್ಟಕಾಡಿನ ನಡುವೆ ಹರಿವ ಕಾಲುದಾರಿಯಲ್ಲಿ
ನಡೆಯುತ್ತಿದ್ದೇನೆ ಒಬ್ಬಂಟಿ.
ನಡೆಯುತ್ತ ನಡೆಯುತ್ತ ಬಂದು ನಿಂತಿದ್ದೇನೆ ಕವಲುದಾರಿಯಲ್ಲಿ.
ಯಾವುದು ಸರಿದಾರಿ ತಿಳಿಯುತ್ತಿಲ್ಲ.
ಆಕಾಶದಲ್ಲಿ ಚಂದ್ರನಿಲ್ಲ,
ಮೋಡ ಮುಸುಕಿ, ಮಿನುಗುವ ತಾರೆಗಳ ಬೆಳಕೂ ಇಲ್ಲ ;
'ಗುಯ್'...ಗುಡುವ ಜೀರುಂಡೆಗಳ ಸದ್ದಲ್ಲದೆ
ಮತ್ತೆ ದನಿಯಿಲ್ಲ.
ಈ ದಾರಿಯಲ್ಲಿ ಎಂದೂ ಬಂದವನಲ್ಲ
ಯಾವ ದಾರಿ ಹಿಡಿದರೆ ಯಾವ ಪಟ್ಟಣ ಸೇರುತ್ತದೋ ತಿಳಿಯುತ್ತಿಲ್ಲ.
ಎರಡು ದಾರಿಗಳಲ್ಲಿ ಯಾವುದು ಹಿಡಿಯಲಿ ?
ಒಂದು ಹಿಡಿದರೆ ಮತ್ತೊಂದರ ನಷ್ಟ.
ಆದರೂ ಕವಲುದಾರಿಯಲ್ಲಿ ಬಂದು ನಿಂತ ನಾನೇ
ಆರಿಸಿಕೊಳ್ಳಬೇಕಾಗಿದೆ–ಒಂದು ದಾರಿ.
ಆರಿಸಿಕೊಂಡಮೇಲೆ ಮುಗಿಯಿತು.
ನಡೆಯಲೇಬೇಕು–ಆ ದಾರಿಯಲ್ಲಿ.
ಕಲ್ಲು ಮುಳ್ಳುಗಳಿರಲಿ, ಗುಡ್ಡ ಬೆಟ್ಟಗಳಿರಲಿ,
ನದಿ ಸಮುದ್ರಗಳೇ ಅಡ್ಡ ಬರಲಿ
ನಡೆಯಬೇಕು ; ಇಲ್ಲಿ ನಡೆಯುವುದೆ ಕರ್ಮ.
ಮತ್ತೊಂದು ದಾರಿ ತುಳಿಯಲಿಲ್ಲವೆಂದು ಏಕೆ ಪಶ್ಚಾತ್ತಾಪ ?
ಇಲ್ಲಿ ಯಾವ ಮಹಾನುಭಾವನೂ ಬಂದು ಸರಿದಾರಿ ತೋರಿಸಲಿಲ್ಲ.
ನಾನು ನಡೆದದ್ದೆ ಒಂದು ದಾರಿಯಾಗುತ್ತದೆ ;
ಅದಕ್ಕೆ ತನ್ನದೇ ಆದ ಒಂದು ಇತಿಹಾಸವಿರುತ್ತದೆ.

ಕುವೆಂಪು ದೃಷ್ಟಿಯಲ್ಲಿ ಸಹೃದಯ–ವಿಮರ್ಶಕ

ರಾ. ಲಕ್ಷ್ಮೀನಾರಾಯಣ

(1) ಇಲ್ಲಿ ಹಂಗಲಿಲ್ಲ ನಿನಗೆ, ಓ ಬಿಯದ
ಇದು ಪಕ್ಷಿಕಾಶಿ!
ದೇವ ನದಿಯಲ್ಲಿ ದ್ವೀಪ ಕೃಪೆಯಲ್ಲಿ
ಭಾವ ತರುವಾಸಿ
ಪ್ರಾಣ ಪಕ್ಷಿ ಕುಲವಿಹುದು ರಕ್ಷೆಯಲಿ
ನಿತ್ಯಮವಿನಾಶಿ!
....
ಕೊಲ್ವ ಬತ್ತಳಿಕೆ ಬಿಲ್ಲುಂ ಬಾಣವನು
ಅಲ್ಲೆ ಬಿಟ್ಟು ಬಾ!
ಬಿಂಕದುಕಂತಿಯನು ಕೊಂಕುಯುಕುತಿಯನಂ
ಎಲ್ಲ ಬಿಟ್ಟು ಬಾ;
ಮೆಯ್ಯ ತೊಳೆದು ಬಾ, ಕಯ್ಯ ಮುಗಿದು ಬಾ
ಹಮ್ಮನುಳಿದು ಬಾ :
....
....

(ಪಕ್ಷಿಕಾಶಿ–ಪುಟ.9)

2) "...ಆದರೂ ಈ ಚಿತ್ರಾಂಗದೆ ಆ ಚಿತ್ರಗಳೆರಡನ್ನೂ ಕೂಡಿಸಿ ತಯಾರಾದವಳಲ್ಲ; ಅವುಗಳಿಂದ ಮೂಡಿ ಸೃಷ್ಟಿಯಾಗಿದ್ದಾಳೆ. ಗಣಿತ ಕರ್ಮವಾಗಿಲ್ಲ; ಕಲಾಕೃತಿಯಾಗಿದ್ದಾಳೆ. ಕಾವ್ಯದಲ್ಲಿ ಅಲ್ಲಲ್ಲಿ ಬರುವ ಮಿಶ್ರೋಪಮೆ, ಮಹೋಪಮೆಗಳು ಪಾಶ್ಚಾತ್ಯ ಸಾಹಿತ್ಯಗಳ ಪುರಾಣ ಕಾವ್ಯಗಳನ್ನು ಓದಿರುವವರಿಗೆ ಹೊಸದಲ್ಲವಾದರೂ ಕನ್ನಡದಲ್ಲಿ ಇದೇ ಮೊತ್ತಮೊದಲನೆಯ ಸಾಹಸವೆಂದು ನಂಬುತ್ತೇನೆ. ಆದ್ದರಿಂದ ಜನಮನದ ದೃಷ್ಟಿಯಲ್ಲಿ ಈ ಕಾವ್ಯಕ್ಕೆ ಯಾವ ಸ್ಥಾನಮಾನಗಳು ಲಭಿಸುತ್ತವೆ ಎಂಬ ವಿಚಾರದಲ್ಲಿ ಕಾವ್ಯಕರ್ತೃವಿನ ಮನಸ್ಸು ತೂಗುಯ್ಯಾಲೆಯಾಗಿದೆ".

('ಚಿತ್ರಾಂಗದಾ' ಕಾವ್ಯದ 'ಅರಿಕೆ'ಯಲ್ಲಿ)

3) ಅ) ಬಹಿರ್ಘಟನೆಯಂ ಪ್ರತಿಕೃತಿಸುವಾ ಲೌಕಿಕ
ಚರಿತ್ರೆಯಲ್ತಿದು, ಅಲೌಕಿಕ ನಿತ್ಯಸತ್ಯಂಗಳಂ
ಪ್ರತಿಬಿಂಬಿಸುವ ಸತ್ಯಸ್ಯ ಸತ್ಯ ಕಥನಂ ಕಣಾ,
ಶ್ರೀ ಕುವೆಂಪುವ ಸೃಜಿಸಿದೀ ಮಹಾಛಂದಸ್ಸಿನ
ಮೇರುಕೃತಿ ಮೇಣ್ ಜಗದ್ಭವ್ಯ ರಾಮಾಯಣಂ.
('ಶ್ರೀರಾಮಾಯಣದರ್ಶನಂ' ಕಾವ್ಯದ
ಶ್ರೀ ವೆಂಕಣ್ಣಯ್ಯನವರಿಗೆ. ಸಾಲು. 23-27)

ಆ) ಇತಿಹಾಸಮಲ್ತು ; ಬರಿಕಥೆಯುಮಲ್ತು ; ಕಥೆ ತಾಂ
ನಿಮಿತ್ತಮಾತ್ರಂ ಆತ್ಮಕೆ ಶರೀರದೋಲಂತೆ
ಮೆಯ್ವೆತ್ತುದಿಲ್ಲಿ ರಾಮನ ಕಥೆಯ ಪಂಜರದಿ
ರಾಮರೂಪದ ಪರಾತ್ಪರನ ಪುರುಷೋತ್ತಮನ
ಲೋಕ ಲೀಲಾದರ್ಶನಂ............
('ಅಭಿಷೇಕ ವಿರಾಡ್‌ದರ್ಶನಂ' ಸಾಲು. 19-23)

4) ಇಲ್ಲಿ
ಯಾರೂ ಮುಖ್ಯರಲ್ಲ ;
ಯಾರೂ ಅಮುಖ್ಯರಲ್ಲ ;
ಯಾವುದೂ ಯಃಕಶ್ಚಿತವಲ್ಲ !
ಇಲ್ಲಿ
ಯಾವುದಕ್ಕೂ ಮೊದಲಿಲ್ಲ ;
ಯಾವುದಕ್ಕೂ ತುದಿಯಿಲ್ಲ ;
ಯಾವುದೂ ಎಲ್ಲಿಯೂ ನಿಲ್ಲವುದೂ ಇಲ್ಲ ;
ಕೊನೆ ಮುಟ್ಟುವುದೂ ಇಲ್ಲ !
ಇಲ್ಲಿ
ಅವಸರವೂ ಸಾವಧಾನದ ಬೆನ್ನೇರಿದೆ !
ಇಲ್ಲಿ
ಎಲ್ಲಕ್ಕೂ ಇದೇ ಅರ್ಥ ;
ಯಾವುದೂ ಅಲ್ಲ ವ್ಯರ್ಥ ;
ನೀರೆಲ್ಲವೂ ತೀರ್ಥ !
(ಮಲೆಗಳಲ್ಲಿ ಮದುಮಗಳು - ಓದುಗರಿಗೆ)

ಇವು ಕುವೆಂಪು ಅವರು ತಮ್ಮ ಕೃತಿಗಳ ಪ್ರಾರಂಭದಲ್ಲಿ ಅವುಗಳನ್ನು ಕುರಿತು ಓದುಗರಿಗೆ ನೀಡುವ ಸೂಚನೆಗಳು ; ಎಚ್ಚರಿಕೆಗಳು. ಈ ಘೋಷಣೆಗಳು

ಕವಿ-ಸಹೃದಯ-ವಿಮರ್ಶಕರ ನಡುವಿನ ಸಂಬಂಧದ ಬಗ್ಗೆ ನಮ್ಮನ್ನು ಆಲೋಚಿಸು ವಂತೆ ಮಾಡುತ್ತವೆ. ಮೊದಲಿನ ಉದಾಹರಣೆಯಲ್ಲಿ ಕಾವ್ಯ ಲೋಕವನ್ನು ಪ್ರವೇಶಿಸುವ ವಿಮರ್ಶಕನಿಗೆ ಎಚ್ಚರಿಕೆ ಇದೆ. ವಿಮರ್ಶಕನದು ವ್ಯಾಧ ವೃತ್ತಿಯೆಂದು ಸೂಚಿಸಿ ಅವನು ತನ್ನೆಲ್ಲ ಅಸ್ತ್ರಶಸ್ತ್ರಗಳನ್ನು ನಿರಸನ ಮಾಡಿ, ಭಕ್ತಿ ಭಾವದಿಂದ-ಪರಿಶುದ್ಧ ಮನಸ್ಕನಾಗಿ ಕೃತಿ ಲೋಕವನ್ನು ಪ್ರವೇಶಿಸಬೇಕೆಂದು ಸೂಚನೆ ಇದೆ. ಕಾರಣ ಈ ಕಾವ್ಯ ಲೋಕ 'ಪಕ್ಷಿಕಾಶಿ'.

ಇಲ್ಲಿ ಸಹೃದಯನ ಗುಣ ಲಕ್ಷಣಗಳನ್ನು ಪಟ್ಟಿಮಾಡುವ ಆವಶ್ಯಕತೆಯಿಲ್ಲ. ಭಾರತೀಯ ಕಾವ್ಯಮೀಮಾಂಸೆ ಅದನ್ನು ಎಂದೋ ಸಾರೋದ್ಧಾರವಾಗಿ ಮಾಡಿದೆ. ಪ್ರಶ್ನೆಯಿರುವುದು ಲೇಖಕನಾದವನು ತನ್ನ ಕೃತಿಲೋಕವನ್ನು ಪ್ರವೇಶಿಸುವ ಸಹೃದಯ-ವಿಮರ್ಶಕನಿಗೆ ಕೃತಿಯ ಪ್ರಾರಂಭದಲ್ಲೇ ಇಂಥ ಎಚ್ಚರಿಕೆಯನ್ನು ನೀಡು ವುದು ಎಷ್ಟರಮಟ್ಟಿಗೆ ಉಚಿತ ಎಂದು; ಅಗತ್ಯವೆ ಎಂದು. ಯೋಗ್ಯ ವಿಮರ್ಶಕ ನೆಂದರೆ ಅವನು ನಿಜವಾದ ಸಹೃದಯನೂ ಆಗಿರುತ್ತಾನೆಂದು ಅರ್ಥ. ನಿಜವಾದ ಸಹೃದಯನಾದವನು ಕೃತಿಲೋಕವನ್ನು ಪ್ರವೇಶಿಸುವಾಗ, ಕವಿ ತನ್ನ ಕೃತಿಯಲ್ಲಿ ಏನೆಲ್ಲ ಕಂಡರಿಸಿದ್ದಾನೋ ಅದನ್ನು ಸ್ವೀಕಾರ ಮಾಡುವ ಮನಸ್ಸಿನಿಂದಲೇ (Receptive Mind), ಕಾವ್ಯಾಸ್ವಾದನಾಸಕ್ತಿಯಿಂದಲೇ, ಪೂರ್ವಗ್ರಹರಹಿತ ನಾಗಿಯೇ ಪ್ರವೇಶಿಸುತ್ತಾನೆಂದು, ಪ್ರವೇಶಿಸಬೇಕೆಂದು ತಾತ್ವಿಕವಾಗಿಯಾದರೂ ಕವಿಯಾದವನು ಒಪ್ಪಬೇಕು. ಆ ಬಗ್ಗೆ ಕವಿ ಅನುಮಾನ ಪಡಬಾರದು. ಹಾಗೊಂದು ವೇಳೆ ಅನುಮಾನ ಪಡಬೇಕಾದಂಥವನಿದ್ದರೆ ಅವನು ಸಹೃದಯನಲ್ಲ; ವಿಮರ್ಶಕನಲ್ಲ. ಅಂಥವನ ಬಗ್ಗೆ ಕವಿ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಅಂಥವರಿಂದ ಕವಿಗಾಗಲಿ, ಕೃತಿ ಗಾಗಲಿ ಯಾವ ಬಾಧಕವೂ ಇಲ್ಲ.

(3) ಮತ್ತು (4)ನೇ ಉದ್ಧೃತ ಭಾಗಗಳಲ್ಲಿ ಕವಿಗೆ ತನ್ನ ಸಹೃದಯರ ಬಗ್ಗೆ ಇರುವ ಅನುಮಾನ ಇನ್ನಷ್ಟು ದೃಢವಾಗುತ್ತದೆ. ಕವಿ ಕೃತಿಯನ್ನು ಓದಿ ಅದರ ಬಗ್ಗೆ ತಾನೇ ಸ್ವತಂತ್ರವಾಗಿ ಒಂದು ನಿರ್ಣಯಕ್ಕೆ ಬರಬೇಕಾಗಿರುವ ಸಹೃದಯನಿಗಾಗಲಿ, ವಿಮರ್ಶಕನಿಗಾಗಲಿ ಕುವೆಂಪು ಅವರು ನೀಡುವ ಈ ಸೂಚನೆಗಳು ಯಾವ ರೀತಿಯಲ್ಲಿ ಪ್ರಯೋಜನಕಾರಿ ಎಂಬ ಪ್ರಶ್ನೆ ಏಳುತ್ತದೆ. ಸಾಮಾನ್ಯ ಓದುಗನ ದೃಷ್ಟಿಯಿಂದಲೂ ಇಂಥ ಸೂಚನೆಗಳು ಅನಗತ್ಯವಷ್ಟೇ ಅಲ್ಲ; ಅಪಾಯಕಾರಿಯೂ ಹೌದು. ಕೃತಿಯ ಓದಿನ ನಂತರ ಸಹೃದಯ ಅಥವಾ ವಿಮರ್ಶಕ ತಲುಪಬೇಕಾಗಿರುವ ತೀರ್ಮಾನವನ್ನು ಕವಿಯೇ ಪ್ರಾರಂಭದಲ್ಲಿಯೇ ಹೇಳಿಬಿಡುವುದರಿಂದಾಗುವ ಅನರ್ಥಗಳು ಎಷ್ಟೆಂದು ವಿವರಿಸುವ ಅಗತ್ಯವಿಲ್ಲ. ನಮ್ಮ ಕಣ್ಣ ಮುಂದಿರುವುದು ಕವಿಯ ಕಲಾಕೃತಿ, ಅದರಲ್ಲಿ ಅವನು ತೆರೆದು ತೋರಿರುವ ಅನುಭವಲೋಕ ನಮಗೆ ಮುಖ್ಯವೇ ಹೊರತು ಅವನು ನೀಡುವ ಸೂಚನೆಗಳಲ್ಲ. ಈ ವಕೀಲೀ ಮಾತುಗಳು ಬಹುವೇಳೆ ಓದುಗನನ್ನು

ದಾರಿತಪ್ಪಿಸುತ್ತವೆ. ಕಾರಣ ಆ ಸೂಚನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಅವಕ್ಕನುಗುಣವಾಗಿಯೇ, ಅವುಗಳಿಂದ ಬದ್ಧನಾಗಿಯೇ ಕೃತಿಯನ್ನು ನೋಡುವಂತೆ ಅವು ಅವನನ್ನು ಆಗ್ರಹಪಡಿಸುತ್ತವೆ. ಕೃತಿಯ ಗರ್ಭದಲ್ಲಿ ಇಲ್ಲದಿರುವ ಅರ್ಥಗಳನ್ನು ಅದರಲ್ಲಿ ಆರೋಪಿಸುವಂತೆ, ಅರ್ಥವಿಲ್ಲದಿರುವಲ್ಲಿಯೂ ಅರ್ಥವನ್ನು ಬೆದಕಿ ತೆಗೆಯುವಂತೆ ಓದುಗನನ್ನು ಪ್ರಚೋದಿಸುತ್ತವೆ ಈ ಸೂಚನೆಗಳು. ಒಟ್ಟಿನಲ್ಲಿ ಮುಕ್ತ ಮನಸ್ಸಿನ ಚಿಂತನೆಗೆ ಇವು ಪ್ರಬಲ ಪ್ರತಿಬಂಧಕಗಳು. ಕವಿ ಹೇಳದೆಯೇ ಸಹೃದಯನಾದವನೇ ಅವನ್ನು ಕಂಡುಕೊಳ್ಳಬೇಕು.

ಹಾಗಾದರೆ ಕುವೆಂಪು ಅವರು ಸಹೃದಯನಿಗೆ ಈ ರೀತಿ ಸೂಚನೆಗಳನ್ನು ಕೊಡಲು ಕಾರಣಗಳೇನು ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಬಹುಮುಖ್ಯ ಕಾರಣ ಕುವೆಂಪು ಅವರಿಗೆ ಸಹೃದಯನ ಬಗ್ಗೆ ಇರುವ ಅಕಾರಣ ಸಂಶಯ ; ಅನಗತ್ಯ ಭೀತಿ. ಓದುಗ ಎಲ್ಲಿ ತನ್ನ ಕೃತಿಯನ್ನು ಅರ್ಥ ಮಾಡಿಕೊಳ್ಳದೆ ಹೋಗುತ್ತಾನೋ, ಎಲ್ಲಿ ತನ್ನ ಭಾವಗಳನ್ನು ಗ್ರಹಿಸಲು ಅಸಮರ್ಥನಾಗುತ್ತಾನೋ ಎಂಬ ಚಿಂತೆ ಒಂದು ಪ್ರಬಲ ಗೀಳಿನಂತೆ (obsession) ಅವರನ್ನು ಪ್ರಾರಂಭದಿಂದಲೂ ಕಾಡಿದೆ. 'ಕಾಡಕವಿಯನು, ನಾಡಿನ ಜನರೊಲಿದಾಲಿಪುದು' ಎಂಬಲ್ಲಿನ ವಿನಯಪೂರ್ವಕ 'ಬಿನ್ನಹ'ದ 'ಕೊಳಲು'-ನಿಂದ ಆರಂಭಿಸಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯವರೆಗೂ ಸಹೃದಯರು ತಾನು ಹೇಳುವುದನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಬೇಕೆಂಬ ಕಳಕಳಿಯು ಜೊತೆಜೊತೆಗೇ ಸಹೃದಯನ ಬಗ್ಗೆ ತೀವ್ರ ಸಂಶಯ, ತಮ್ಮ ಕೃತಿಯ ಸ್ಥಾನ ಮಾನಗಳನ್ನು ನಿರ್ಧರಿಸುವಲ್ಲಿ ಎಲ್ಲಿ ಅವನು ಎಡವುತ್ತಾನೋ ಎಂಬ ಅಳುಕು ವ್ಯಕ್ತವಾಗುತ್ತ ಬಂದಿದೆ. ಇದು 'ಚಿತ್ರಾಂಗ'ದಾ ಕಾವ್ಯದ 'ಅರಿಕೆ'ಯಲ್ಲಿ ನಿಚ್ಚಳವಾಗಿ ಕಂಡುಬರುತ್ತದೆ. ಇದು ಸ್ಪಷ್ಟವಾಗಿ ಸಹೃದಯನ ಬಗ್ಗೆ ಅವರಿಗಿರುವ ಲಘು ಮನೋಭಾವದ ದ್ಯೋತಕ. ಇಲ್ಲದಿದ್ದರೆ ಹೀಗೆ ಆತಂಕಗೊಳ್ಳಬೇಕಾದ ಅಗತ್ಯ ಕಾಣುವುದಿಲ್ಲ. ಈ ರೀತಿ ಕಡೆಗಣಿಸಿ ನೋಡುವುದಕ್ಕೆ ಕಾರಣಗಳೇನೆಂಬ ಪ್ರಶ್ನೆ ಏಳುತ್ತದೆ.

ಯಾವ ಕವಿಗೇ ಆದರೂ ಆತ್ಮಪ್ರತ್ಯಯ ಅತ್ಯಗತ್ಯವಾಗಿರಬೇಕು. ಇಲ್ಲದಿದ್ದರೆ ಕೀಳರಿಮೆಯ ಕೂಪದಲ್ಲಿ ಸಿಕ್ಕಿಕೊಂಡು ಕಾವ್ಯ ಸೊರಗುತ್ತದೆ. ಆದರೆ ಈ ಆತ್ಮಪ್ರತ್ಯಯ ತನ್ನನ್ನು ಬಿಟ್ಟು ಉಳಿದೆಲ್ಲರನ್ನೂ, ಸಹೃದಯರನ್ನೂ ಅವಜ್ಞೆಯಿಂದ ಕಾಣುವ 'ಆತ್ಮರತಿ'ಯ ಮಟ್ಟಕ್ಕೆ ಹೋಗಬಾರದು. ಆಗ ತನ್ನ ಕೃತಿಯನ್ನು ಇವರಾರೂ ಸರಿಯಾಗಿ ಅರ್ಥವಿಸಿಕೊಳ್ಳಲಾರರೆಂಬ, ಬೆಲೆಗಟ್ಟಲಾರರೆಂಬ ಗೀಳು ಹಿಡಿದು ಸ್ವಕಾವ್ಯ ಪ್ರಜ್ಞೆಯನ್ನು ಇನ್ನಿಲ್ಲದಂತೆ ಮೆರೆಸುವ ಮನೋಭಾವ ಬಂದು ಬಿಡುತ್ತದೆ. ಕುವೆಂಪು ಕೃತಿಗಳ ಪ್ರಾರಂಭದಲ್ಲಿ ಬರುವ ಈ ಘೋಷಣೆಗಳೇ ಅದಕ್ಕೆ ಸಾಕ್ಷಿ.

ಹೀಗೇಕಾಗುತ್ತದೆಂದು ನೋಡಿದಾಗ, ಕುವೆಂಪು ಅವರ ಕೃತಿಗಳಲ್ಲೇ ಅದಕ್ಕೆ ಉತ್ತರ ಸಿಗುತ್ತದೆ. ಕುವೆಂಪು ಅವರಿಗೆ ಕಾವ್ಯದ ಬಗ್ಗೆ, ಕವಿಯ ಬಗ್ಗೆ ಅತಿರಂಜಿತ ವಾದ ಕಲ್ಪನೆಗಳಿವೆ. ಅವರ ಪ್ರಕಾರ ಕವಿ ಎಂದರೆ "ಎಲ್ಲ ದೇಶಗಳಲ್ಲಿ ಸರ್ವಸಾಧಾರಣವಾಗಿ ಎಲ್ಲರ ಆದರಕ್ಕೂ ಪಾತ್ರವಾಗಿರುವ ಭಗವದ್ವಿಭೂತಿಯ ಆವಿರ್ಭಾವ ವಲ್ಲದೆ ಬೇರೆಯಲ್ಲ."[1] ಆದ್ದರಿಂದ ಕಾವ್ಯವು ಭಗವಂತನ ಯಾವ ಅವತಾರಕ್ಕೂ ಕಡಿಮೆಯಲ್ಲ. ಕಾವ್ಯರಚನೆಯೆಂದರೆ ಅದೊಂದು ತಪಸ್ಸು ಎಂದು ನಂಬಿದವರು. ಕಾವ್ಯದ ಬಗ್ಗೆ, ಕವಿಯ ಬಗ್ಗೆ ಇಷ್ಟೆಲ್ಲ ಉನ್ನತ, ಪೂಜ್ಯ ಭಾವನೆಗಳನ್ನು ಹೊಂದಿರುವ ಕುವೆಂಪು ಅವರು ತಮ್ಮ ಕಾವ್ಯ ಲೋಕವನ್ನು ಪ್ರವೇಶಿಸುವ ವಿಮರ್ಶಕನೂ ಅದೇ ಪೂಜ್ಯ ಭಾವನೆ ಹೊಂದಿರಬೇಕೆಂದು ನಿರೀಕ್ಷಿಸುತ್ತಾರೆ. ಆದ್ದರಿಂದಲೇ ಅವರು ಅವನಿಗೆ 'ಮೆಯ್ಯಕ್ತೊಳೆದು ಬಾ, ಕಯ್ಯಮುಗಿದು ಬಾ, ಹಮ್ಮನುಳಿದು ಬಾ' ಎಂದು ಆದೇಶಿಸುತ್ತಾರೆ. ವಿಮರ್ಶಕ, ಸಹೃದಯ ಕಾವ್ಯಲೋಕ ಪ್ರವೇಶಿಸ ಬೇಕಾದ್ದು "ಸಹೃದಯ ಹೃದಯ ಭಕ್ತಿನೈವೇದ್ಯಮಂ ಕೊಂಡು."[2]

ಇಂಥ ಸ್ಥಿತಿಯಲ್ಲಿ ಕವಿ ಕೃತಿಯ ವಿಮರ್ಶೆ ಸಾಧ್ಯವಾಗುವುದಿಲ್ಲ. ಹೆಚ್ಚೆಂದರೆ ಕವಿಕೃತಿಯನ್ನು ಭಕ್ತಿಭಾವದಿಂದ ಆಸ್ವಾದಿಸಿ, ವ್ಯಾಖ್ಯಾನಮಾಡಬಹುದು. ಸ್ವತಃ ಕುವೆಂಪು ಅವರೇ ಇಂಥ ಹಲವಾರು ವ್ಯಾಖ್ಯಾನ ವಿಮರ್ಶೆಗಳನ್ನು ಬರೆದಿದ್ದಾರೆ. ಕವಿಕೃತಿಯನ್ನು ಅರ್ಥವಿಸುವಲ್ಲಿ ಇಂಥ ವ್ಯಾಖ್ಯಾನ ವಿಮರ್ಶೆಗಳು ಓದುಗನಿಗೆ ನೆರವಾಗುತ್ತವೆ. ಆದರೆ ಕವಿಕೃತಿಯ ಮೌಲ್ಯಾಂಕನ ಮಾಡುವ, ಸಾಹಿತ್ಯದಲ್ಲಿ ಅದರ ಸ್ಥಾನ ನಿರ್ದೇಶಿಸುವ ವಿಮರ್ಶೆ ಮಾಡಬೇಕಾದರೆ ವಿಮರ್ಶಕನಾದವನಿಗೆ ಕವಿಯ ಬಗ್ಗೆ, ಕೃತಿಯ ಬಗ್ಗೆ ಯಾವುದೇ ಆರಾಧನಾ ಮನೋಭಾವವಾಗಲಿ, ಲಘು ಮನೋಭಾವನೆಯಾಗಲಿ ಇರಕೂಡದು. ಕಾವ್ಯದ ಬಗ್ಗೆ ಸಹಾನುಭೂತಿ ಗೌರವಗಳಿರ ಬೇಕೇ ಹೊರತು ಶರಣಾಗತಿಯಲ್ಲ. ಕೃತಿಯನ್ನು ಎಚ್ಚರಿಕೆಯಿಂದ ಸಮಗ್ರವಾಗಿ ಅಧ್ಯಯನಮಾಡಿ ಸ್ವತಂತ್ರವಾಗಿ ನಿರ್ಣಯಕ್ಕೆ ಬರುವ ಔದಾರ್ಯವಿರಬೇಕೇ ಹೊರತು ಪ್ರಶ್ನಾತೀತ ಭಕ್ತಿಯಲ್ಲ. ನಿರ್ದಾಕ್ಷಿಣ್ಯವಾಗಿ ನಿರ್ಮಮತೆಯಿಂದ ಕವಿ ಕೃತಿಯ ಗುಣಾವಗುಣಗಳನ್ನು ತೂಗಿ ನೋಡಿ ಬೆಲೆಗಟ್ಟುವ ಕೆಲಸ ಅದು. ಆದರೆ ಕುವೆಂಪು ಬಯಸುವುದು 'ಪಕ್ಷಿಕಾಶಿ'ಯ ಪ್ರಾರಂಭದಲ್ಲಿ ಸೂಚಿಸಿರುವ ಭಕ್ತಿ ಭಾವಸಮನ್ವಿತ ವಿಮರ್ಶಕನನ್ನು. ಆದ್ದರಿಂದಲೇ ಅವರು ವಿಮರ್ಶಕನನ್ನು ಹಲ ವಾರು ರೀತಿಯಲ್ಲಿ ಲೇವಡಿ ಮಾಡುತ್ತಾರೆ ; ವಿಡಂಬಿಸುತ್ತಾರೆ ; ಸವಾಲು ಹಾಕು ತ್ತಾರೆ ; ಕಟಕಿಯಾಡುತ್ತಾರೆ. ಈ ಕೆಳಗಿನ ಸಾಲುಗಳಲ್ಲಿ ಅದು ಸುವ್ಯಕ್ತ :

---

1 ದಾರ್ಶನಿಕ ಕಾವ್ಯಮೀಮಾಂಸೆ–ಪುಟ. 117.

2 ಶ್ರೀರಾಮಾಯಣ ದರ್ಶನಂ–ಶ್ರೀವೆಂಕಣ್ಣಯ್ಯನವರಿಗೆ-ಸಾಲು 33.

'ನೀನೇರಬಲ್ಲೆಯಾ ನಾನೇರುವೆತ್ತರಕೆ ?
ನೀ ಹಾರಬಲ್ಲೆಯಾ ನಾ ಹಾರುವಗಲಕ್ಕೆ
ನೀ ಮುಳುಗಬಲ್ಲೆಯಾ ನಾ ಮುಳುಗುವಾಳಕ್ಕೆ
ಇಲ್ಲನಡೆ ; ದೂರ ಸರಿ ! ಹೌದು ? ಬಾ ಹತ್ತಿರಕೆ.'

(ಕೃತ್ತಿಕೆ-ಪುಟ. 30)

ಇಲ್ಲಿಯೂ ಕೂಡ ವಿಮರ್ಶಕನ ಶಕ್ತಿ ಸಾಮರ್ಥ್ಯಗಳನ್ನು ಶಂಕಿಸಲಾಗಿದೆ. ಹಾಗೆ ನೋಡಿದರೆ ಕವಿಯ ಹಾಗೂ ವಿಮರ್ಶಕನ ಪ್ರತಿಭೆ ಕೆಲಸ ಮಾಡುವ ರೀತಿಯೇ ಬೇರೆ. ಕವಿಯ ಪ್ರತಿಭೆ ಕಾರಯಿತ್ರೀ ಆದರೆ ವಿಮರ್ಶಕನದು ಭಾವಯಿತ್ರೀ. ಅದು ವಿಮರ್ಶಕನಲ್ಲಿ ಇರುತ್ತದೆಂದೇ ಕವಿಯಾದವನು ತಾತ್ವಿಕವಾಗಿಯಾದರೂ ಒಪ್ಪ ಬೇಕಲ್ಲವೆ? ಅಷ್ಟೇ ಅಲ್ಲ; ಮುಂದುವರಿದು ಹೇಳುತ್ತಾರೆ—

'ಎನಿತು ಹಿರಿದಾದರೂ ನಿನ್ನ ಪಂಡಿತತನಕೆ
ನಿಲುಕೆನೈ ; ನಾನು ಆನಂದ ಉನ್ಮಾದಿನಿ
ದಿವ್ಯಾನುಭೂತಿ ಸಂಭೂತ ರಸವಾಹಿನಿ'

(ಕೃತ್ತಿಕೆ-ಪುಟ. 30)

ವಿಮರ್ಶಕನಿಗೆ ಎಚ್ಚರಿಕೆಯನ್ನೂ ನೀಡುತ್ತಾರೆ—

'ನಿನಗಲ್ಲವೀತೇಜ – ಈ ದೈತ್ಯಶೈಲಿ !
ನಿನ್ನ ಭಾವದ ಮೆಯ್ಯ ಪುಷ್ಟಿಗೊಳಿಸೈ ಮೊದಲು ;
ತೋರ್ಪುದಾಗೆನ್ನ ಶೈಲಿಯ ಮಹಿಮೆ...'

(ಕೃತ್ತಿಕೆ-ಪುಟ. 28)

'ವಿಮರ್ಶಕ'ಎಂಬ ಕವನದಲ್ಲಿ ಕೂಡ ವಿಮರ್ಶಕನೆಂದರೆ, ತನ್ನ ಪ್ರತಿಷ್ಠೆಯನ್ನು ಮೆರೆಸುವ ಸಲುವಾಗಿ ದೋಷಗಳನ್ನು ಹೆಕ್ಕಿ ಹೆಕ್ಕಿ ಪಟ್ಟಿಮಾಡುತ್ತಾನೆಂದು ವಿಡಂಬಿಸುತ್ತಾರೆ. ಅಂಥ ವಿಮರ್ಶಕರೂ ಇದ್ದಾರು. ಆದರೆ ಕವಿ ಅಂಥವರನ್ನೇಕೆ ಗಣಿಸಬೇಕು ? ವಿಮರ್ಶಕನನ್ನು 'ಬೊಗಳುವ ನಾಯಿ', 'ಗ್ರಾಮ ಸಿಂಹ' ಎಂದೆಲ್ಲ ಗೇಲಿ ಮಾಡಿರುವುದುಂಟು. ವಿಮರ್ಶಕನ ಬಗ್ಗೆ ಅವರಿಗಿರುವ ಅವಜ್ಞೆ ನಿಚ್ಚಳವಾಗಿ ಪ್ರಕಟವಾಗಿರುವುದು ಶ್ರೀರಾಮಾಯಣ ದರ್ಶನದಲ್ಲಿ ಹನುಮಂತನ ಸಾಗರೋಲ್ಲಂಘ ನದ ಸಂದರ್ಭದಲ್ಲಿ. ಹನುಮಂತ ನಿಂತಿದ್ದ ಗುಡ್ಡದ ಬಂಡೆ, ಗಿಡ, ಮರ, ಬಳ್ಳಿಗಳು ಅವನ ಕೂಡೆ ಹಾರಿ ಮತ್ತೆ ಕೆಳಗೆ ಬಿದ್ದುವಂತೆ ; ಹೇಗೆಂದರೆ—

'.........ಕವಿ ಕಲ್ಪನೆಯ ಕೂಡೆ
ಏರಲೆಳಸಿಯುಮೇರಲಾರದ ವಿಮರ್ಶಕನ
ಕಾಣ್ಮೆಯಿಲ್ಲದ ಬರಿಯ ಜಾಣ್ಮೆಯೋಲ್'

(ಶ್ರೀ ರಾ. ದ. ಪುಟ 421, ಸಾಲು. 118–120)

ಇದು ಕೇವಲ ಸಾದೃಶ್ಯಕ್ಕಾಗಿ ಬಂದಿರುವ ಉಪಮಾನವಂತೂ ಅಲ್ಲ. ವಿಮರ್ಶಕನ ಗೌರವದ ಪ್ರಶ್ನೆಯನ್ನು ಒತ್ತಟ್ಟಿಗಿಟ್ಟರೂ ಕಾವ್ಯ ಸಂದರ್ಭದ ದೃಷ್ಟಿಯಿಂದಲೂ ಇದು ಗೌರವ ತರುವಂಥದ್ದಲ್ಲವೆಂಬುದನ್ನು ಹೇಳಬೇಕಾಗಿಲ್ಲ. ಇದನ್ನು ಇಷ್ಟೆಲ್ಲ ವಿವರವಾಗಿ ಚರ್ಚಿಸಲು ಕಾರಣವಿದೆ. ಸಾಹಿತ್ಯದಲ್ಲಿ ವಿಮರ್ಶೆ ಉಸಿರಾಟದಷ್ಟೇ ಅನಿವಾರ್ಯವೆಂಬ ಎಲಿಯಟ್ಟನ ಮಾತನ್ನು ಇಲ್ಲಿ ನೆನೆಯಬಹುದು. ಒಬ್ಬ ಸಮರ್ಥನಾದ ವಿಮರ್ಶಕ ಕವಿಕೃತಿಯನ್ನು ಅರ್ಥವಿಸಲು ಸಹೃದಯನಿಗೆ ನೆರವಾಗುವುದಷ್ಟೇ ಅಲ್ಲ; ಕವಿಗೂ ದಾರಿದೀಪವಾಗಬಲ್ಲ. ಸ್ವತಃ ಕುವೆಂಪು ಅವರೇ ಒಂದು ಕಡೆ ಹೀಗೆ ಘೋಷಣೆ ಮಾಡುತ್ತಾರೆ. "ನಿಜವಾದ ವಿಮರ್ಶಕನು ಮಾರ್ಗದರ್ಶಿಯೂ ಅಲ್ಲದೆ ಹೃದಯಸ್ಪರ್ಶಿಯೂ ಆಗುತ್ತಾನೆ. ಒಂದು ದೃಷ್ಟಿಯಿಂದ ನೋಡಿದರೆ ಆತನೂ ರಸದ್ರಷ್ಟನೇ ಹೌದು. ಆತನ ಕಣ್ಣಿನ ಕಾಂತಿ ಇತರರ ಕಣ್ಣು ತೆರೆಯುವಂತೆ ಮಾಡುತ್ತದೆ. ಆತನ ಎದೆಯ ಕಿಡಿ ಇತರರ ಎದೆಗೆ ಕಿಡಿ ಸೂಸುತ್ತದೆ"—ಇತ್ಯಾದಿ. 'ಸಹೃದಯ ವಿಭೂತಿಗೆ ನಮೋ' ಎಂದೂ ಉದ್ಘೋಷಿಸಿದ್ದಾರೆ. ಆದರೆ ದುರಂತವೆಂದರೆ ಇದೆಲ್ಲವೂ ಘೋಷಣೆಯಾಗಿ ಉಳಿಯುತ್ತದೆಯೇ ಹೊರತು ಅವರ ಕೃತಿಗಳ ಸಂದರ್ಭದಲ್ಲಿ ಇದಕ್ಕೆ ಸಮರ್ಥನೆ ಇಲ್ಲ. ಇದೆಲ್ಲದಕ್ಕೆ ಮುಖ್ಯ ಕಾರಣ, ನಾವು ಆಗಲೇ ನೋಡಿದಂತೆ ಕವಿಯ ಸ್ವಕಾವ್ಯ ಪ್ರಜ್ಞೆ ; ಕವಿ ಹಾಗೂ ಕಾವ್ಯದ ಬಗ್ಗೆ ಅವರಿಗಿರುವ ಅವತಾರ ಕಲ್ಪನೆ ಇವುಗಳೇ ಹೊರತು ಬೇರೆ ಅಲ್ಲ.

ಸಹೃದಯ, ವಿಮರ್ಶಕರನ್ನು ಕುರಿತಾದ ಈ ಧೋರಣೆ ಅವರ ಕಾವ್ಯ ಸ್ವರೂಪದ ಮೇಲೂ ಪರಿಣಾಮ ಬೀರಿದೆ. ಅದನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಮೊದಲನೆಯದೆಂದರೆ ಧ್ವನಿಪೂರ್ಣವಾಗಿ ಹೇಳಬಹುದಾದ್ದನ್ನೂ ವಾಚ್ಯವಾಗಿಸುವುದು. ಉದಾಹರಣೆಗೆ 'ಚೋರೆ–ಬೋರೆ' ಎಂಬ ಕವನವನ್ನು ನೋಡಬಹುದು.

ಸುತ್ತಲೂ ನೀರವ ವಾತಾವರಣ. ಈ ನೀರವತೆಯನ್ನು ಭೇದಿಸುವಂತೆ ಬೊಬ್ಬುಳಿ ಗಿಡದಲ್ಲಿ ಕುಳಿತು ಒಬ್ಬಂಟಿಗ ಚೋರೆ ಹಕ್ಕಿ ಹಾಡುತ್ತಿದೆ. ಅದನ್ನು ಕಿವಿಗೊಟ್ಟು ಅಲುಗಾಡದೆ ಕೇಳುತ್ತಿದೆ, ಬೋರೆ. ಅಲ್ಲಿ ಇನ್ನೊಬ್ಬರಿಲ್ಲ. ಹಕ್ಕಿಯ ಹಾಡಿನಿಂದ ಪುಲಕಿತವಾದದ್ದು ಕೇವಲ ಜಡ ಬೋರೆಯಷ್ಟೇ ಅಲ್ಲ. ಸಾಕ್ಷಾತ್ ಕವಿಯೇ ಹೊಂಪುಳಿ ಹೋದ. ಈ ಸನ್ನಿವೇಶದ ರಮಣೀಯತೆಯನ್ನೇ ಕವಿ–

'ಜಡಚೇತನದಾಲಿಂಗನ
ಜುಮ್ಮೆಂದಿದೆ ಮೈ ಶಿವನಾಣೆ'–ಎಂದು ಸಾರ್ಥಕವಾಗಿ

1. ಪಕ್ಷಿಕಾಶಿ—ಪುಟ–27.

ವರ್ಣಿಸುತ್ತಾನೆ. ಕವನ ಅಲ್ಲಿಗೇ ಮುಕ್ತಾಯಗೊಂಡಿದ್ದರೆ ಅದರ ಧ್ವನಿ ಸೌಂದರ್ಯ ಹೆಚ್ಚುತ್ತಿತ್ತು. ಆದರೆ ಕವಿ ಅಲ್ಲಿಗೇ ನಿಲ್ಲಿಸದೆ ಮುಂದುವರಿದು ಹೇಳುವ–

'ಸತ್ತಿಹ ಮೃತ್ತಾಗಿಹ ಬಿತ್ತರ ಬೋರೆಯ ಹುಲ್ ನವಿರಿನ ಮೈ
ಚೋರೆಯ ಮಿಂಚುಲಿ ಹೊನಲಿಗೆ ರೋಮಾಂಚಿತವಾಗುತ್ತಿಹುದೈ
ನಾನಿಲ್ಲಿಲ್ಲದೆ ಹೋಗಿದ್ದರೆ? ಹಾ, ನಾನರಿಯೆ !
ನಾನಿಲ್ಲಿರುವಂದೆನಗಾದನುಭವವಿದನೆಂದೂ ಮರೆಯೆ !'

ಈ ಸಾಲುಗಳಲ್ಲಿ ಅದು ಸಿಡಿದು ಹೋಗಿದೆ. 'ಬೋರೆ' ಜಡ ಎಂಬುವನ್ನು ಸತ್ತಿಹ, ಮೃತ್ತಾಗಿಹ ಎಂಬ ಮಾತುಗಳಲ್ಲಿ ವಾಚ್ಯವಾಗಿಸುತ್ತಾರೆ. ಹಾಗೆಯೇ ''ಚೋರೆಯ ಮಿಂಚುಲಿ ಹೊನಲಗೆ ರೋಮಾಂಚಿತವಾಗುತ್ತಿಹುದೈ'' ಎಂಬುದೂ ಚೇತನದಾಲಿಂಗನದಿಂದಾದ ಪರಿಣಾಮವನ್ನು ವಾಚ್ಯ ಮಾಡುವುದೇ ಆಗಿದೆ. ಕುವೆಂಪು ಅವರ ಕಾವ್ಯರಾಶಿಯಲ್ಲಿ ಇಂಥ ಉದಾಹರಣೆಗಳು ಬೇಕಾದ ಹಾಗೆ ಸಿಗುತ್ತವೆ. ಸೌಂದರ್ಯಾನುಭವವನ್ನು ಅಭಿವ್ಯಕ್ತಿಸುವ ಅನೇಕ ಮಾತುಗಳು ಪತ್ರಿಕಾ ಹೇಳಿಕೆಗಳಾಗಿರುವುದನ್ನು 'ಪಕ್ಷಿಕಾಶಿ'ಯ ಹಲವಾರು ಕವನಗಳಲ್ಲಿ ಕಾಣಬಹುದು. ಇದಕ್ಕೆ ಕಾರಣ, ಕವಿಗೆ ತಾನು ಹೇಳಬೇಕಿರುವುದನ್ನು ಓದುಗರಿಗೆ ಅರ್ಥಮಾಡಿಸಲೇಬೇಕೆಂಬ ಆಗ್ರಹವಲ್ಲದೆ ಬೇರೆ ಅಲ್ಲ.

ಇನ್ನು ಎರಡನೆಯದು, ಕವಿಗೆ ಓದುಗರು ತನ್ನ ಕಾವ್ಯವನ್ನು ಅರ್ಥಮಾಡಿಕೊಳ್ಳುತ್ತಾರೋ ಇಲ್ಲವೋ ಎಂಬ ಕಾಳಜಿ ಕಾಡಿರುವಂತೆ, ಲೋಕದ ಮಂದಿ ತಾನು ಅನುಭವಿಸುತ್ತಿರುವ ಪ್ರಕೃತಿ ಸೌಂದರ್ಯವನ್ನು ಅನುಭವಿಸುತ್ತಿರುವರೋ ಇಲ್ಲವೋ ಎಂಬ ಶಂಕೆ ಗೀಳಿನಂತೆ ಕಾಡಿದೆ. ಭಾಷಣಕಾರನ ಧಾಟಿಯಲ್ಲಿ ತನ್ನ ಚಿಂತೆಯನ್ನು ತೋಡಿಕೊಳ್ಳುತ್ತಾರೆ–

'ಯಾವ ಹೃದಯದ ಮನುಜರಿಹರಿಲ್ಲಿ ? ನನ್ನವೋಲ್
ಯಾರಾದರೀ ಉದಯವನು ನೋಡುತಿಹರೇನು ?
ಲಕ್ಷದೊಳಗೊಬ್ಬನಿರಬಹುದಾತನಿಗೆ ನಮೋ
..........ಶಿವಶಿವಾ ಕಣ್ದೆರೆದು
ಪ್ರಕೃತಿ ಸೌಂದರ್ಯಮಂ ಭಾವನೋಜ್ವಲವಾಗಿ
ನೋಡದಿಹ ಬಾಳೊಂದು ಬಾಳಲ್ಲ.'

(ಪಕ್ಷಿಕಾಶಿ-ಪುಟ. 29)

ಎಂದು ಸಾರಿ ಮುಂದುವರಿದು–

'ಎನಿತು ಶ್ರೀಮಂತರಿಹರೀ ರಾಜಧಾನಿಯಲಿ
ಅವರೆನಿತು ಕಾಲವನು ಕಳೆಯುವರು ಕಲೆಗಾಗಿ
ಹೇಳಯ್ಯ ? ಅವರೊಳಗೆ ಎನಿಬರೀ ಹೊತ್ತು ನಾ
ಕಾಣುತಿರುವೀ ಸೂರ್ಯನುದಯವನು ಕೊಂಡಾಡಿ

ಧನ್ಯರಾಗುತ್ತಿಹರು ಹೇಳಯ್ಯ ? ಅಥವಾ
ರಾತ್ರಿಯೆಲ್ಲವ ಕಳೆಯುತಿಂದ್ರಿಯೋನ್ಮಾದದಲಿ
ಹೊರಳಿವರೊ ಸಜ್ಜೆಯಲಿ ನಾಗರಿಕ ಪಶುಗಳಂತೆ'

(ಪಕ್ಷಿಕಾಶಿ-ಪುಟ. 31)

'ಕ್ರೌಂಚ ಪಙ್ತಿ' ಎಂಬ ಕವನದಲ್ಲೂ ಇಂಥದೇ ಚಿಂತೆ ಅವರನ್ನು ಕಾಡಿದೆ—

'ಇಡಿಯ ಮೈಸೂರು ನಗರದ ಮೇಲೆ ಹಾರಿತಾ
ಭದ್ರವೇಷದ ಸ್ವರ್ಗವಾ ಕ್ರೌಂಚ ಪಙ್ತಿ
ಆದರದು ಮೊಗವೆತ್ತಿ ನೋಡಿಲ್ಲ. ಅದಕಿಲ್ಲ
ಪುರಸತ್ತು ! ಮನೆಬಾಗಿಲಿಗೆ ನಾಕವೊಲಿದು ಬರೆ
ನಾವ್ ಲೆಕ್ಕಿಸುವುದಿಲ್ಲ ಕಣ್ಣೆತ್ತಿ. ತರುವಾಯ
ಹುಡುಕುವೆವು ತೊಳತೊಳಲಿ ತೀರ್ಥಯಾತ್ರೆಗಳಲ್ಲಿ'

ಹೀಗೆಯೇ ಮುಂದುವರೆದು, ಕೊನೆಗೆ ಪ್ರಾರ್ಥಿಸುತ್ತಾರೆ—

'ಪ್ರಾರ್ಥಿಸುವೆನನುದಿನಂ
ನನಗೆ ಆ ವರವಿತ್ತ ನಿನ್ನಂ ಪ್ರಕೃತಿಮಾತೆ
ನನ್ನ ಕನ್ನಡ ಬಂಧುಗಳ ಮನಕದನು ನೀಡು'

(ಪಕ್ಷಿಕಾಶಿ-ಪುಟ. 79)

ಈ ಸಾಲುಗಳೆಲ್ಲ ಸಂಶಯಕ್ಕೆಡೆಯಿಲ್ಲವೆಂತೆ ಸೂಚಿಸುವುದಿಷ್ಟೆ. ಕುವೆಂಪು ಅವರಿಗೆ ತನ್ನ ಕಾವ್ಯದ ಸಹೃದಯ–ವಿಮರ್ಶಕರ ಬಗ್ಗೆ ಮಾತ್ರ ಅನುಮಾನವಿರುವುದಿಲ್ಲ ; ಲೋಕದ ಮಂದಿಯು ಬಗೆಗೇ, ತನ್ನ ಹಾಗೆ ಅವರು ಸೌಂದರ್ಯವನ್ನು ಸವಿಯುತ್ತಾರೆಯೆ, ಸವಿಯ ಬಲ್ಲರೆ ಎಂಬ ಬಗ್ಗೆ ತೀವ್ರ ಸಂದೇಹವಿದೆ. ಹೀಗೆ ಯೋಚಿಸುವ ಮನಸ್ಸು ಬಹುಶಃ ತನಗಿಂತ ಮುಂದೆ ಹೋಗಲಾರದೇನೋ. ಇದೂ ಒಂದು ರೀತಿಯ 'ನಾರ್ಸಿಸಸ್ ಕಾಂಪ್ಲೆಕ್ಸ್' ಎಂಬ ಅನುಮಾನ ಯಾರಿಗಾದರೂ ಬಂದರೆ ಆಶ್ಚರ್ಯವೇನು ? ಕುವೆಂಪು ಅವರ ಬಹುಪಾಲು ಕವನಗಳು ಧ್ವನಿ ಪೂರ್ಣವಾಗದಿರುವುದಕ್ಕೆ ಕಾರಣ ಬಹುಶಃ ಕವಿಯ ಈ ಮನೋಧರ್ಮವೇ ಎಂದು ನನ್ನ ಅನಿಸಿಕೆ. "ದಿವ್ಯ ನಿರ್ಲಕ್ಷತೆಯೆ ವರಕವಿಯ ಪಂಥ" ಎಂದು ಕುವೆಂಪು ಬೇರೊಂದು ಸಂದರ್ಭದಲ್ಲಿ ಹೇಳಿರುವುದನ್ನು (ಕವಿ ಕೀರ್ತಿಕಾಮಿಯಲ್ಲ ಎಂದು ಹೇಳುವ ಸಂದರ್ಭ) ಬಳಸಿಕೊಂಡು ಹೀಗೆ ಹೇಳಬಹುದು: ಕವಿ ಕಾವ್ಯ ರಚಿಸಿದ ಮೇಲೆ, ಅದನ್ನು ಓದುಗರು ಅರ್ಥಮಾಡಿಕೊಳ್ಳುತ್ತಾರೆಯೋ ಇಲ್ಲವೆ ಎಂಬ ಬಗ್ಗೆ, ಅದನ್ನು ಸರಿಯಾಗಿ ಬೆಲೆಗಟ್ಟುತ್ತಾರೆಯೋ ಇಲ್ಲವೆ ಎಂಬ ಬಗ್ಗೆ ದಿವ್ಯ ನಿರ್ಲಕ್ಷತೆ ವಹಿಸಬೇಕು. ಯಾವ ಕವಿಯೇ ಆದರೂ ತನ್ನ ಕಾಲದ, ದೇಶದ ಜನರ ತಿರಸ್ಕಾರ, ಪುರಸ್ಕಾರಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳದೆ ಕಾವ್ಯ ರಚಿಸಬೇಕಾಗುತ್ತದೆ. ಇಂದಲ್ಲದಿದ್ದರೆ ಮುಂದೆಂದಾದರೂ ತನ್ನ ಸಮಾನ ಧರ್ಮಿ

ನೊಬ್ಬ ಹುಟ್ಟುತ್ತಾನೆಂದು ಭವಭೂತಿಯಂತೆ[1] ಭರವಸೆ ತಾಳುತ್ತಾನೆಯೇ ಹೊರತು, ಓದುಗರು ತನ್ನ ಕೃತಿಯನ್ನು ಸಾರ್ಥಕವಾಗಿ ಅರ್ಥವಿಸಿಕೊಳ್ಳಲೇಬೇಕೆಂಬ ಆಗ್ರಹದಿಂದ ತಾನೇ ತನ್ನ ಕಾವ್ಯದ ಬಗ್ಗೆ ಘೋಷಣೆಯ ಡಂಗೂರ ಸಾರ ಹೋಗುವುದಿಲ್ಲ. ಆದರೆ ಕುವೆಂಪು ಅವರ ಸಾಹಿತ್ಯದ ಸಂದರ್ಭದಲ್ಲಿ ಮಾತ್ರ ಇದಕ್ಕೆ ತದ್ವಿರುದ್ಧವಾಗಿಯೇ ಆಗುತ್ತದೆಂಬುದು ನಿಜಕ್ಕೂ ಒಂದು ವಿಪರ್ಯಾಸ.

---

1 ಉತ್ಪತ್ಸ್ಯತೇಽಸ್ತಿ ಮಮ ಕೋಽಪಿ ಸಮಾನ ಧರ್ಮಾ
ಕಾಲೋ ಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ ॥
— 'ಮಾಲತೀ ಮಾಧವ'ದ ಪ್ರಸ್ತಾವನೆಯಲ್ಲಿ.

ಮಹಾಭಾರತದಲ್ಲಿ ಅನನ್ವಯ ಮತ್ತು ಅಸಮಾಲಂಕಾರಗಳ ತುಣುಕುಗಳು

ಬಿ. ಜಿ. ಶ್ರೀಲಕ್ಷ್ಮೀ

ಬಹುತೇಕ ಆಲಂಕಾರಿಕರು ಅನನ್ವಯಾಲಂಕಾರವನ್ನು ಸಾದೃಶ್ಯಾಧರಿತ ಅಲಂಕಾರಗಳ ಪೈಕಿ ಒಂದರಂತೆ, ಉಪಮಾಲಂಕಾರದನಂತರ ನಿರೂಪಿಸುತ್ತಾರೆ. ಅನನ್ವಯದ ಸ್ವರೂಪವು ಅದರ ಹೆಸರೇ ಸೂಚಿಸುವಂತೆ–ಒಂದು ವಸ್ತುವಿನೊಡನೆ ಆ ವಸ್ತುವಿನ ಸಾಧರ್ಮ್ಯವು ಅನ್ವಯವಾಗದಿರುವುದೇ ಅನನ್ವಯ.[1] ಅಂದರೆ ಒಂದು ವಸ್ತುವನ್ನು (ಭಿನ್ನ ಧರ್ಮಗಳಿಂದ ಕೂಡಿದ) ಎರಡೆಂಬಂತೆ ಭಾವಿಸಿ, ಅವಕ್ಕೆ ಅವನ್ನೇ ಹೋಲಿಕೆಯನ್ನಾಗಿ ಕೊಡುವುದು ಅನನ್ವಯ. ಈ ರೀತಿಯ ಹೋಲಿಕೆಯಿಂದ ಎರಡನೇ ಉಪಮಾನ ವಸ್ತುವು (ಅಥವಾ ಹೋಲಿಕೆಯು) ಇಲ್ಲದಂತಾಗಿ, ಪ್ರಕೃತ ವಸ್ತುವಿನ ಅನುಪಮತ್ವವು ಸಿದ್ಧವಾಗುತ್ತದೆ. ಇದು ಅನನ್ವಯದ ಮುಖ್ಯ ವಿವಕ್ಷೆ ಅಥವಾ ಪ್ರಯೋಜನ.[2]

ಉಪಮೆಗೆ ಇರುವಷ್ಟು ದೀರ್ಘ ಇತಿಹಾಸ ಅನನ್ವಯಕ್ಕಿಲ್ಲವೆಂದು ಹೇಳಬಹುದು. ಆದರೂ ಋಗ್ವೇದ ಸಾಹಿತ್ಯದಲ್ಲಿಯ ಅದರ ಪ್ರಯೋಗ ಪ್ರಕಾರವು ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುತ್ತದೆ. ಅಲ್ಲಿ ಅನನ್ವಯವು ಅತ್ಯಂತ ನೈಜವಾಗಿ ಕಾಣಿಸಿಕೊಂಡಿದೆ. ಉದಾ :–ಇಂದ್ರನನ್ನು ಆಮಂತ್ರಿಸುವ ಮಂತ್ರಗಳಲ್ಲಿ :–

(1) ತ್ವಹತ್ವದ ಪ್ರತಿಮಾನಮೋಜೋ.................... 8.96.17

(2) ನ ಹಿ ನ್ವಸ್ಯ ಪ್ರತಿಮಾನಮಸ್ತ್ಯಂತರ್ಜಾತೇಷೂತ...... 4.18.4

---

1. ವರ್ಣ್ಯಮಾನಮಪಿ ಸ್ವಸ್ಯ ಸ್ವೇನ ಸಾಧರ್ಮ್ಯಂ ನ ಅನ್ವೇತೀತಿ-ಕುವಲಯಾನಂದಃ ಪು. 9.
2. (ಅ) ಏಕಸ್ಯತು ವಿರುದ್ಧಧರ್ಮ ಸಂಸರ್ಗೋ ದ್ವಿತೀಯ ಸಬ್ರಹ್ಮಚಾರಿ ನಿವೃತ್ಯರ್ಥಃ ॥ ಅತ ಏವಾನನ್ವಯ ಇತಿ ಯೋಗೋऽಪ್ಯತ್ರ ಸಂಭವತಿ॥ ಅಲಂ. ಸರ್ವ. ಪು. 38.
   (ಆ) ಅನನ್ವಯಿನೋऽಪ್ಯರ್ಥಸ್ಯಾಭಿಮಾನಂ ಸದೃಶಾಂತರ ವ್ಯವಚ್ಛೇದೇನಾನುಪಮತ್ವದ್ಯೋತನಾಯ-ಕುವಲಯ : ಪು. 10.
   (ಇ) ......ಭೇದ ಘಟಿತಸಾದೃಶ್ಯೋಪಚಾರೇಣೈವೋಪನಿಬಧ್ಯತೇ – ಕಾ. ಪ್ರ. ಬಾ. ಬೋಧಾ : ಪು. 582.

–ಈ ಮಂತ್ರಗಳನ್ನು ಪರಿಶೀಲಿಸಿದಲ್ಲಿ 'ಅಪ್ರತಿಮಾನಂ', 'ನ ಅಸ್ಯ ಪ್ರತಿಮಾನಂ' ಮೊದಲಾದ ಪದಗಳಿಂದ ವಸ್ತುವಿನ ಅನನ್ಯ ಸದೃಶತೆಯು ಭಾಸವಾಗುತ್ತದೆ. ಆದರೆ ಇದು ಸೂಚ್ಯಾರ್ಥವಾಗಿರದೆ ವಾಚ್ಯಾರ್ಥವಾಗಿ ಪ್ರತಿಪಾದಿತವಾಗಿದೆ. ಮತ್ತು ಈ ಸಂದರ್ಭಗಳಲ್ಲಿ ಪ್ರಯುಕ್ತವಾಗಿರುವ 'ಪ್ರತಿಮಾನ' ಮೊದಲಾದ ಶಬ್ದಗಳು ಸಾದೃಶ್ಯ ಪ್ರತಿಪಾದಕ ಶಬ್ದಗಳೆಂಬುದನ್ನು ಗಮನದಲ್ಲಿಡಬೇಕು. ಆದರೆ ಲೌಕಿಕ ಅನನ್ವಯಾಲಂಕಾರದಲ್ಲಿ ಅದರ ಸ್ವರೂಪವು ವಿಪರೀತವಾಗಿರುತ್ತದೆ– ವಸ್ತುವಿನ ಸ್ವ–ಹೋಲಿಕೆಯು ವಾಚ್ಯವಾಗುವುದರ ಮೂಲಕ ಅದರ ಅಸದೃಶತೆಯು ಗಮ್ಯವಾಗಿರುತ್ತದೆ. ಇಲ್ಲಿ ಯಾವುದು ಗಮ್ಯವಾಗಿರುತ್ತದೋ ಅದು ಮೇಲಿನ ಉದಾಹರಣೆಗಳಲ್ಲಿ ವಾಚ್ಯವಾಗಿದೆ. ಹೀಗಾಗಿ, ಮೇಲಿನ ಉದಾಹರಣೆಗಳು ಲಾಕ್ಷಣಿಕರ ದೃಷ್ಟಿಯಿಂದ, ವಿಶೇಷವಾಗಿ ಜಗನ್ನಾಥನ ದೃಷ್ಟಿಯಿಂದ ಅನನ್ವಯ ಧ್ವನಿಯ ಉದಾಹರಣೆಗಳಾಗುತ್ತವೆ.[3] ಆದುದರಿಂದ, ಪ್ರಾಚೀನ ಸಾಹಿತ್ಯವು ಪರಿಷ್ಕೃತರೂಪದ ಲೌಕಿಕ ಅನನ್ವಯಾಲಂಕಾರಗಳಿಗೆ ಸಾಕಷ್ಟು ಸಾಮಗ್ರಿಯನ್ನೊದಗಿಸುವುದಿಲ್ಲವೆನ್ನಬಹುದು. ಇನ್ನು ಲೌಕಿಕಕಾಲೀನ ಸಾಹಿತ್ಯದಲ್ಲಿ ಮುಖ್ಯವಾದ ಮಹಾಕಾವ್ಯಗಳಲ್ಲಿ ಕೆಲವೇ ಉದಾಹರಣೆಗಳು ಸಿಗುತ್ತವೆ. ಇದರಿಂದ, ಅನನ್ವಯಾಲಂಕಾರವು ಲಾಕ್ಷಣಿಕರ ಕೈಯಲ್ಲಿ ಅಥವಾ ಕಾವ್ಯಮೀಮಾಂಸೆಯ ಗ್ರಂಥಗಳಲ್ಲಿ ಬೆಳೆದು ಪ್ರಸಿದ್ಧವಾಯಿತೆನ್ನಬಹುದು.

ನಾನಾ ಆಲಂಕಾರಿಕರ ಸಂಹಿನಲ್ಲಿ ಬೆಳೆದ ಅನನ್ವಯ ಅಲಂಕಾರದ ತತ್ವವು ಮಾತ್ರ ಏಕರೂಪವಾಗಿರುತ್ತದೆ. ಮೂಲಭೂತ ವ್ಯತ್ಯಾಸವು ತೋರುವುದಿಲ್ಲ. ಒಂದು ಬಗೆಯ ವ್ಯತ್ಯಾಸ ತೋರುವುದಾದರೆ ಅದು ಕೇವಲ ಬಾಹ್ಯ–ಭಾಮಹ, ಉದ್ಭಟ ಮೊದಲಾದ ಆಲಂಕಾರಿಕರು ಇದನ್ನು ಪ್ರತ್ಯೇಕವಾಗಿ ನಿರೂಪಿಸುವುದಾದರೆ, ದಂಡೀ, ರುದ್ರಟಾದಿ ಲಾಕ್ಷಣಿಕರು ಇದನ್ನು ಉಪಮೆಯ ಉಪಭೇದವೆಂದೋ ಅಥವಾ ಔಪಮ್ಯ ವರ್ಗದಲ್ಲೋ ಸೇರಿಸುತ್ತಾರೆ.[4]

ಹಾಗೆಯೇ, ಅನನ್ವಯದ ಸ್ವರೂಪ ಮತ್ತು ಪ್ರಯೋಜನದಲ್ಲಿ ಪ್ರಾಚೀನರಿಗೂ ಮತ್ತು ನವೀನಾಲಂಕಾರಿಕರಾದ ಮಮ್ಮಟ, ರುಯ್ಯಕ ಮೊದಲಾದವರಿಗೂ ಭಿನ್ನತೆಯು ತೋರುವುದಿಲ್ಲ. ಮಮ್ಮಟನ ಲಕ್ಷಣವನ್ನು ಉದಾಹರಿಸುವುದಾದರೆ, ಒಂದು ವಾಕ್ಯದಲ್ಲಿ ಒಂದೇ ವಸ್ತುವು ಉಪಮಾನ–ಉಪಮೇಯಗಳಾಗಿ ವರ್ಣಿಸಲ್ಪಟ್ಟಲ್ಲಿ ಅದು ಅನನ್ವಯವಾಗುತ್ತದೆ.[5] ಬೇರೆಯವರೂ ಸಹ ಸಾಮಾನ್ಯವಾಗಿ

3. ...ತುಲಾದೀಯತ್ರೈವೇತ್ಯರ್ಥೋಽನನ್ವಯಾತ್ಮಾ. ಇತರ ಪದವಃ ಹಿಮ್ನಾವ್ಯಜ್ಯತೇ-ರಸ. ಗಂ. ಪು. 209.

4. ಕಾವ್ಯಾದರ್ಶ : 2.37. ರು. ಕಾವ್ಯಾಲಂ, 8.11.

5. ಉಪಮಾನೋಪಮೇಯತ್ವೇ ಏಕಸ್ಯೈವೈಕವಾಕ್ಯಗೇ ಅನನ್ವಯಃ–ಕಾ.ಪ್ರ.

ಹೀಗೆಯೇ ಲಕ್ಷಣವನ್ನು ಕೊಡುತ್ತಾರೆ. ಆದರೆ ಮಮ್ಮಟನು ವೃತ್ತಿಯಲ್ಲಿ ಇದರ ಅರ್ಥವನ್ನು ವಿಶದಪಡಿಸುತ್ತಾ, ಅನ್ಯ-ಉಪಮಾನಗಳೊಡನೆ ಪ್ರಕೃತ ವಸ್ತುಗಳ ಸಂಬಂಧವಿಲ್ಲದಿರುವುದನ್ನು ವರ್ಣಿಸುವುದು ಅನನ್ವಯದ ಪರಮಾರ್ಥವೆಂದು ಹೇಳುತ್ತಾನೆ.[6] ಅಂದರೆ ಉಪಮಾನಾಂತರ ಪ್ರಸಕ್ತಿಯಿದ್ದು ಅದರ ಸಂಬಂಧ ರಾಹಿತ್ಯವನ್ನು ತಿಳಿಸುವ ಉದ್ದೇಶದಿಂದ ಅದೇ ವಸ್ತುವನ್ನು ಉಪಮಾನವನ್ನಾಗಿ ಕೊಡುವುದು ಎಂದರ್ಥವಾಗುತ್ತದೆ.[7] ವಸ್ತುವನ್ನು ಅದೇ ವಸ್ತುವಿನಿಂದ ಹೋಲಿಸಿದಾಗ (ಕಲ್ಪಿತ) ಸಾದೃಶ್ಯವು ಹೇಗೆ ನಿಮಿತ್ತವಾಗುವುದೊ ಹಾಗೆ ಉಪಮಾನಾಂತರಗಳೊಡನೆ ಅದರ ಅಸಂಬಧವನ್ನು ಅರ್ಥಮಾಡಿಕೊಳ್ಳುವಾಗಲೂ ಸಾದೃಶ್ಯವನ್ನು ಮುಂದಿಟ್ಟುಕೊಂಡು ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ಸಾದೃಶ್ಯವು ಅನನ್ವಯಾಲಂಕಾರದ ಅಂಗವೆಂದಹಾಗಾಯಿತು. ಇಲ್ಲಿ ಅಸಾದೃಶ್ಯಕ್ಕಾಗಲೀ ಅಥವಾ ಉಪಮಾನಿಷೇಧಕ್ಕಾಗಲೀ ಅವಕಾಶವಿಲ್ಲವೆಂದಾಗುತ್ತದೆ. ಈ ಸೂಕ್ಷ್ಮಾಂಶವನ್ನು ಗಮನಿಸಿಯೋ ಏನೊ ಬಹುಶಃ ಜಗನ್ನಾಥನು 'ಅಸಮ' ಅಲಂಕಾರವನ್ನು ಅನನ್ವಯದಿಂದ ಬೇರೆಯಾಗಿ ಹೆಸರಿಸಿ ಉದಾಹರಿಸಿರುವುದು.[8] ಆದರೆ ಮಮ್ಮಟನು, ಅವನ ವ್ಯಾಖ್ಯಾನಕಾರರು ಹಾಗೂ ಅನಂತರದ ಇತರ ಪ್ರಸಿದ್ಧ ಅಲಂಕಾರಿಕರು ಅಸಮಾಲಂಕಾರವನ್ನು ಹೆಸರಿಸುವುದಿಲ್ಲ. ಇವರಲ್ಲಿ ಕೆಲವರು ಇದನ್ನು ಪ್ರಸ್ತಾಪಿಸಿ ಅನನ್ವಯದಲ್ಲಿ ಸೇರಿಸುವ ಪ್ರಯತ್ನ ನಡೆಸಿದ್ದಾರೆ. ಮಮ್ಮಟನ ಅನನ್ವಯದ ಅರ್ಥವಿವರಣೆಯಲ್ಲದೆ ಅದಕ್ಕೂ ಮೊದಲು ಪ್ರಾಚೀನಾಲಂಕಾರಿಕರ ಲಕ್ಷಣದಲ್ಲಿ ಪ್ರಯುಕ್ತವಾದ 'ಅಸಾದೃಶ್ಯ' ಮತ್ತು 'ಅನನ್ಯಸದೃಶ' ಪದಗಳು ಇವೆರಡು

---

6. (ಅ) ಉಪಮಾನಾಂತರ ಸಂಬಂಧಾಭಾವೋಽನನ್ವಯಃ –ಕಾ.ಪ್ರ.ವೃ.
   (ಆ) ನವಿದ್ಯತೇ ಅನ್ವಯಃ ಸಂಬಂಧಃ ಅರ್ಥಾದುಪಮಾನಾಂತರೇಣ ಯತ್ರ ಸೋಽನನ್ವಯಃ ಇತ್ಯನ್ವರ್ಥಕಮಲಂಕಾರನಾಮೇದಮ್-ಕಾ. ಪ್ರ. ವ್ಯಾ. ಬಾ. ಬೋ.-ಪು. 581.
   (ಇ) ದ್ವಿತೀಯ ಸದೃಶ ವ್ಯವಚ್ಛೇದ-
   ಸದೃಶಾಂತರ ವ್ಯವಚ್ಛೇದ-
   ಉಪಮಾನಾಂತರ ಸಂಬಂಧಾಭಾವ...ಹೀಗೆ ಪ್ರಯೋಜನವನ್ನು ಬೇರೆ ಪದಗಳಿಂದ ತಿಳಿಸುವುದುಂಟು.
7. ಹೋಲಿಸಿ :...'ಸದೃಶಾಂತರ ಪ್ರಸಕ್ತ್ಯಭಾವೇನ + ತದ್ ವ್ಯವಚ್ಛೇದಸ್ಯ ಫಲತ್ವಾಯಗಾತ್ ಚ-ಚಿತ್ರ. ಮೀ. ಪೆ. 149.
8. (ಅ) ಸರ್ವಥೈವೋಪಮಾನಿಷೇಧೋಽ ಸಮಾಲಂಕಾರಃ । ರಸ. ಗಂ. ಪು. 210.
   (ಆ) ದ್ವಿತೀಯ ಸದೃಶವ್ಯವಚ್ಛೇದಫಲಕ ವರ್ಣನ ವಿಷಯೀಭೂತಂ ಯದೇಕೋಪಮಾನೋಪಮೇಯಕಂ ಸಾದೃಶ್ಯಂ ತದನನ್ವಯಃ । ರಸ. ಗಂ. ಪು. 203

ಅಲಂಕಾರಗಳ ನಡುವಿನ ವಿವಕ್ಷಾಭೇದವನ್ನು ತಿಳಿಸುವ ಸೂಚನೆಗಳಾಗಿ ಜಗನ್ನಾಥನಿಗೆ ಒದಗಿರಬಹುದು.[9]

ಅನನ್ವಯಾಲಂಕಾರದ ಈ ಲಘು ಇತಿಹಾಸವು ಮಹಾಭಾರತದ ಉದಾಹರಣೆಗಳ ಪರಿಶೀಲನೆಗೆ ತಾತ್ವಿಕ ಹಿನ್ನಲೆಯಾಗುತ್ತದೆ. ಅಥವಾ, ಪ್ರಾಚೀನ ಹಾಗೂ ನವೀನ ಕೃತಿಗಳ ದೃಷ್ಟಿಯಿಂದ ಎಪಿಕ್ ಕಾವ್ಯಗಳು ಅವಶ್ಯವಾದ ಮೂಲ ಸಾಮಗ್ರಿಯನ್ನು ಲಾಕ್ಷಣಿಕರಿಗೆ ಒದಗಿಸುತ್ತದೆಯೆಂದು ಹೇಳಿದರೆ ಸೂಕ್ತವೆನಿಸುತ್ತದೆ. ಪ್ರಯೋಜನವನ್ನು ಕುರಿತು ವಾಚ್ಯವಾಗಿ ವರ್ಣಿಸುವ ಅನನ್ವಯ ಉದಾಹರಣೆಗಳು ಮಹಾಭಾರತದಲ್ಲಿ ಬಹಳವಿದ್ದು ಋಗ್ವೇದ ಸಾಹಿತ್ಯ ಸಮೀಪಕ್ಕೆ ಬರುತ್ತದೆ—

(ಅ) ತದಾಹೃತ್ಯ ತುತಾಂ ಚಕ್ರೇ ಸೋಽಸುರೋಽಪ್ರತಿಮಾಂ ಸಭಾಂ ।
ವಿಶ್ರುತಾಂ ತ್ರಿಷು ಲೋಕೇಷು ದಿವ್ಯಾಂ ಮಣಿಮಯಾಂ ಶುಭಾಮ್ ॥ 2.3.17 ॥

(ಭಾವಾರ್ಥ : ಮಣಿರತ್ನಗಳನ್ನು ತಂದು, ಅಸುರಮಯನು ಮೂರು ಲೋಕಗಳಲ್ಲಿ ಪ್ರಖ್ಯಾತವಾದ ಅಲೌಕಿಕವಾದ ರತ್ನಖಚಿತವಾದ, ಅಪ್ರತಿಮವಾದ ಭವನವನ್ನು ನಿರ್ಮಿಸಿದನು).

(ಆ) ಸ ತು ಗಚ್ಛನ್ನನೇಕಾಗ್ರೋ ಸಭಾಮೇವಾನುಚಿಂತಯನ್ ।
ಶ್ರೀಯಂಚ ತಾಮನುಪಮಾಂ ಧರ್ಮರಾಜಸ್ಯ ಧೀಮತಃ ॥ 2.43.16 ॥

(ಭಾವಾರ್ಥ : ದುಗುಡ ಮನಸ್ಸಿನ ದುರ್ಯೋಧನನು ಧರ್ಮರಾಜನ ಸಭೆಯನ್ನು ಮತ್ತು ಅನುಪಮವಾದ ಸಂಪತ್ತನ್ನು ಚಿಂತಿಸುತ್ತ ಹಸ್ತಿನಾಪುರಕ್ಕೆ ಹೊರಟನು).

(ಇ) ಇಚ್ಛತಾಂ ಪಾರ್ಥಿವೇಂದ್ರಾಣಾಂ ಭೀಷ್ಮ ಜೀವಸ್ಯ ಸಂಶಯಂ ।
ಲೋಕವಿದ್ವಿಷ್ಟ ಕರ್ಮಾ ಹಿ ನಾನ್ಯೋಽಸ್ತಿ ಭವತಾಸಮಃ ॥ 2.41.23 ॥

(ಭಾವಾರ್ಥ : ಭೀಷ್ಮನೇ! ಲೋಕವು ನಿಂದಿಸುವ ವರ್ತನೆಯಲ್ಲಿ ನಿನಗೆ ಸಮನರಾರೂ ಯಿಲ್ಲವಾಗಿದ್ದಾರೆ).[10]

---

9. (ಅ) ಯತ್ರ ತೇನೈವ ಸ್ಯಾದುಪಮಾನೋಪಮೇಯತಾ ।
ಅಸಾದೃಶ್ಯ ವಿವಕ್ಷಾತಸ್ತಮಿತ್ಯಾಹುರನನ್ವಯಮ್ ॥ ಭಾಮಹ. ಕಾವ್ಯ. ಲಂ. 3.45.

(ಆ) ಸ್ಯಾದನನ್ವಯಾಖ್ಯಾಯತ್ರೈಕಂ ವಸ್ತ್ವನನ್ವಸದೃಶಮಿತಿ ।
ಸ್ವಸ್ಯ ಸ್ವಯಮೇವ ಭವೇದುಪಮಾನಂ ಚೇದುಪಮೇಯಂಚ ॥
ರುದ್ರಟ. ಕಾವ್ಯಾ. ಲಂ. 8-11.

10. ಹೋಲಿಸಿ : ಉಕ್ತಂಚ ರಸಗಂಗಾಧರೇಽಪಿ......'ವರ್ತತಾಂ ನಾಮ ತತ್ಸದೃಶಂ ಕ್ವಾಪಿ ತ್ವಯಾ ತು ದುಷ್ಪ್ರಾಪಮೇವ' ಇತಿ ಪ್ರತ್ಯಯಾದಾತ್ಯಂತಿಕೋಪಮಾನ ನಿಷೇಧಾಭಾವಾದುಪಮಾನ ಲುಪ್ತೋಪಮೈವೇಯಂ ಭವಿತುಮರ್ಹತಿ ನಾಸಮಾಲಂಕಾರಃ ।
ಅನ್ಯಥಾ ಮಾಲತೀಕುಸುಮಸದೃಶಂನಾಸ್ತೀತ್ಯೇವ ಬ್ರೂಯಾತ್ ನ ಪ್ರಾಪ್ಸ್ಯಸಿ ಇತಿ—ಕಾ. ಪ್ರ. ವ್ಯಾ. ಬಾ. ಬೋ. : ಪು. 575.

—ಈ ಉದಾಹರಣೆಗಳಲ್ಲಿ ದ್ವಿತೀಯ ಸದೃಶ ವ್ಯವಚ್ಛೇದಾತ್ಮಕ ಪ್ರಯೋಜನವು 'ಅನುಪಮ', 'ಅಪ್ರತಿಮ' ಮತ್ತು ಪ್ರತ್ಯೇಕ 'ನಕಾರ' ಪದಗಳಿಂದ ತಿಳಿಸಲ್ಪಟ್ಟಿದೆ.

ಇನ್ನೊಂದು ತರದಲ್ಲಿ, ಪ್ರಸಿದ್ಧ ರೂಪದ ಅನನ್ವಯೋದಾಹರಣೆಗಳು ಮಹಾಭಾರತದಲ್ಲಿ ಅಲ್ಪವಾದರೂ ಬಳಕೆಯಲ್ಲಿದ್ದವೆಂದು ಮುಂದಿನ ಉದಾಹರಣೆಯು ತಿಳಿಸುತ್ತದೆ—

"ಭೀಮಸ್ತು ಭೀಮಸಂಕಾಶೋ ರಥಾತ್‌ಪ್ರಸ್ಕಂದ್ಯ ಕುಂಡಲೀ ।
ತ್ರಿಗರ್ತರಾಜಮಾದತ್ತ ಸಿಂಹಃ ಕ್ಷುದ್ರಮೃಗಂ ಯಥಾ ॥ 4.32.32 ॥

(ಭಾವಾರ್ಥ : ಭೀಮನು ಭೀಮನಂತೆ ರಥದಿಂದ ನೆಗೆದು ಸಿಂಹವು ಜಿಂಕೆಮರಿಯನ್ನು ಹಿಡಿಯುವಂತೆ ತ್ರಿಗರ್ತರಾಜನನ್ನು ಹಿಡಿದನು).

—ಇದಕ್ಕೆ ವ್ಯಾಖ್ಯಾನ ಬರೆಯುತ್ತ ನೀಲಕಂಠನು ಹೀಗೆ ಹೇಳುತ್ತಾನೆ—ಭೀಮಸಂಕಾಶೋ ಭೀಮೋಪಮಃ ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ ಇತಿವದನುಪಮ ಇತ್ಯರ್ಥಃ—ಮ. ಭಾ. ನೀ. ವ್ಯಾ.—ಪು. 50.
ಈ ವಿವರಣೆಯು ಶ್ಲೋಕದಲ್ಲಿ ಅನನ್ವಯಾಲಂಕಾರವನ್ನು ಖಚಿತಪಡಿಸುತ್ತದೆ.

ಮೊದಲಿನ ಉದಾಹರಣೆಗಳಲ್ಲಿ ಉಪಮಾನ ನಿಷೇಧವು ನೇರವಾಗಿ ಮಾಡಲ್ಪಟ್ಟು, ಜಗನ್ನಾಥನ ಪ್ರಕಾರ ಅವು ಅನನ್ವಯ ಧ್ವನಿಯಾಗುತ್ತವೆಂದು ಹಿಂದೆ ಹೇಳಿದ್ದಾಗಿದೆ. ಅದೇ ನಿಷೇಧವು ಸಾರ್ವಕಾಲಿಕ (ಸಂಪೂರ್ಣ) ವಾದಾಗ ಅಸಮಾಲಂಕಾರವೆನಿಸುತ್ತದೆ. ಆದರೆ ಹಲವು ಅಲಂಕಾರಿಕರ ಮತದಲ್ಲಿ ಇದು ಅನನ್ವಯವೇ ಆಗಿರುತ್ತದೆ.[11] ಈ ಸೂಕ್ಷ್ಮ ಭೇದವನ್ನು ಗುರುತಿಸಿ ಒಪ್ಪುವುದಾದರೆ, ಪ್ರಸ್ತುತ ಮಹಾಭಾರತದಲ್ಲಿ ಅನನ್ವಯ ಮತ್ತು ಅಸಮಾಲಂಕಾರಗಳನ್ನು ಬೇರೆಯಾಗಿ ಕೆಲವು ವೇಳೆ ಆಸುಪಾಸಿನಲ್ಲಿಯೇ ಕಾಣಬಹುದು. ಇವೆರಡರ ಜೊತೆ ಉಪಮಾನ ಲುಪ್ತೋಪಮೆಯ ಇರೋಣವನ್ನು ನೋಡಬಹುದು. ಒಟ್ಟಾರೆ ಹೇಳುವುದಾದರೆ ಅನನ್ವಯವು, ಪದಾರ್ಥದ ಸ್ವಹೋಲಿಕೆಯಿಂದ ಬೇರೊಂದು ಉಪಮಾನವು ಇಲ್ಲವಾಗಿಸುವುದು; ಅಸಮವು, ಉಪಮಾನ (ಉಪಮಾ)ದ ಆತ್ಯಂತಿಕ ನಿಷೇಧ;

11. ....ಸರ್ವಥೈವೋಪಮಾನ ನಿಷೇಧಾತ್ಮಕೋಽಸಮಾಲಂಕಾರಃ ಪ್ರಾಚೀನೈರುಕ್ತಃ ಉಪಮಾನಲುಪ್ತೋಪಮಾತಿವ್ಯಾಪ್ತಿವಾರಣಾಯ ಸರ್ವಥೇತಿ । ಏವಂ ಚ ತತ್ರ್ಧ್ವನಿನೈವ ಚಮತ್ಕಾರೋಪಪತ್ತೌ । ಅನನ್ವಯಸ್ಯ ಪೃಥಗಲಂಕಾರತ್ವಂ ಕಿಮರ್ಥಮ್ ।...ಅನ್ಯಥಾ ದೀಪಕಾದಾವಪಿ ಉಪಮಾಭಿವ್ಯಕ್ತ್ಯೈವ ಚಮತ್ಕಾರೋಪಪತ್ತೌ ತೇಷಾಮಪಿ ಪೃಥಗಲಂಕಾರತ್ವಂ ನಸ್ಯಾದಿತ್ಯಾಹುಃ । .. ಇತ್ಯುದ್ಯೋತಃ—ಕಾ. ಪ್ರ. ಬಾ. ಬೋ. ವ್ಯಾ. ಪು. 583.

ಉಪಮಾನ ಲುಪ್ತೋಪಮೆಯಾದರೂ ಉಪಮಾನ ಪದದ ಅಪ್ರಯೋಗ. ಇವೇ ಮೂರರೊಳಗಿನ ಅವಾಂತರ ಭೇದವೆಂದು ನಿಷ್ಕರ್ಷಿಸಬಹುದು.[12] ಮುಂದಿನ ಉದಾಹರಣೆಗಳಿಂದ ಭೇದವು ಸ್ಪಷ್ಟವಾಗುತ್ತದೆ[13].

(ಅ) ಸ ಶಿಕ್ಷಿತಃ ಕೃತವೈರ ಸ್ತರಸ್ವೀ ದಹೇತ್ ಕ್ರುದ್ಧಸ್ತರಸಾಧಾರ್ತರಾಷ್ಟ್ರಾನ್ ।
ಗದಾಭೃತಾಂ ಸಾದೃಸಮೋಽಸ್ತಿ ಭೀಮಾದ್ಧಸ್ತ್ಯಾರೋಹೋನಾಸ್ತಿಸಮಶ್ಚ ತಸ್ಯ
॥ 5.22.14.

(ಭಾವಾರ್ಥ :- ಗದೆಯನ್ನು ಚಲಿಸುವುದರಲ್ಲಿ, ಆನೆಯನ್ನು ಏರುವುದರಲ್ಲಿ ಭೀಮನಿಗೆ ಈಗ ಸಮನಾರೂ ಇಲ್ಲ).

(ಆ) ಲೋಹಿತಾಕ್ಷೋ ಗುಡಾಕೇಶೋ ನಾರಾಯಣ ಸಹಾಯವಾನ್ ।
ಉಭಯೋಃ ಸೇನಯೋರ್ವೀರ ರಥೋ ನಾಸ್ತೀಹದೃತಾದೃಶಃ ॥
ನಹಿ ದೇವೇಷು ವಾಪೂರ್ವಂ ದಾನವೇಷೂರಗೇಷು ವಾ ।
ರಾಕ್ಷಸೇಷ್ವಥ ಯಕ್ಷೇಷು ನರೇಷು ಕುತ ಏವತು ॥
ಭೂತೋವಾ ಭವಿಷ್ಯೋವಾ ರಥಃ ಕಶ್ಚನ್ ಮಯಾ ಶ್ರುತಃ ।
....॥ 5.166.28-30.

(ಭಾವಾರ್ಥ :- ಇಲ್ಲಿ, ಎರಡು ಸೈನ್ಯಗಳ ನಡುವೆ ಅರ್ಜುನಂತಹ ರಥಿಯು ಇಲ್ಲ. ಹಿಂದೆ ದೇವತೆಗಳಲ್ಲಾಗಲೀ, ದಾನವರಲ್ಲಾಗಲೀ, ನಾಗರಲ್ಲಾಗಲೀ ಅಥವಾ ರಾಕ್ಷಸ-ಯಕ್ಷರಲ್ಲೂ ಕೇಳಿಲ್ಲ. ಇನ್ನು ಮನುಷ್ಯರಲ್ಲೇನು ? ಹಿಂದೆಯಾಗಲೀ, ಮುಂದೆಯಾಗಲೀ ಅಂತಹ ರಥಿಯು ಹುಟ್ಟಿರುವುದನ್ನು, ಹುಟ್ಟುವುದನ್ನು ನಾನು ಕೇಳಿಲ್ಲ!).

(ಇ) ಮತ್ಸಮೋಹಿ ಗದಾಯುದ್ಧೇ ಪೃಥಿವ್ಯಾಂ ನಾಸ್ತಿಕಶ್ಚನ ।
ನಾಸೀತ್ ಕಶ್ಚಿದತಿಕ್ರಾಂತೋ ಭವಿತಾ ನ ಕಶ್ಚನ ॥ 5.54.31.

(ಭಾವಾರ್ಥ :- ಭೂಮಿಯಲ್ಲಿ ಗದೆಯೊಂದಿಗೆ ಯುದ್ಧಮಾಡುವವರು ನನ್ನ ಸಮ ಇಲ್ಲ. ಹಿಂದೆಂದೂ ನನ್ನನ್ನು ಮೀರಿಸಿದವರಿರಲಿಲ್ಲ; ಮುಂದಾದರೂ ಬರುವವರಿಲ್ಲ).

---

12. (ಅ) ಆತ್ಯಂತಿಕಃ ಕ್ವಾಚಿತ್ಕಾಚ್ಚ ಸದೃಶ ನಿಷೇಧೋಽಸಮೋಪಮಾನಲುಪ್ತಯೋರ್ವಿಷಯಃ ಸರ್ವಥೈವೋಪಮಾನ ನಿಷೇಧೇನ ಸಾದೃಶ್ಯಸ್ಯಾ ಪ್ರತಿಷ್ಠಾನಾನ್ನೋಪಮಾಗಂಧೋಽಪಿ । ರಸ. ಗಂ.: ಪು. 211.

(ಆ) ಅಯಂಚಾನನ್ವಯೋ ವ್ಯಂಗ್ಯೋಽಪಿ ತಚ್ಚಮತ್ಕಾರಾನುಗುಣತಯಾ ರೂಪಕದೀಪಕಾದಾವುಪಮೇವ ನಪೃಥಗಲಂಕಾರಾಖ್ಯ ವ್ಯಪದೇಶಂ ಭಜತೇ । ವಾಚ್ಯತಾಯಾಂ ತು ಸ್ವಾತಂತ್ರ್ಯೇಣ ಚಮತ್ಕಾರಿತಯಾ ಪೃಥಗವ್ಯಪದೇಶಭಾಕ್। ರಸ. ಗಂ. : ಪು. 210.

(ಇ) 'ತಸ್ಯಾಃ ಸಂಭವದುಪಮಾನಾನುಪಾದಾನವಿಷಯತ್ವಾತ್ । ರಸ. ಗಂ.: ಪು. 211.

13. ಹೋಲಿಸಿ, ಋ. 4.18.4.

—ಪ್ರಥಮ ಶ್ಲೋಕದಲ್ಲಿ ಪ್ರಯುಕ್ತವಾಗಿರುವ 'ಅದ್ಯ' ಶಬ್ದವು ನಿಷೇಧವನ್ನು ಕೇವಲ ವರ್ತಮಾನಕ್ಕೆ ಸೀಮಿತಗೊಳಿಸುವುದರಿಂದ ಅನನ್ವಯ ಮತ್ತು ಅಸಮಾಲಂಕಾರಗಳ ನಡುವಿನ ಅಂತರವನ್ನು ಸ್ಫುಟಗೊಳಿಸುತ್ತದೆ. ಎರಡನೆಯದರಲ್ಲಿ ನಿಷೇಧವು ಖಡಾಖಂಡಿತವಾಗಿರದೆ, ಸಂಪೂರ್ಣವಾಗಿರದೆ, ಕಿವಿಗೆ ಬೀಳದ ಉಪಮಾನವು ಬೇರೆಡೆಯಲ್ಲಿರುವ ಸಂಭವ ಉಂಟೆಂಬ ಅರ್ಥವನ್ನು ಕೊಡುವುದರಿಂದ ಉಪಮಾನಲುಪ್ತೋಪಮೆಯು ಕವಿಯ ಅಭಿಪ್ರಾಯವಾಗಿರಬಹುದೆಂಬುದು ಸೂಕ್ತವಾಗಿ ಕಾಣುತ್ತದೆ. ಆದರೂ ಕೊನೆಯಲ್ಲಿ 'ಹಿಂದೆಂದೂ, ಮುಂದೆಂದೂ ಕೇಳಬರದ' ಎಂಬ ಪ್ರಯೋಗವಿರುವುದರಿಂದ ಅಸಮಾಲಂಕಾರದಲ್ಲಿ ಪರ್ಯವಸಾನವಾಗುವ ವಿವಕ್ಷೆ ಇದ್ದಂತೆಯೂ ತೋರುತ್ತದೆ. ಆದರೆ ಅದೇ ಮೂರನೆಯದರಲ್ಲಿ (ಗರ್ವದ ಮಾತಾದರೂ) ನಿಷೇಧವು ಸಂಪೂರ್ಣವಾಗಿ ಸ್ಪಷ್ಟವಾಗಿ ಮೂಡಿದೆ. ಇದನ್ನು ಅಸಮಾಲಂಕಾರ ಕೋಟಿಯಲ್ಲಿ ಸೇರಿಸುವುದಕ್ಕೆ ಯಾವ ಬಾಧಕವೂ ಇಲ್ಲ. ಹೀಗೆ ಕೊಂಚ ವ್ಯತ್ಯಾಸ ಬಂದರೂ ಅಲಂಕಾರಗಳ ಅತಿವ್ಯಾಪ್ತಿ (overlapping) ಆಗಿ, ಕೊನೆಗೆ ವಿಮರ್ಶಕನ (ಸಂದರ್ಭದಲ್ಲಿಯ ಕವಿಯ ವಿವಕ್ಷೆಯನ್ನೊಳಗೊಂಡಂತೆ) ವಿವೇಚನೆಯನ್ನವಲಂಬಿಸಿರುತ್ತದೆ.

ಮೇಲಿನ ಕೆಲವು ನಿದರ್ಶನಗಳು ಮಹಾಭಾರತದಲ್ಲಿ ಅನನ್ವಯವು ವಾಚ್ಯರೂಪದಲ್ಲಿ ಪ್ರಸಿದ್ಧವಾಗಿರಲಿಲ್ಲವೆಂಬುದನ್ನು ಪ್ರಚುರ ಪಡಿಸುತ್ತದೆ. ಅನನ್ವಯಾಲಂಕಾರದಲ್ಲಿ ಯಾವುದು ವಾಚ್ಯವಾಗಿರಬೇಕೊ ಅದು ಇಲ್ಲಿ ಗಮ್ಯವಾಗಿದ್ದು, ಈ ಉದಾಹರಣೆಗಳೇ ಹೆಚ್ಚಾಗಿ ಮತ್ತು ನೈಜವಾಗಿ ಕಾಣಿಸಿಕೊಳ್ಳುತ್ತವೆ. ಅಲ್ಲದೆ, ಇವುಗಳಲ್ಲಿ ಅನನ್ವಯ, ಉಪಮಾನಲುಪ್ತೋಪಮೆ ಮತ್ತು ಅಸಮಾಲಂಕಾರಗಳ ಬೆಳವಣಿಗೆ ಹಾಗೂ ವ್ಯತ್ಯಾಸಗಳನ್ನು ಚೆನ್ನಾಗಿ ಗುರುತಿಸಬಹುದು.

ಮೊದಲಮಳೆ

ರಾಮಗಿರಿ ರವೀಂದ್ರ

ಬೇಸಿಗೆಯ
ಮುಗಿಲು
ಮಸು ಮಸು
ಅತ್ಯಾಗ
ಮುತ್ತುಗಳು
ನೆಲದಲ್ಲಿ
ಇಂಗುತ್ತವೆ.
ಹಿಗ್ಗಿ ಅರಳಿದ–
ಮಣ್ಣು ಘಮ, ಘಮಿಸಿ
ಹೂ, ಹಣ್ಣು
ಬಣ್ಣ ಬಣ್ಣದ
ಕಣ್ಣುಗಳ
ಬಿಚ್ಚುತ್ತದೆ.
ಕೋ–
ಕಿಲ ಕಿಲ
ಜುಳು ಜುಳು
ನೆಲ
ಹಸಿ–
ಹಸಿರು ಹೊಲ,
ಗದ್ದೆ ಮೈ ತುಂಬಿದಾಗ
ನವ–
ಮಾಸದ ನೆನಪು

ಉಡುಪಿ ತಾಲೂಕಿನ ಸ್ಥಳನಾಮಗಳು : ಕೆಲವು ಪರಿಶೀಲನೆಗಳು*

ರಘುಪತಿ ಕೆಮ್ತೂರು

ಉಡುಪಿ ತಾಲೂಕಿನ ಬಹುತೇಕ ಸ್ಥಳನಾಮಗಳು, ಜಿಲ್ಲೆಯ ಇತರ ತಾಲೂಕಿನ ಸ್ಥಳನಾಮಗಳ ಹಾಗೆ, ಭೌತಿಕ ಅಥವಾ ಭೌಗೋಳಿಕವಾದ ಹೆಸರುಗಳಾಗಿವೆ. ಕರ್ನಾಟಕದ ಘಟ್ಟದ ಮೇಲಣ ಪ್ರದೇಶಗಳ ಸ್ಥಳನಾಮಗಳೊಂದಿಗೆ ಹೋಲಿಸಿದರೆ, ಇವುಗಳು ಮಾನವಶಾಸ್ತ್ರೀಯವಾಗಿ ಹೆಚ್ಚು ಪ್ರಾಚೀನತೆಯ ಲಕ್ಷಣವನ್ನು ಹೊಂದಿವೆ. ತುಳು ಸ್ಥಳನಾಮಗಳು, ಭೌತಿಕ ಅಂಶಗಳು (elements) ತಾವೇ ತಾವಾಗಿದ್ದ ಮತ್ತು ಜನರು ಅವುಗಳಿಗೆ ಕೇವಲ ಎರಡನೆಯವರಾಗಿದ್ದ, ಮಾನವ ಸಂಸ್ಕೃತಿಯ ಒಂದು ನಿರ್ದಿಷ್ಟ ಘಟ್ಟವನ್ನು ಪ್ರತಿನಿಧಿಸುವ ಪ್ರವೃತ್ತಿಯವಾಗಿವೆ. ಜಿಲ್ಲೆಯೊಳಗಣ ಸ್ಥಳನಾಮಗಳು ಈ ವಿಲಕ್ಷಣ ಪ್ರವೃತ್ತಿಗೆ ಇನ್ನೊಂದು ಮಗ್ಗುಲಿನಿಂದ ಕೂಡ ವಿವರಣೆ ನೀಡಬಹುದಾಗಿದೆ. ಅದೇನೆಂದರೆ – ಘಟ್ಟದ ಮೇಲಣ ಸ್ಥಳನಾಮಗಳಲ್ಲಿ ವ್ಯಕ್ತವಾಗಿರುವ ಒಂದು ಸಾಮಾನ್ಯ ಲಕ್ಷಣವೆನಿಸಿರುವ ನಿರ್ದಿಷ್ಟ ವ್ಯಕ್ತಿಗಳನ್ನು ಆರಾಧಿಸುವ ಪ್ರವೃತ್ತಿಗೆ ಭಿನ್ನವಾಗಿ ಇಲ್ಲಿ ಪ್ರಕೃತಿಯನ್ನು ಆರಾಧಿಸುವ ಸ್ವಭಾವಕ್ಕೆ ದಾರಿಮಾಡಿಕೊಡುವಷ್ಟರಮಟ್ಟಿಗೆ ಪ್ರಕೃತಿಯೊಂದಿಗಿನ ದೈನಂದಿನ ವ್ಯವಹಾರಗಳಲ್ಲಿ ಮಾನವನ ಒಳಗೊಳ್ಳುವಿಕೆಯ ಅಂಶವನ್ನು ಇದು ನಿರ್ದೇಶಿಸುತ್ತಿರುವುದು.

ಒಂದು ಪ್ರದೇಶದಲ್ಲಿ ಲಭ್ಯವಾಗುವ ಪ್ರಾಕೃತಿಕ ಸಂಪತ್ತುಗಳು ಹೆಸರಿನ ಸ್ವರೂಪವನ್ನೇ ನಿಯಂತ್ರಿಸುವುದರ ಫಲವಾಗಿ ತುಳುನಾಡಿನಲ್ಲಿ ಭೂಗೋಳಿಕ ಹೆಸರುಗಳು ವ್ಯಕ್ತ್ಯಂಶವುಳ್ಳ ಸ್ಥಳನಾಮಗಳನ್ನು ಸಂಖ್ಯೆಯಲ್ಲಿ ಮೀರಿ ನಿಂತಿವೆ. ಉಡುಪಿ ತಾಲೂಕು ಮತ್ತು ಕರ್ನಾಟಕದ ಇತರ ತಾಲೂಕಿನ ಸ್ಥಳನಾಮಗಳಲ್ಲಿರುವ ವ್ಯಕ್ತಿನಾಮಾಂಶದ ಶೇಕಡಾ ಪ್ರಮಾಣವನ್ನು ಸೂಚಿಸುವ ಮುಂದಿನ ಪಟ್ಟಿ[1] ನಮ್ಮ ಮೇಲಿನ ವಿವರಣೆಯನ್ನು ಹೆಚ್ಚು ನಿಖರಗೊಳಿಸಬಲ್ಲುದು[2] :

ಪ್ರಕೃತಿ ಮತ್ತು ಮನುಷ್ಯನ ನಡುವಣ ಈ ಅನುಬಂಧವನ್ನು ಇವೊತ್ತಿಗೂ ಗಟ್ಟಿಯಾಗಿ ಬೆಸೆದುಕೊಂಡು ಬಂದಿರುವುದು ಇಲ್ಲಿಯ ಮುಖ್ಯ ಕಸುಬಾಗಿರುವ ಬೇಸಾಯ. ಎಷ್ಟೋ ಆನುಷಂಗಿಕ ಹೆಸರುಗಳಿಗೆ – ಗಾತ್ರ, ಭಾಗ, ಅಥವಾ ಗದ್ದೆಯ ವಿಭಾಗ, ಬೆಳೆ, ಮಣ್ಣು ಮುಂತಾದುವುಗಳಿಗೆ ಸಂಬಂಧಿಸಿದ ಕ್ಷೇತ್ರನಾಮಗಳಿಗೆ –

ಬೇಸಾಯವೂ ಜೀವ ತುಂಬಿದೆ. ಸೂಕ್ಷ್ಮ ಸ್ಥಳನಾಮಶಾಸ್ತ್ರ(micro-toponymy)ದ ಅಧ್ಯಯನ ಮಾಡಹೊರಟರೆ ಈ ಜಿಲ್ಲೆಯಲ್ಲಿ ಕ್ಷೇತ್ರನಾಮ(fieldnames)ಗಳ ದೊಡ್ಡ ಪಟ್ಟಿಯನ್ನೇ ತಯಾರಿಸಬಹುದು3.

ಕ್ರ.ಸಂ.	ಘಟಕ	ಹಳ್ಳಿಗಳ ಒಟ್ಟು ಸಂಖ್ಯೆ	ವ್ಯಕ್ತ್ಯಂಶವುಳ್ಳ ಹೆಸರುಗಳ ಸಂಖ್ಯೆ	ಘಟಕದಲ್ಲಿರುವ ವ್ಯಕ್ತ್ಯಂಶವುಳ್ಳ ಹೆಸರುಗಳ ಶೇಕಡಾ ದರ
1.	ಉಡುಪಿ ತಾ. (ದ.ಕ. ಜಿಲ್ಲೆ)	115	1	0.86
2.	ಹೊನ್ನಾವರ ತಾ. (ಉ.ಕ. ಜಿಲ್ಲೆ)	93	3	3.22
3.	ದೇವನಹಳ್ಳಿ ತಾ. (ಬೆಂಗಳೂರು ಜಿಲ್ಲೆ)	280	152	54.3
4.	ಮಂಡ್ಯ ತಾ. (ಮಂಡ್ಯ ಜಿಲ್ಲೆ)	183	108	59.01
5.	ಹೊನ್ನಾಳಿ ತಾ. (ಶಿವೊಗ್ಗ ಜಿಲ್ಲೆ)	168	102	60.71

ಉಡುಪಿ ತಾಲೂಕಿನ ಹೆಚ್ಚಿನ ಹೆಸರುಗಳು ಸ್ಮರಣಾತ್ಮಕ ಹೆಸರುಗಳಾಗಿರುವುದಕ್ಕಿಂತ ವಿವರಣಾತ್ಮಕ ಇಲ್ಲವೆ ಅಧೀನತಾವಾಚಕವಾಗಿರುವುದನ್ನು ಗಮನಿಸಬಹುದು.[4] ಅತ್ಯಂತ ನಿಷ್ಕೃಷ್ಟ ಅರ್ಥದಲ್ಲಿ ಹೇಳುವುದಾದರೆ, ಅಧೀನತಾವಾಚಕಗಳೂ ಹೆಚ್ಚಾಗಿ ವಿವರಣಾತ್ಮಕ ಹೆಸರುಗಳ ಗುಂಪಿನಲ್ಲಿ ಸೇರುತ್ತವೆ. ಉದಾಹರಣೆಗೆ, ಒಬ್ಬ ವ್ಯಕ್ತಿಗೆ ಅಥವಾ ಒಂದು ನಿರ್ದಿಷ್ಟ ಜಾತಿಗೆ ಸೇರಿದ ಗದ್ದೆಗಳು ಅಥವಾ ಭೂಭಾಗಗಳನ್ನು ಆ ವ್ಯಕ್ತಿಯ ಅಂಕಿತನಾಮ (ಅಥವಾ ಜಾತಿಯ ಹೆಸರು) ವಿವರಿಸಿಬಿಡುತ್ತದೆ. ಪಾರ್ತಿಬೆಟ್ಟು, ದಾಮಡ್ಕ, ಸೇನೆರೆಬೆನ್ನಿ, ಬಟ್ರಬೈಲ್, ನಾಯ್ಕರಬೆಟ್ಟು, ಕಾರಂತರ ತೋಟ, ಮುಂತಾದುವು ಈ ಬಗೆಯ ಹೆಸರುಗಳಿಗೆ ಕೆಲವು ಉದಾಹರಣೆಗಳು.

ಜಿಲ್ಲೆಯಲ್ಲಿ ದೊರೆತ ಶಾಸನಗಳ ಆಧಾರಗಳಿಂದ ಹೇಳುವುದಾದರೆ, 'ಕಾಪು' 'ವಡ್ಡರ್ಸೆ'ಯಂಥ ಸ್ಥಳನಾಮಗಳು ಸುಮಾರು ಹನ್ನೆರಡು ಅಥವಾ ಹದಿಮೂರು ಶತಮಾನಗಳಿಂದ ರೂಪಾಂತರ ಹೊಂದದೆ ಹಾಗೇ ಉಳಿದಿವೆ. ಉಳಿದ ಕೆಲವು

ಪ್ರಾಚೀನ ಶಾಸನೋಕ್ತ ಹೆಸರುಗಳು ಕೂಡಾ–ಉದಯಪುರ, ಎಟ್ಸೇರ, ಬವಳ್ಳಿ, ಬ್ರಹ್ಮಪುರ, ಬರಕನೂರ, ಚೊಕ್ಕಪಾಡಿ, ಸಾನ್ತೌರ್–ಸ್ವಾಭಾವಿಕವಾಗಿಯೇ ತುಸು ವ್ಯತ್ಯಾಸವನ್ನು ಅನುಭವಿಸಿವೆ; ಈ ವ್ಯತ್ಯಾಸ ಕೂಡಾ ಸ್ವರೈಕ್ಯ, ಸದೃಶಾಕ್ಷರ ಲೋಪ, ಸೌಲಭ್ಯಾಕಾಂಕ್ಷೆ, ಸ್ವರಲೋಪದಂಥ ಧ್ವನಿಶಾಸ್ತ್ರೀಯ ನಿಯಮಗಳಿಗನು ಸಾರವಾಗಿಯೇ ಸಂಭವಿಸಿದೆ. ಶಾಸನಗಳು 'ಕಲ್ಲಸಂಕ' (ಕ್ರಿ.ಶ. 1394)[6]ದಂಥ ಮಾರ್ಗನಾಮಗಳ ಪ್ರಾಚೀನತೆಯನ್ನು ಕೂಡಾ ಸೂಚಿಸುತ್ತವೆ. ಇಂದಿಗೂ ಈ ಸ್ಥಳ 'ಕಲ್ಸಂಕ'–ಕಲ್ಲಿನಿಂದ ಕಟ್ಟಿದ ಸೇತುವೆ–ಎಂದೇ ಕರೆಯಲ್ಪಟ್ಟಿದೆ. 'ಸಂಕ' (ಸೇತುವೆ)ಯ ರೂಪ ಮತ್ತು ಆಕಾರದಲ್ಲಿ ವ್ಯತ್ಯಾಸವಾಗಿರಬಹುದು; ಆದರೆ ಹೆಸರು ಹಾಗೇ ಉಳಿದಿದೆ.

ಕೆಲವು ಸ್ಥಳನಾಮಗಳು–ಉದಾ : ನಾಯರ್ ಬೆಟ್ಟು, ಮರಾಠಿ ಕೇರಿ, ಬ್ಯಾರಿ ಬೈಲು, ಸ್ಯಾಬರ ಕುದ್ರು, ಫರಂಗಿ ಕುದ್ರು; ಮುಂ.–ತಾಲೂಕಿನಲ್ಲಿ ಹೊರಗಿನ ಜನಾಂಗಗಳ ಮುಕ್ತ ಚಲನೆ ಮತ್ತು ವಾಸ್ತವ್ಯವನ್ನು ದಾಖಲುಗೊಳಿಸುತ್ತದೆ. ಈ ಹೆಸರುಗಳು ಒಂದು ರೀತಿಯಲ್ಲಿ ಸ್ಮರಣಾತ್ಮಕವಾದುವು; ಹಾಗೂ, ಒಟ್ಟು ಸಮಾಜದ ಸಂಪತ್ತು ಮತ್ತು ಸಮೃದ್ಧಿಯ ಆತ್ಯಂತಿಕ ಗುರಿಯಲ್ಲಿ ಈ ಎಲ್ಲ ಭಿನ್ನ ಭಿನ್ನ ಸಂಸ್ಕೃತಿಗಳ ಸಮರಸ ಸಹಜೀವನ ಹೇಗೆ ಕೆಲಸಮಾಡಿದೆ ಎಂಬುದನ್ನು ಸೂಚಿಸುತ್ತದೆ.

ಒಂದು ನಿರ್ದಿಷ್ಟ ಪ್ರದೇಶದಲ್ಲಿ ಭಿನ್ನ ಭಿನ್ನ ಜನಾಂಗಗಳ ಚಲನವಲನ ಮತ್ತು ವಲಸೆಗಳನ್ನು ನಿರ್ಧರಿಸುವಲ್ಲಿ ಕೂಡ ಸ್ಥಳನಾಮಗಳು ಉಪಯುಕ್ತವಾಗಿವೆ. ಉದಾ.ಗೆ, 'ತೋನ್ಸೆ' ಮತ್ತು 'ಪೇತ್ರಿ' ಎಂಬ ಸ್ಥಳನಾಮಗಳು ಕ್ರಮವಾಗಿ 'ಸೈಂಟ್ ಥಾಮಸ್' ಮತ್ತು 'ಸೈಂಟ್ ಪೀಟರ್' ಎಂಬ ಕ್ರಿಶ್ಚಿಯನ್ ಧರ್ಮಗುರುಗಳಿಂದ ನಿಷ್ಪನ್ನವಾಗಿರಬಹುದೆಂದು ವಿದ್ವಾಂಸರು[7] ಊಹಿಸುತ್ತಾರೆ. ಈ ಊಹೆ ನಿಜವೆನಿಸಿದರೆ, ಈ ಸ್ಥಳನಾಮಗಳ ಪ್ರಾಚೀನತೆಯನ್ನು ಕ್ರಿಸ್ತಶಕದ ಆರಂಭದ ಶತಮಾನಗಳಿಗೆ ಕೊಂಡೊಯ್ಯಬೇಕಾಗುತ್ತದೆ. ಕರ್ನಾಟಕದ ಅತ್ಯಂತ ಪ್ರಾಚೀನ ಚರ್ಚ್‌ಗಳಲ್ಲೊಂದು ಕಲ್ಯಾಣಪುರದಲ್ಲಿ (ಮೂಡು ತೋನ್ಸೆ) ಸ್ಥಾಪಿಸಲ್ಪಟ್ಟಿರುವುದರಿಂದ, 'ತೋನ್ಸೆ' ಎಂಬ ಹೆಸರು 'ಸೈಂಟ್ ಥಾಮಸ'ರಿಂದ ನಿಷ್ಪನ್ನವಾಗಿರುವ ಸಂಭಾವ್ಯತೆ ಕುರಿತು ವಿಚಾರ ಮಾಡುವ ಹಾಗಿದೆ[8].

ಸ್ಥಳನಾಮಗಳಲ್ಲಿ ಉಲ್ಲೇಖಗೊಂಡಿರುವ ವ್ಯಕ್ತಿನಾಮಗಳ ಬಗ್ಗೆ ಹೇಳುವುದಾದರೆ, ಇವುಗಳಲ್ಲಿ ಹೆಚ್ಚಿನವು ಸಾಕಷ್ಟು ಪ್ರಾಚೀನವಾಗಿರುವುದರೊಂದಿಗೆ ಶುದ್ಧ ತುಳು ಭಾಷೆಯ ವೈಶಿಷ್ಟ್ಯವನ್ನು ವರ್ಣಿಸುವ ಬಗೆಯವಾಗಿವೆ. ಉದಾ; ಕುರುಂಬಿಲ ಗುತ್ತು, ಬಬ್ಬುಕುದ್ರು; ಇತ್ಯಾದಿ. ರಾಜಕೀಯ ಘಟನಾವಳಿ, ಸಾಮಾಜಿಕ

ಸುಧಾರಕರು, ಧಾರ್ಮಿಕ ಮುಖಂಡರು, ಚಿತ್ರನಟರಂಥ ಜನಪ್ರಿಯ ವ್ಯಕ್ತಿಗಳಿಂದ ಹೆಚ್ಚಾಗಿ ಸ್ಫೂರ್ತಿಪಡೆದು ಹುಟ್ಟಿಕೊಂಡಿರುವ ಇಂದಿನ ವ್ಯಕ್ತ್ಯಂಶವುಳ್ಳ ಸ್ಥಳನಾಮ ಗಳ ಪ್ರವೃತ್ತಿಗೆ (ಕೆಲವು ಉದಾ : ಇಂದಿರಾನಗರ, ವಿನೋಬಾನಗರ, ಮಧ್ವನಗರ, ವಿಬುಧಪ್ರಿಯನಗರ, ಲಕ್ಷ್ಮೀಂದ್ರನಗರ, ಮುಂ.) ಸಂಪೂರ್ಣ ವ್ಯತಿರಿಕ್ತವಾದ ನಾಮಕರಣದ ಮಾದರಿಯನ್ನು ಇಲ್ಲಿ ಗುರುತಿಸಬಹುದು.

ವ್ಯಕ್ತ್ಯಂಶವುಳ್ಳ ಸ್ಥಳನಾಮಗಳಲ್ಲೂ ಕೂಡಾ, ನಿರ್ದಿಷ್ಟ–ವಾರ್ಗಿಕ ವ್ಯವಸ್ಥೆ (Specific-generic arrangement) ಯಾವ ಬಗೆಯಲ್ಲಿರುತ್ತದೆ. ಎಂದರೆ– ಮೊದಲನೆಯದು (ನಿರ್ದಿಷ್ಟ ಆಕೃತಿಯು) ಹೆಚ್ಚಾಗಿ ಅಂಕಿತನಾಮವಾಗಿದ್ದು. ಎರಡ ನೆಯದು (ವಾರ್ಗಿಕ ಆಕೃತಿಯು) ಆ ವ್ಯಕ್ತಿ ನೆಲೆಸಲು ಆಯ್ಕೆಮಾಡಿದ ಹಳ್ಳಿಯ ಒಂದು ಭಾಗ ಅಥವಾ ಕ್ಷೇತ್ರವನ್ನು ನಿರ್ದೇಶಿಸುವ ಹಾಗಿರುತ್ತದೆ. ಕುಲನಾಮ ಅಥವಾ ವೃತ್ತಿನಾಮಗಳಿಂದ ನಿಷ್ಪನ್ನವಾದ ಸ್ಥಳನಾಮಗಳೂ ಕೂಡ ಈ ನಿಯಮಕ್ಕೆ ಬದ್ಧವಾಗಿವೆ. ಎರಡನೆಯದಾಗಿ, ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ಇಂಥ ಹೆಸರುಗಳು ಮಹತ್ವಪೂರ್ಣವೆನಿಸಿರುವುದು ಹೇಗೆಂದರೆ, ಇವು ಸಸ್ಯ–ಪ್ರಾಣಿ–ಬೆಳೆ– ಆಹಾರ ಪದಾರ್ಥಗಳು ಮಾತ್ರಿತರ ಪ್ರಕೃತಿಯ ಭೌತಿಕ ಅಂಶಗಳಂಥ ಪ್ರಕೃತಿ ಸಂಪತ್ತಿ ನಿಂದ ಪುಷ್ಟವಾಗಿವೆ–ಎಂಬುದು. (ಉದಾ: ತೌಡು-ತೌಡ, ಕುರುಂಬುಲ್-ಕುರುಂ ಬಿಲ ; ಅಕ್ಕಿ–ಅಕ್ಕಿ ; ಸೂರ್ಯ-ಸೂರ್ಯ ; ಮುಂ.)[9]

ಉಡುಪಿ ತಾಲೂಕಿನ ಸೀಮೆ ತುಳು ಭಾಷೆಯನ್ನಾಡುವ ಪ್ರದೇಶದಾಚೆಗೂ ಚಾಚಿಕೊಂಡಿರುವುದರಿಂದ, ಇಲ್ಲಿ ನಾವು ಕನ್ನಡ ಹೆಸರುಗಳನ್ನೂ ಎದುರುಗೊಳ್ಳು ತ್ತೇವೆ. ಹಾಗಾಗಿ, ಭಾಷೆಯಲ್ಲಿನ ವ್ಯತ್ಯಾಸವು ಸ್ಥಳನಾಮಗಳ ರೂಪದ ಮೇಲೆ ಪ್ರಭಾವ ಬೀರುತ್ತದೆ. ಇದಕ್ಕೊಂದು ನಿದರ್ಶನ ಕೊಡುವುದಾದರೆ, ತುಳುವಿನ-ನ್ಜ -ಕನ್ನಡದಲ್ಲಿ-ನ್ದ-ಎಂದಾಗುತ್ತದೆ (ಉದಾ : ಕುಂಜ-ಕುಂದ) ;–ಜೆ ಎಂಬುದು-ಸೆ ಎಂದಾಗುತ್ತವೆ (ಉದಾ : ಅಜೆ-ಅಸೆ). ಈ ವ್ಯತ್ಯಾಸಗಳು ಕೂಡಾ ಧ್ವನಿಶಾಸ್ತ್ರದ ನಿಯಮಗಳಿಂದ ನಿಯಂತ್ರಿತವಾಗಿಲ್ಲದಿಲ್ಲ[10].

ಬಹುತೇಕ ಸ್ಥಳನಾಮಗಳು ಎರಡು ಆಕೃತಿಮಗಳನ್ನು ಒಳಗೊಂಡಿರುವುದು ಸಾಮಾನ್ಯವಾದರೂ, ಏಕೈಕ ಆಕೃತಿಮವುಳ್ಳ ಸ್ಥಳನಾಮಗಳೂ ದುರ್ಲಭವೇನಲ್ಲ. ಏಕೈಕ ಆಕೃತಿಮವುಳ್ಳ ಸ್ಥಳನಾಮಗಳಿಗೆ ಕೆಲವು ನಿದರ್ಶನಗಳೆಂದರೆ-ನೂಜಿ, ಮದಗ, ಕಲ್ಯ, ಮುಗ್ಗೇರಿ, ಕೋಮೆ, ಕೋಡು, ಪದವು, ಬಜೆ, ಮಂಚಿ, ಕಂಪ, ಪಟ್ಲ, ಮಟ್ಟು, ಪೊಲ್ಯ, ಬರಿಕೆ, ದೇವಸ್ಯ, ಹೂಡೆ, ಗುಡ್ಡೆ, ಗುಜ್ಜ, ಕಂದೇಕಿ, ಸೂಡ, ನಾಡು, ಕೇರಿ ; ಮುಂ.[11]

ಎರಡು ಆಕೃತಿಮಗಳನ್ನು ಹೊಂದಿದ ಸ್ಥಳನಾಮಗಳನ್ನು ಎರಡು ವರ್ಗವನ್ನಾಗಿ ವಿಂಗಡಿಸಬಹುದು:

(i) ಮೊದಲನೆಯದು ಸ್ವತಂತ್ರ ಆಕೃತಿಮವಾಗಿದ್ದು, ಎರಡನೆಯದು ಏಕಾಕ್ಷರದ ಆಕೃತಿಮವಾಗಿರುತ್ತದೆ; ಇದನ್ನು ಪ್ರತ್ಯಯವೆಂದೂ ತೆಗೆದುಕೊಳ್ಳಬಹುದು. ಉದಾ : ಸೇರ್ಗ್ಗಿ, ಪಳಮೆ, ಅಡ್ಪು, ಬೊಳ್ಜೆ, ಕೆರುಮು, ಪರೀಕ, ಮುಡಂಬು ; ಮುಂ.

(ii) ಎರಡು ಸ್ವತಂತ್ರ ಆಕೃತಿಮಗಳನ್ನೊಳಗೊಂಡ ಸ್ಥಳನಾಮಗಳು. ಉದಾ : ಕೊರ್ಂಗಿಲ, ಅಣ್ಣಾಲು, ಕಬೆಯಾಡಿ, ಎರ್ಮಾಳ, ಕೊಜಂಬೈಲ್, ಪುತ್ತೂರು. ಗುಂಡಿಬೈಲ್, ಇನ್ನಂಜೆ, ಮೊೖಲಿಕೇರಿ, ಬೇಂಟಡ್ಕ ; ಮುಂ.

ಎರಡಕ್ಕಿಂತ ಹೆಚ್ಚು ಆಕೃತಿಮಗಳುಳ್ಳ ಸ್ಥಳನಾಮಗಳೂ ಇಲ್ಲದಿಲ್ಲ ; ಆದರೆ ಅವುಗಳ ಸಂಖ್ಯೆ ವಿರಲವಾಗಿದೆ. ಉದಾ : ಹೊಳೆಕಟ್ಟಬೈಲ್, ಉಳಿಯಾರಗೋಳಿ, ಪಿಲಿ ಪರೆಂಗಿ ಕುದ್ರು, ಬ್ಯಾರಿಕೆರಿಬೆಟ್ಟು, ಹಾದಿಕೆರೆ ಬೆಟ್ಟು, ಪೆರ್ದೂರ ಪಳಜೆ; ಇತ್ಯಾದಿ.

ಪೆಚ್ಚಿನ ಸಂದರ್ಭಗಳಲ್ಲಿ ಸ್ಥಳನಾಮ ಸಮಸ್ತಪದಗಳ ಸಂಧಿಸ್ಥಾನದಲ್ಲಿರುವ ಪ್ರತ್ಯಯಗಳು ಲೋಪಗೊಳ್ಳುತ್ತವೆಯಾದರೂ, ಕೆಲವು ಸ್ಥಳನಾಮಗಳು ಅವುಗಳನ್ನು ಉಳಿಸಿಕೊಂಡಿವೆ. ಸಂಧಿಸ್ಥಾನದಲ್ಲಿ ಉಳಿದುಬಿಡುವ ಇಂಥ ಪ್ರತ್ಯಯಗಳು ನಿರ್ದಿಷ್ಟ ಆಕೃತಿಮದ ಅರ್ಥವನ್ನು ಪತ್ತೆಹಚ್ಚುವುದರಲ್ಲಿ ಅತ್ಯಂತ ಉಪಯುಕ್ತವಾಗಿರುವುದನ್ನು ಗಮನಿಸಲಾಗಿದೆ.[12] ಕೆಲವು ಸಂದರ್ಭಗಳಲ್ಲಿ, ಶಾಸನಗಳಲ್ಲಿ ಉಕ್ತವಾಗಿರುವ ಸ್ಥಳನಾಮಗಳ ಪ್ರಾಚೀನರೂಪಗಳು ಸಂಧಿಸ್ಥಾನದಲ್ಲಿ ಈ ಪ್ರತ್ಯಯಗಳನ್ನು ಒಳಗೊಂಡಿರುವುದಿದೆ. ಉದಾ. ಗೆ, 1394ರ ಶಾಸನವೊಂದರಲ್ಲಿ[13] 'ಕುಂಜಬೆಟ್ಟಿನ ಪ್ರಾಚೀನ ರೂಪವಾಗಿ 'ಕುಂಜತ್ತಬೆಟ್ಟ'ವನ್ನು ಉಲ್ಲೇಖಿಸಲಾಗಿದೆ. ಸಂಧಿಸ್ಥಾನದಲ್ಲಿ ಪ್ರತ್ಯಯಗಳನ್ನು ಉಳಿಸಿಕೊಂಡಿರುವ ಇನ್ನೂ ಕೆಲವು ಸ್ಥಳನಾಮಗಳೆಂದರೆ – ಕಂಚಿನಡ್ಕ, ಕರಂದಾಡಿ, ಕೊಪ್ಪದ ಕರಿಯ, ಸ್ಯಾಬರಕಟ್ಟೆ, ಕಾಂತನಬೆಟ್ಟು, ಸೇಸೆರೆ ಬೆಟ್ಟು, ಬರಕನೂರು (?) ; ಇವೇ ಮುಂತಾದುವು.

ಕೆಳಗೆ ಕೊಟ್ಟ ಪಟ್ಟಿ ಸ್ಥಳನಾಮಗಳಲ್ಲಾಗಿರುವ ಮುಖ್ಯ ಧ್ವನಿ ಮತ್ತು ರೂಪ ವ್ಯತ್ಯಾಸಗಳ ಹಕ್ಕಿನೋಟವನ್ನು ಒದಗಿಸುತ್ತದೆ :[14]

(i) ಲೋಪ : ಪೆರ್ + ಊರು (ಪೇರೂರು) ; ಪಾದೆ + ಬೊಟ್ಟು (ಪಾದೊಟ್ಟು) ; ಕುಂಜ + ಬೊಟ್ಟು (ಕುಂಜೊಟ್ಟು)

(ii) ಆಗಮ : ಕೋಡು + ಊರು (ಕೊಡವೂರು) ; ಕುತ್ + ಅರ್ (ಕುತ್ಯಾರ್)

(iii) ಸ್ವರೈಕ್ಯ (assimilation) : ಹೊಸ + ಊರು (ಹೊಸೂರು) ; ಮಾಣಿ + ಊರು (ಮಣೂರು) ; ಅಣೆ + ಅಲ್ (ಅಣ್ಣಾಲು)

(iv) ಆದಿಸ್ವರಲೋಪ : ಅದಮಾರ್ (ದಮ್ಮಾರ್), ಅಣೆಜಾರ್ (ಣೇಜಾರ) ಅಲಂಕಾರ್ (ಲಂಕಾರ್)

(v) ದ್ವಿರುಕ್ತಿ : ಕೋಡು + ಬೆಟ್ಟು (ಕೊಡಿಬೆಟ್ಟು) ; ಪೆರ್ + ಅಡೆ (ಪೆರಡೆ) ; ತುಕ್ + ಅಡೆ (ತುಕ್ಕಡೆ)

(vi) ಸೌಲಭ್ಯಾಕಾಂಕ್ಷೆ : ಹನೆಯಹಳ್ಳಿ (ಹನೆಹಳ್ಳಿ) ; ತಾರ್ + ಬೈಲ್ (ತಬೈಲ್) ; ಕುತ್ತು + ಪಾಡಿ (ಕುತ್ಪಾಡಿ)

(vii) ಪರಿಹಾರಾತ್ಮಕ ದೀರ್ಘೀಕರಣ : ಹೊಸ ಹೋಳಲು (ಹೊಸಾಳ) ; ಶಾಸ್ತ + ಕಾನ (ಶಾಸ್ತಾನ)

(vii) ತಾಲವ್ಯೀಕರಣ : ಕಂಬುಕಲ್ಲು (ಜಂಬುಕಲ್ಲು) ; ಸಗುರಿ (ಜಗುರಿ)

(ix) ಸ್ವರ ಪ್ರತಿನಿಧಾನ (ಮುಖ್ಯವಾಗಿ ಎ > ಒ): ಬೆಳ್ಜ-ಬೊಳ್ಜ ; ಬೆಳ್ಳಿ-ಬೊಳ್ಳಿ

ಅತ್ಯಂತ ಪ್ರಾಚೀನ ವಾರ್ಗಿಕ ಆಕೃತಿಮಗಳಲ್ಲೊಂದೆನಿಸಿದ -'ಪುರ'ವು -'ಆವರ'ವಾಗಿಬಿಡುತ್ತದೆ ; ಈ ಧ್ವನಿವ್ಯತ್ಯಾಸವು ಸ್ಥಳನಾಮ ಸಮಸ್ತಪದಗಳ ಸಂಧಿ ಸ್ಥಾನದಲ್ಲಿ ನಡೆಯುವ ಧ್ವನಿಶಾಸ್ತ್ರೀಯ ವ್ಯತ್ಯಾಸ ಪ್ರಕ್ರಿಯೆಯ ನಿಯಮಗಳಿಗನು ಸಾರವಾಗಿಯೇ ನಡೆಯುತ್ತದೆ.[15] ಉದಾ. ಗೆ, ಉದಯಪುರ (ಕ್ರಿ.ಶ. 8ನೇ ಶ.) > ಉದಿಯಾವರ ; ಬ್ರಹ್ಮಪುರ (8ನೇ ಶ.) > ಬ್ರಹ್ಮಾವರ ಆಗಿರುವುದಕ್ಕೆ ಸ್ಥಳೀಯ ಶಾಸನಗಳಲ್ಲಿ ಆಧಾರವೊದಗುತ್ತದೆ.

ಸ್ಥಳನಾಮಗಳ ಅರ್ಥವಿಜ್ಞಾನಕ್ಕೂ ಶಾಸನಗಳು ಸ್ವಲ್ಪಮಟ್ಟಿಗಾದರೂ ಕೊಡುಗೆ ಸಲ್ಲಿಸಿವೆ. ಉದಾ. ಗೆ, ಕ್ರಿ.ಶ. 1366ರ ಶಾಸನವೊಂದು[16] 'ಪುತ್ತೂರಿ'ನ ವ್ಯುತ್ಪತ್ತಿಯನ್ನು 'ಹೊಸಊರು' ಎಂಬುದಾಗಿ ನೀಡಿರುವುದು ಹಾಗೂ ಇನ್ನೊಂದು ಶಾಸನ[17] 'ಕೊಡವೂರ'ನ್ನು 'ಕೊಂಕಊರು' ಎಂಬುದಾಗಿ ವ್ಯಾಖ್ಯಾನಿಸಿರುವುದು ಅತ್ಯಂತ ಸ್ವಾರಸ್ಯಕರವಾದ ಅಂಶವಾಗಿದೆ. ಸ್ಥಳನಾಮಗಳನ್ನು ಪೌರಾಣಿಕ ದೃಷ್ಟಿ ಕೋನದಿಂದ ನಿಷ್ಪನ್ನಗೊಳಿಸುವ ಪ್ರವೃತ್ತಿ ನಮ್ಮ ಜನರಲ್ಲಿ ಸಾರ್ವತ್ರಿಕವಾಗಿರುವಾಗ ಇಂಥ ಸನ್ನಿವೇಶಗಳು ತೀರಾ ವಿಶಿಷ್ಟ ಹಾಗೂ ಅನನ್ಯ ಎನ್ನಬೇಕಾಗುತ್ತದೆ.

ಅಡಿ ಟಿಪ್ಪಣಿಗಳು

1. ಈ ಪಟ್ಟಿಯನ್ನು ತಯಾರಿಸುವಾಗ ಊರಹೆಸರುಗಳನ್ನು (village names) ಮಾತ್ರ ಗಣನೆಗೆ ತೆಗೆದುಕೊಂಡಿದೆಯೇ ವಿನಾ ಕ್ಷೇತ್ರನಾಮಗಳನ್ನಲ್ಲ.

2. ಈ ಹೆಸರುಗಳ ವಿವರವನ್ನು ಈ ಗ್ರಂಥದಿಂದ ಪಡೆದಿದ್ದೇನೆ : List of villages in the Mysore state, 1969, ಪ್ರ : ಮೈಸೂರು ಸರಕಾರ, ಬೆಂಗಳೂರು.

3. ಮಧ್ಯಯುಗದಲ್ಲಿ ಜನಪ್ರಿಯಗೊಂಡಿದ್ದ ಊಳಿಗಮಾನ್ಯವ್ಯವಸ್ಥೆಯ ಧನಿಗಳ ವಸತಿಗಳನ್ನು ಸೂಚಿಸುತ್ತಿದ್ದ ಸಾಂಸ್ಕೃತಿಕ ಸ್ಥಳನಾಮಗಳು ಕೂಡಾ (ಉದಾ : ಗುತ್ತು, ಬರಿಕೆ, ಪರಾರಿ, ಮುಂ.)ಒಂದು ರೀತಿಯಲ್ಲಿ ಕೃಷಿಯ ಉದ್ಯಮದಿಂದಲೇ ಜನ್ಮತಳೆದವು ಎನ್ನಬಹುದು. ಏಕೆಂದರೆ, ಆ ಕಾಲದ ಭೂಮಾಲೀಕರು, ತಮ್ಮ ಸ್ವಾಧೀನಲ್ಲಿದ್ದ ಭೂಮಿ-ಕೃಷಿ ಭೂಮಿ-ಯ ಪ್ರಮಾಣದ ಬಲದಿಂದಾಗಿಯೇ ಇಡಿಯ ಸಮಾಜದ ಮೇಲೆ ತಮ್ಮ ಅಧಿಕಾರ ಹಾಗೂ ವರ್ಚಸ್ಸನ್ನು ಬೀರುವುದು ಸಾಧ್ಯವಾಗಿತ್ತು.

4. ತುಳು ಸ್ಥಳನಾಮಗಳ ಪಟ್ಟಿಯ ಮೇಲೆ ಕಣ್ಣು ಹಾಯಿಸಿದರೂ ಸಾಕು, ಇಲ್ಲಿನ ಸ್ಥಳನಾಮಗಳಲ್ಲಿ ಸ್ಮರಣಾತ್ಮಕ ಉದ್ದೇಶ ಹೆಚ್ಚುಕಮ್ಮಿ ಗೈರುಹಾಜರಾಗಿರುವುದು, ಹಾಗೂ, ಅದಕ್ಕೆ ಪ್ರತಿಯಾಗಿ ವಿವರಣಾತ್ಮಕ ಹಾಗೂ ಭೂವಾಚಕ ಅಂಶಗಳು ಸಂಪನ್ನವಾಗಿರುವುದನ್ನು ಗುರುತಿಸಬಹುದು ; ಮತ್ತು, ಹೊರಗಿನಿಂದ ಬರುವ ಸಂದರ್ಶಕರಿಗೆ ಇಲ್ಲಿಯ ಹೆಸರುಗಳಲ್ಲಿ ವೈವಿಧ್ಯದ ದೃಷ್ಟಿಯೇ ಕಾಣೆಯಾಗಿರುವುದರಿಂದ ಏಕತಾನತೆಯ ಭಾವನೆ ಆವರಿಸಬಹುದು. ಅತ್ಯಂತ ಸ್ವಾರಸ್ಯಕರವೂ ಅಷ್ಟೇ ಮೂಲಭೂತವೂ ಆದ ಈ ಅಂಶವು ಮಾನವಶಾಸ್ತ್ರಜ್ಞರ ವಿಶೇಷ ಗಮನವನ್ನು ಬೇಡುತ್ತದೆ.

5. ನೋಡಿ : ತುಳುನಾಡಿನ ಶಾಶನಗಳು (ಸಂ : ಕೆ.ವಿ. ರಮೇಶ್/ಎಂ. ಜೆ. ಶರ್ಮ), 1978, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ : ಮತ್ತು ಬೆಳ್ಮಣ್ಣು ತಾಮ್ರ ಶಾಸನ, 1973, ಪ್ರ : ಡಾ। ಪಿ. ಗುರುರಾಜ ಭಟ್ಟ.

6. South indian inscriptions series, Vol. III No. 299.

7. Bhatt, Dr. P. Gururaja : Studies in Tuluva history and culture, 1974. udupi (Preview, pp.xx-xxI and footnote no. 22)

8. Bhatt, Dr. P. Gururaja : Antiquities of south Kanara, 1969, udupi, P. 20 and 24.

9. ಪ್ರಾಚೀನ ಮಾನವನು ಇಂದ್ರಿಯಗೋಚರವಾದ ದೃಶ್ಯಗಳ ಮೂರ್ತ ಪರಿಭಾಷೆಯಲ್ಲಷ್ಟೇ ಚಿಂತನೆ ನಡೆಸುತ್ತಿದ್ದನೆಂಬ ಸ್ವಾಭಾವಿಕ ಅಂಶವು ಸ್ಥಳನಾಮಗಳಲ್ಲಿ ಅತ್ಯಂತ ಗಾಢವಾಗಿ ಅಚ್ಚೊತ್ತಿದೆ.

10. ವಿವರಕ್ಕೆ ಪರಿಶೀಲಿಸಿ : ರಘುಪತಿ ಕೆಮ್ತೂರು : ತುಳುನಾಡಿನ ಸ್ಥಳನಾಮಾಧ್ಯಯನ, 1980, ಪಿಎಚ್.ಡಿ. ಪ್ರಬಂಧ (ಅಪ್ರ.), ಪು. 116-119 ; 383-384

11. ಒಂದೇ ಆಕೃತಿಮವುಳ್ಳ ಸ್ಥಳನಾಮಗಳು ನಿರ್ದಿಷ್ಟ-ವಾರ್ಗಿಕ ವ್ಯವಸ್ಥೆಯ ಸ್ಥಳನಾಮಗಳಿಗಿಂತ ಹೆಚ್ಚು ಪ್ರಾಚೀನವಾಗಿರುವುದೆಂದು ಪರಿಗಣಿಸಲು ಎಲ್ಲ ಕಾರಣಗಳಿವೆ. ನೋಡಿ: ರಘುಪತಿ ಕೆಮ್ತೂರು, 1980, ಪು. 31, ಹಾಗೂ, Tyagaraju, S : A study of Telugu placanames, journal of the Andhra Historical Research Society, xiv pt. I, 1943.

12. ವಿವರಕ್ಕೆ ಪರಿಶೀಲಿಸಿ : ರಘುಪತಿ ಕೆಮ್ತೂರು, 1980, ಪು. 33 ; ಪು. 398-399.

13. S.I.I. Vol. VII No. 299 (ಹೋಲಿಸಿ : No. 303)

14. ಈ ವಿಷಯದ ವಿವರವಾದ ಅಧ್ಯಯನಕ್ಕೆ ನೋಡಿ : Raghupathi Kemtur, phonological and morphological Findings in tulu place-names, Quartely Journal of the Mythic Society, Vol .74. No. 1.
15. ರಘುಪತಿ ಕೆಮ್ತೂರು, 1980, ಪು. 386-387 ; ಹಾಗೂ, ಡಾ. ಎಂ. ಚಿದಾನಂದ ಮೂರ್ತಿ. 'ವರ' ಅಥವಾ 'ಅವರ' ಎಂದು ಕೊನೆಯಾಗುವ ಊರ ಹೆಸರುಗಳು, ಸಾಧನೆ, 7-1.
16. S. I. I. Vol. VII, No. 306.
17. ಅದೇ ನಂ. 303.

[* ನವದೆಹಲಿಯ ಐ. ಸಿ. ಎಚ್. ಆರ್. ನವರು ಕೊಡಮಾಡಿದ ಅಧ್ಯಯನಾನುದಾನವನ್ನು ಬಳಸಿಕೊಂಡು ನಾನು ತಯಾರಿಸಿದ Toponymy of udupi Taluk in South Kanara (1981-83) ಎಂಬ ಪಿಎಚ್. ಡಿ. ಯೋತ್ತರ ಪ್ರಬಂಧದ ಒಂದು ಅಧ್ಯಾಯದ ಅನುವಾದ, ಈ ಲೇಖನ.]

"ಎ" ಪ್ರತ್ಯಯ

ಉಪ್ಪಂಗಳ ರಾಮಭಟ್ಟ

ಕೇಶಿರಾಜನು ಹೇಳಿದ ಸ್ವರ, ವರ್ಗೀಯ, ಅವರ್ಗೀಯ, ಯೋಗವಾಹ ಮತ್ತು ದೇಶೀಯ ಎಂಬ ಪಂಚವಿಧ ಶುದ್ಧಗೆಗಳಲ್ಲಿ[1] ಎ, ಏ ಗಳು ದೇಶೀಯಾಕ್ಷರಗಳಲ್ಲಿ ಸೇರುತ್ತವೆ. ಎ ಏ ಒ ಓ ಗಳು ಸ್ವಾಭಾವಿಕವಾಗಿ ಕನ್ನಡದಲ್ಲಿವೆ, ಇವು ಸವರ್ಣಗಳೂ ಆಗುತ್ತವೆ[2] ಎಂದು ಅವನು ಸರಿಯಾಗಿಯೇ ಹೇಳಿದ್ದಾನೆ. ಸಂಸ್ಕೃತದಲ್ಲಿ ಹ್ರಸ್ವಾಕ್ಷರಗಳಾದ ಎ ಒ ಗಳಿಲ್ಲ, ಇವುಗಳ ದೀರ್ಘಗಳು ಮಾತ್ರ ಇವೆ. ಇವು ಅದರಲ್ಲಿ ಸಂಧ್ಯಕ್ಷರ (Diphthong) ಗಳೆನಿಸಿವೆ.—ಅ + ಇ = ಏ, ಅ + ಉ = ಓ, ಆದರೆ ಇವು ಕನ್ನಡದಲ್ಲಿ ಸಂಧ್ಯಕ್ಷರಗಳಲ್ಲ, ಸಹಜ ಸ್ವರಗಳು ಎಂದು ಪ್ರತಿಪಾದಿಸಲಾಗಿದೆ.[3]

ಎ ಏ ಎಂಬ ವರ್ಣಗಳು ಕನ್ನಡದಲ್ಲಿ ಮಹತ್ವಪೂರ್ಣವಾಗಿ ಬಳಕೆಯಾಗುತ್ತವೆ. ಹೆಚ್ಚಾಗಿ ಇವು ಶಬ್ದಗಳ ಕೊನೆಯಲ್ಲಿ ಸೇರಿ ಅರ್ಥವಿಶೇಷಕ್ಕೆ ಸಹಾಯಕಗಳಾಗುತ್ತವೆ. ಇವು ಎಲ್ಲೆಲ್ಲಿ ಹೇಗೆ ಬಳಕೆಯಾಗುತ್ತವೆಂಬುದನ್ನು ಪ್ರಾಚೀನ ವ್ಯಾಕರಣಗಳ ಹಿನ್ನೆಲೆಯಲ್ಲಿ ಚರ್ಚಿಸಬಹುದು.

ಸಪ್ತಮ್ಯರ್ಥದಲ್ಲಿ 'ಎ'[4] ಉಕಾರಾಂತ ದಿಗ್ವಾಚಕಕ್ಕೆ ಸಪ್ತಮಿಯಲ್ಲಿ 'ಎ' ಕಾರ ಬರುತ್ತದೆಂದುಶಬ್ದಮಣಿದರ್ಪಣದಲ್ಲಿ. ಹೀಗೆ ಉದಾಹರಿಸಿದೆ–ಒಳಗು–ಒಳಗೆ, ಪೊಱಗು – ಪೊಱಗೆ, ಪೆಗಱು—ಪೆಱಗು, ಮೇಗು—ಮೇಗೆ, ಕೆಳಗು—ಕೆಳಗೆ. 'ನಡು' ಎಂಬುದಕ್ಕೆ ವಕಾರಾಗಮವೂ ಆಗಿ 'ನಡುವೆ' ಎಂದಾಯಿತು. ಇದೇ ವಿಚಾರವನ್ನು ಕರ್ಣಾಟಕ ಭಾಷಾಭೂಷಣದ 'ಉತ ಏತೆ'[5] ಎಂಬ ಸೂತ್ರದಲ್ಲಿ ಹೇಳಿದೆ.

---

1. ಶಬ್ದಮಣಿದರ್ಪಣ—ಸಂ. ಡಿ. ಎಲ್. ಎನ್., ಸೂತ್ರ 41.
2. ಅದೇ-ಸೂತ್ರ 18.
3. ಸಂಧ್ಯಕ್ಷರಗಳು – ಪಿ. ರಾಮಭಟ್ಟ, 'ಪ್ರದೀಪಿಕೆ' – ಕೆ. ವೆಂಕಟರಾಯಾಚಾರ್ಯರ ಸಂಭಾವನ ಗ್ರಂಥ, 1979.
   'Diphthongs' - P. Rama Bhat, The journal of the Institute of Indian Studies, Volume 2, 1979.
4. ಶಬ್ದಮಣಿದರ್ಪಣ - ಸಂ. ಡಿ. ಎಲ್. ಎನ್., ಸೂತ್ರ 129.
5. ಕರ್ಣಾಟಕ ಭಾಷಾಭೂಷಣ – ಸಂ. ಆರ್. ನರಸಿಂಹಾಚಾರ್. ಸೂ. 59. ಪುಟ 28.

ಕರ್ಣಾಟಕ ಶಬ್ದಾನುಶಾಸನದ ‘ಏಶ್ಚೋತಃ’[6] ಎಂಬ ಸೂತ್ರದಲ್ಲಿ ಇದನ್ನು ಪೇಳಿ ಒಳಗು ಶಬ್ದವನ್ನು ಮಾತ್ರ ಉದಾಹರಿಸಿದೆ. ಎ ಕಾರವು ಪ್ರಥಮಾ ದ್ವಿತೀಯಾ ಸಪ್ತಮೀ ವಿಭಕ್ತಿಗಳಲ್ಲೂ ಬರುತ್ತದೆಂದು ವೃತ್ತಿಯಲ್ಲಿ ಹೇಳಿದೆ.

ಒಳಗು, ಪೊಱಗು ಮೊದಲಾದವಲ್ಲಿ ಒಳ+ಅಗು, ಪೊಱ+ಅಗು ಎಂಬಂತೆ ಎರಡು ಶಬ್ದಗಳಿವೆ. ‘ಅಗ’ ಎಂಬ ಸ್ಥಳವಾಚಕ ಒಳ, ಪೊಱ ಮೊದಲಾದವಕ್ಕೆ ಸೇರಿ ಮೇಲೆ ಹೇಳಿದಂತೆ ರೂಪಗಳಾಗಿವೆ. ಒಳ್, ಪೊಱ, ಪೆಱ, ಕೆಳ ಮೂಲ ಶಬ್ದಗಳು. ಇವಕ್ಕೆ ಸ್ಥಳವಾಚಕ ‘ಅಗ’ ಸೇರಿದೆ. ಇದು ಅಗೆ ಆಗೆ ಎಂದು ಗ್ರಾಮ್ಯ ಕನ್ನಡದಲ್ಲಿ ಸಪ್ತಮ್ಯರ್ಥದಲ್ಲಿ ಪ್ರಯೋಗವಾಗುತ್ತದೆ. ಉದಾ – ಮನೆಯಾಗೆ, ಊರಾಗೆ[7] ಇತ್ಯಾದಿ. ಮನೆಯಾಗ, ಊರಾಗ, ಎಂಬಂತೆಯೂ ಆಗುವುದುಂಟು. ಸಪ್ತಮೀ ಪ್ರತ್ಯಯಗಳು ಅಲ್ಲಿ, ಒಳ್ ಎಂಬಂತೆ ‘ಅಗ’ವೂ ಸ್ಥಳವಾಚಕ. ತಮಿಳು ಮಲಯಾಳಗಳಲ್ಲಿ ಇಂದಿಗೂ ‘ಅಗಂ’ ಸ್ಥಳವಾಚಕ. ಆದ್ದರಿಂದ ಒಳಗೆ, ಪೊಱಗೆ ಒಂದು ರೀತಿಯಲ್ಲಿ ದ್ವಿರುಕ್ತಿ ಶಬ್ದಗಳು. ಹಳಗನ್ನಡ ರೂಪಗಳನ್ನುಳಿಸಿ ಕೊಂಡಿರುವ ಹವ್ಯಕ ಕನ್ನಡದಲ್ಲಿ ಇಂದಿಗೂ ಒಳಗೆ, ಹೊರಗೆ, ಕೆಳಗೆ – ಒಳ, ಹೊರ, ಕೆಳ ಎಂಬಂತೆ ‘ಅಗ’ ರಹಿತವಾಗಿಯೇ ಇವೆ. ಇದೇ ರೀತಿ ಮುಂದೆ, ಹಿಂದೆ, ಮೇಲೆ, ಮೊದಲಾದ ಸ್ಥಳವಾಚಕಗಳೂ ಎ ಕಾರಾಂತವಾಗಿ ಸಪ್ತಮ್ಯರ್ಥವನ್ನೇ ಕೊಡುತ್ತವೆ.[8]

ಸತಿಸಪ್ತಮ್ಯರ್ಥದ ‘ಎ’ ಕಾರದ ಸ್ಥಾನದಲ್ಲಿ ಇನೆಗಂ, ಉದುಂ, ಅನ್ನಂ, ಅನ್ನೆಗಂ, ಇನಂ, ಅಲೊಡಂ ಎಂಬವುಗಳೂ ಬರುತ್ತವೆಂದು[9] ಹೇಳುವಲ್ಲಿ ‘ಎ’ ಕಾರಕ್ಕೆ ಸಪ್ತಮ್ಯರ್ಥವಿದೆಯೆಂದು ಖಚಿತವಾಗುತ್ತದೆ. ಬರಲೊಡನೆ, ಅನ್ನೆವರಂ, ವಾರ್ಧಿ ಮುಟ್ಟಿ ಮುಂತಾದೆಡೆಯಲ್ಲೂ ಸತಿಸಪ್ತಮ್ಯರ್ಥವೇ ಎಕಾರದಿಂದ ಸಿದ್ಧಿಸುತ್ತದೆ. ಪಕ್ಷಾಂತರವನ್ನು ನಿರವಿಸುವ ‘ಎ’ಕಾರ–[10] ಉದಾ-ನೋಟಿಶ್ಬಡವಳೆ ಕಿರಿಯಳ್ ಸತಿ ಸಪ್ತಮಿಯ ಭಾವವನ್ನೇ ಹೊಂದಿದೆ. ಭಾವಲಕ್ಷಣವಿರುವಲ್ಲಿ (ಸತಿಸಪ್ತಮಿ) ‘ಎ’ ಕಾರ ಬರುತ್ತದೆಂದು ಅನುಶಾಸನಕಾರನೂ ಹೇಳುತ್ತಾನೆ.[11] ಇವುಗಳನ್ನೆಲ್ಲಾ ಪರಿಭಾವಿಸಿದರೆ ಪದಾಂತ್ಯದಲ್ಲಿ ಬರುವ ಎಕಾರ ಪ್ರಧಾನವಾಗಿ ಸಪ್ತಮ್ಯರ್ಥವನ್ನೇ

---

6. ಕರ್ಣಾಟಕ ಶಬ್ದಾನುಶಾಸನ - ಸಂ. ಲೂಯಿರ್ರೈಸ್ 1890, ಸೂ. 281 ಪುಟ 143
7. ಸಪ್ತಮೀ ವಿಭಕ್ತಿ – ಪ್ರೊ. ಎಂ. ಮರಿಯಪ್ಪ ಭಟ್ಟ, ಪ್ರಬುದ್ಧ ಕರ್ಣಾಟಕ, 29-1-1947.
8. ಶ. ದ. ಸೂ. 130.
9. ಶಬ್ದಮಣಿದರ್ಪಣ ಸೂ. 257.
10. ಶಬ್ದಮಣಿದರ್ಪಣ ಸೂ. 261 ಪುಟ. 252.
11. ಕ. ಶ. ಶಾ. ಸೂ. 588, ಪುಟ. 264.

ಸೂಚಿಸುತ್ತದೆನ್ನಬಹುದು.[12] ಮಾಡೆಪಟ್ಟಂ (ಮಾಡಲ್ಪಟ್ಟ) ಎಂಬಲ್ಲೂ 'ಎ' ಕಾರ ಸತಿಸಪ್ತಮ್ಯರ್ಥಕ.

ಹವ್ಯಕ ಕನ್ನಡದಲ್ಲೂ 'ಎ' ಸಪ್ತಮ್ಯರ್ಥದಲ್ಲಿ ಬಳಕೆಯಾಗುತ್ತದೆ. ಉದಾ- ಒಂದು ದಿಕ್ಕೆ[13] (ಒಂದು ದಿಕ್ಕಿನಲ್ಲಿ), ಅದೇ ರೀತಿ ಎನ್ನ ಹತ್ತರೆ (ನನ್ನ ಹತ್ತಿರದಲ್ಲಿ) ಮೇಗೆ (ಮೇಲೆ) ಇತ್ಯಾದಿ. ಕಾಲ, ಸ್ಥಳ, ದಿಗ್ವಾಚಕಗಳು ಹೆಚ್ಚಾಗಿ ಸಪ್ತಮ್ಯರ್ಥಕಗಳಾಗಿವೆ-ಅಂದು, ಇಂದು ; ಅಲ್ಲಿ, ಇಲ್ಲಿ ; ಮೂಡಲ್, ತೆಂಕಲ್.

'ಎ' ಕಾರತೃತೀಯಾರ್ಥದಲ್ಲೂ ಬರುತ್ತದೆಂದು ದರ್ಪಣ[13], ಅನುಶಾಸನ[14], ಭಾಷಾಭೂಷಣಗಳಲ್ಲಿ[15] ಹೇಳಿದೆ. "ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ" ಎಂದು ಭೂಷಣಕಾರನು ಕೊಟ್ಟ ಉದಾಹರಣೆಯನ್ನೇ ದರ್ಪಣಕಾರನೂ ಕೊಟ್ಟಿದ್ದಾನೆ. ಅನುಶಾಸನದ ವೃತ್ತಿಯಲ್ಲಿ ಅಕಾರಾಂತ ನಪುಂಸಕದಲ್ಲಿ ತೃತೀಯೆಯು 'ಇಮು'ನ ಸ್ಥಾನದಲ್ಲಿ 'ಎ' ಬರುತ್ತದೆಂದು ಹೇಳಿದ್ದರೂ ವ್ಯಾಖ್ಯಾನದಲ್ಲಿ "ಅತ್ರಾಕ್ತೋ ನಪೀತಿ ಪ್ರಾಯಿಕಮೇವ. ಅನತೋಽಪಿ ಅನಪ್ಯಪಿ ಪ್ರಯೋಗ ದರ್ಶನಾತ್" ಅಂದರೆ ಅಕಾರಾಂತ ನಪುಂಸಕದಲ್ಲಿ ಎ ಬರುತ್ತದೆಂಬುದು ಪ್ರಾಯಶಃ ಮಾತ್ರ. ಏಕೆಂದರೆ 'ಅಕಾರಾಂತವಲ್ಲದಲ್ಲಿ ನಪುಂಸಕವಲ್ಲದಲ್ಲೂ ಪ್ರಯೋಗ ಕಾಣುವುದರಿಂದ' ಎಂದು "ಮುನಿಪತಿಯೆ ಪೇಳೆಪಟ್ಟುದು, ನರಪತಿಯುಭಯಪ್ರಪಂಚಮುದಂಗೇಳ್ದಾತಂ———" ಉದಾಹರಿಸಲಾಗಿದೆ. ಅನುಶಾಸನಕಾರನ ಈ ಸೂಕ್ಷ್ಮದೃಷ್ಟಿಯನ್ನು ಗಮನಿಸಬೇಕು. 'ಮುನಿಪತಿಯೆ' ಎಂಬುದು 'ಮುನಿಪತಿಯಿಂದ' ಎಂಬರ್ಥದಲ್ಲಿ ಪೆಂಪಿಂದವನ ಹೇಳಿಕೆ, ವ್ಯಾಕರಣದ ಹೇಳಿಕೆಯ ಬಲದಿಂದ ಕವಿ ಈ ಪ್ರಯೋಗವನ್ನು ಮಾಡಿದ್ದರೂ ಇರಬಹುದು, ಅಥವಾ ಅನುಶಾಸನಾಕಾರನೇ ಇಂತಹ ಪ್ರಯೋಗವನ್ನು ಸೃಷ್ಟಿಸಿದನೋ ಹೇಳುವುದು ಕಷ್ಟ. ಫಲದಲ್ಲಿ, ಕ್ರಮದೆ ಎಂಬಲ್ಲಿ ಕ್ರಮದಲ್ಲಿ ಎಂಬಂತೆ ಅರ್ಥೈಸಿದರೆ ತಪ್ಪಲ್ಲ. ಹಾಗೆಯೇ ಅರ್ಥಮಾಡುವುದು ಸಹಜವೆನ್ನಿಸುತ್ತದೆ. ಸಂಸ್ಕೃತ ವ್ಯಾಕರಣ ಪ್ರಯೋಗದ ಬಲದಿಂದ ಈ ವೈಯಾಕರಣರು ಇದನ್ನು ತೃತೀಯಾರ್ಥವೆಂದು ಭ್ರಮಿಸಿದಂತೆ ತೋರುತ್ತದೆ. ಇಲ್ಲಿ 'ಎ' ಕಾರ ಸಪ್ತಮ್ಯರ್ಥಕವೇ ಆಗಿದೆ. ಹಾಗಾದರೆ ಈ ಭ್ರಮೆಗೆ ಕಾರಣವೇನು ? ಕರಣಾರ್ಥದಲ್ಲಿ ಕನ್ನಡದ ಆಡುಮಾತಿನಲ್ಲೂ ಸಪ್ತಮೀ ಪ್ರತ್ಯಯವನ್ನೇ ಬಳಸುವುದೇ ರೂಢಿ—ಕತ್ತಿಯಲ್ಲಿ ಕಡಿದ, ನೇಗಿಲಿನಲ್ಲಿ ಉತ್ತ, ಇತ್ಯಾದಿ. ಉಳಿದ ದ್ರಾವಿಡ ಭಾಷೆಗಳಲ್ಲೂ

---

12. ಪಂಚಮೀವಿಭಕ್ತಿ—ಸೇಡಿಯಾಪು ಕೃಷ್ಣಭಟ್ಟ, ಪ್ರಬುದ್ಧ ಕರ್ಣಾಟಕ, 26-2,1944
13. ಅದೇ.
14. ಶ.ದ.ಸೂ. 117.
15. ಅನುಶಾಸನ–ಸೂ. 273, ಪುಟ. 141.
16. ಭಾಷಾಭೂಷಣ-ಸೂ. 61 ಪುಟ. 28.

ಇದೇ ಕ್ರಮವಿದೆ. ಕತ್ತಿಡೆ ಮರಾನೆ ಕಡ್ಕೆ (ತುಳು-ಕತ್ತಿಯಲ್ಲಿ ಮರವನ್ನು ಕಡಿದ) ಕತ್ತಿಯಿಲೆ ಕೊತ್ತಿ (ಮ. ಕತ್ತಿಯಲ್ಲಿ ಕಡಿದ).

ಇಂತಹ ಕನ್ನಡದ ಗ್ರಾಂಥಿಕ ಪ್ರಯೋಗಗಳನ್ನೂ ನೋಡಬಹುದು– "ವಜ್ರಕೀಟಂಗಳೆ ಕರ್ಣನೆರಡುಂ ತೊಡೆಯುಮನಾಳಿಯಿನೂರಿ ಕೊಡಂತಿಯೊಳೆ ಬೆಟ್ಟಿದಂತತ್ತ್ವಮಿತ್ತ್ವಮುರ್ಚೆ (ಪಂಪಭಾರತ, ಪು. 25), ಕತ್ತುರಿಯಲ್ ಬರೆದಂತಪ್ಪ ವಿಕ್ರಾಂತ ತುಂಗನ ವಿಲಾಸಗಳೆ (ಪಂಪಭಾರತ, ಪು. 49). ಇಂತಹ ಪ್ರಯೋಗಗಳನ್ನು ಕೇಶಿರಾಜ ತೃತೀಯಾರ್ಥದಲ್ಲಿ ಸಪ್ತಮೀ ಎಂದಿದ್ದಾನೆ[17] ಹವ್ಯಕ ಕನ್ನಡದಲ್ಲೂ ಇಂತಹದೇ ಪ್ರಯೋಗ–ಅಣ್ಣ ಎನಗೆ ಕೈಲಿ ಬಡಿದ (ಅಣ್ಣ ನನಗೆ ಕೈಯಲ್ಲಿ ಬಡಿದ) ಇದನ್ನೆಲ್ಲಾ ಪರಿಭಾವಿಸಿ ಶ್ರೀ ಸೇಡಿಯಾಪು ಕೃಷ್ಣಭಟ್ಟರು "ತನ್ನದೇ ಆದ ಪ್ರತ್ಯಯವಿಲ್ಲದೆ ಒಮ್ಮೆ ಸಪ್ತಮಿಯನ್ನೂ ಇನ್ನೊಮ್ಮೆ ಪಂಚಮಿಯನ್ನೂ ಆಶ್ರಯಿಸುವುದು ತೃತೀಯಾರ್ಥವೆಂದೂ ದ್ರಾವಿಡ ಭಾಷಾ ಮರ್ಯಾದೆಗೆ ಇದು ಅವಿರುದ್ಧ ಮಾತ್ರವಲ್ಲ ಸಹಜವೆಂದೂ" ತಿಳಿಸಿದ್ದಾರೆ.[18] ಆದ್ದರಿಂದ ಸಪ್ತಮೀ ಪ್ರತ್ಯಯವಾದ 'ಎ' ಕಾರವೇ 'ಕ್ರಮದೆ', 'ನಯದೆ' ಎಂಬಲ್ಲಿ ತೃತೀಯಾರ್ಥದಲ್ಲೂ ಬಳಕೆಯಾದುದೆಂದು ಸಾಧಿತವಾದಂತಾಯಿತು. 'ಎ' ತೃತೀಯಾ ಪ್ರತ್ಯಯವೆಂಬುದಕ್ಕೆ ಕೇಶಿರಾಜನ ಹೇಳಿಕೆಯನ್ನೇ ಬೆದಕಿನೋಡಬಹುದು.– "ಪಂಚಮಿಯ ಅತ್ ಎಂಬುದನ್ನು ಅತ್ತಣಿಂ ಎಂದು ಹೇಳಲಾಗುತ್ತದೆ. ಆ ಪಂಚಮಿಗೆ ಇಂ, ಇಂದಂ, ಇಂದೆ ಎಂಬ ತೃತೀಯೆಯ ಮೂರು ರೂಪವನ್ನು ಹತ್ತಿಸುವರು, ಈ ಮೂರು ರೂಪಕ್ಕೆ ಆದೇಶವಾದ ಎ ಕಾರವನ್ನು ಪರಿಹರಿಸುವರು"[19]. ಅವನು ಹೇಳುವ ತೃತೀಯೆಯ ಮೂರು ರೂಪವೂ ವಾಸ್ತವಿಕವಾಗಿ ಪಂಚಮಿಯದಾಗಿದ್ದು ಮತ್ತೆ ತೃತೀಯೆಗೆ ರೂಢವಾಗಿರಬೇಕೆಂದು ಶ್ರೀ ಸೇಡಿಯಾಪು ಅವರು ತಮ್ಮ ಮೇಲೆ ಹೇಳಿದ ಲೇಖನದಲ್ಲಿ ಪ್ರತಿಪಾದಿಸಿದ್ದಾರೆ. ಎ ಕಾರವೂ ಅವನು ಹೇಳುವಂತೆ ತೃತೀಯಾಪ್ರತ್ಯಯವಾದರೆ ಉಳಿದವುಗಳಂತೆ ಅದೂ ಏಕೆ ಪಂಚಮಿಗೆ ಹತ್ತಬಾರದು ? ಇಲ್ಲೇ ಅದು ತೃತೀಯಾಪ್ರತ್ಯಯವಲ್ಲವೆಂಬುದು ಸ್ಪಷ್ಟವಾಗುತ್ತದೆ. ಸಪ್ತಮೀಪ್ರತ್ಯಯವೇ ತೃತೀಯೆಯಲ್ಲೂ ಪ್ರಯೋಗವಾಗುವುದರಿಂದ ಅದನ್ನು ತೃತೀಯಾಪ್ರತ್ಯಯವೆಂದು ಭಾವಿಸಿರಬೇಕು. ಉಳಿದೆಡೆಯಲ್ಲಿ ಸಪ್ತಮ್ಯರ್ಥದಲ್ಲಿ ಎ ಕಾರದ ಬಳಕೆಯನ್ನು ಅವನೇ ಹೇಳಿದ್ದಾನೆ.

"ಪ್ರಾಚೀನ ತಮಿಳಿನಲ್ಲಿ ತೃತೀಯ 'ಇನ' ಆದರೂ ಪಂಚಮ್ಯರ್ಥದಲ್ಲೂ, ಸಪ್ತಮ್ಯಾರ್ಥದಲ್ಲೂ 'ಇಲ್' ಪ್ರಯೋಗವಾಗುತ್ತದೆ. ಹೀಗಿರುವುದರಿಂದ ಕನ್ನಡ

17. ಶ. ದ. ಸೂ. 146, ಪುಟ. 154.
18. ಪಂಚಮೀ ವಿಭಕ್ತಿ–ಸೇಡಿಯಾಪು ಕೃಷ್ಣ ಭಟ್ಟ, ಪ್ರಬುದ್ಧ ಕರ್ನಾಟಕ, 26-2,1944
19. ಶ. ದ. ಸೂ. 126–ಪುಟ 138.

ದಲ್ಲೂ ಸಪ್ತಮ್ಯರ್ಥಕವಾದ ಇಲ್ > ಇನೆ ಆಗಿರಬಹುದು...[20] ಪಂಚಮೀಯ ಅರ್ಥ-ವಿಶ್ಲೇಷಣೆ, ತೊಲಗುವುದು, ಯಾವುದಾದರೊಂದು ಸ್ಥಳದಿಂದ. ಆದ್ದರಿಂದಲೇ ಸ್ಥಳವಾಚಕ ಇಲ್ ಪಂಚಮಿಯ ಪ್ರತ್ಯೇಕತೆಗಾಗಿ 'ಇನ್' ಆಗಿ ಮುಂದೆ ತೃತೀಯೆಗೂ ಬಳಕೆಯಾಗಿರಬಹುದು. 'ಇಲೆ' ತಮಿಳು ಮಲಯಾಳಗಳಲ್ಲಿ ಸಪ್ತಮೀ ಪ್ರತ್ಯಯವಾಗಿ ನೆಲೆಸಿತು. ಕನ್ನಡದಲ್ಲಿ ಸ್ಥಳವಾಚಕ ಅಲಿ (ಅಲ್ಲಿ) ಸಪ್ತಮೀಪ್ರತ್ಯಯವಾಯಿತು.

ನಿನ್ನೆ, ಮೊನ್ನೆ, ನಾಳೆ, ಮತ್ತೆ, ಎಂಬ ಕಾಲವಾಚಕಗಳ ಅಂತ್ಯದಲ್ಲಿರುವ 'ಎ' ಕಾರವೂ ಸಪ್ತಮ್ಯರ್ಥಕವಾಗಿದೆ. 'ಆಗ, ಈಗ', ಅಕಾರಾಂತವಾಗಿದ್ದರೂ ಅರ್ಥದಲ್ಲಿ ಸಪ್ತಮಿ. ಕಾಲವಾಚಕಗಳಿಗೆ ಚತುರ್ಥಿ 'ಗೆ' ಸೇರುವುದು ಅಪೂರ್ವವಲ್ಲ—ಇಂದಿಗೆ, ಅಂದಿಗೆ, ನಾಳೆಗೆ, ನಾಡಿದಿಗೆ, ಮೊನ್ನೆಗೆ, ನಿನ್ನೆಗೆ ಇತ್ಯಾದಿ. ಆಗ, ಈಗ ಎಂಬ ಸ್ಥಳವಾಚಕಗಳು 'ನಿನ್ನೆ' ಮೊನ್ನೆ' ಎಂಬಂತೆ ಎಕಾರಾಂತವಾಗಿಲ್ಲವೇಕೆ ? ಆಗೆ, ಈಗೆ ರೂಪಗಳು 'ಆಗು', 'ಈ' ಧಾತುಗಳ ಸತಿಸಪ್ತಮಿ, ವಿಧಿ ರೂಪಗಳೂ ಆಗುವುದರಿಂದ ಈ ಗೊಂದಲ ತಪ್ಪಿಸಲು ಮೂಲರೂಪದಲ್ಲೇ ಉಳಿದಿರಬಹುದು. ಇವುಗಳಿಗೆ ಚತುರ್ಥಿಯ 'ಗೆ' ಸೇರಿದಾಗ ಆಗ+ಗೆ=ಆಗ್ಗೆ, ಈಗ+ಗೆ=ಈಗ್ಗೆ. ಕೆಲವೊಮ್ಮೆ ಈ 'ಎ' ಕಾರಕ್ಕೆ ಯಕಾರವನ್ನೂ ಸೇರಿಸಿ ಆಗ್ಗೆಯ್, ಈಗ್ಗೆಯ್ ಎಂದು ಉಚ್ಚರಿಸುವುದೂ ಉಂಟು. ಸಂಬೋಧನೆಯಲ್ಲಿ ನಾಮಪದದ ಕೊನೆಯ ಸ್ವರ ಯಾವುದೇ ಇರಲಿ ಅದು ಹ್ರಸ್ವ, ಅಥವಾ ದೀರ್ಘವಾಗುತ್ತದೆ.[21] ದೇವ ಬಿನ್ನಪಂ, ಕುರುಪತೀ ನಾಮಪದವು ಹ್ರಸ್ವಾಂತವಾಗಿಯೇ ಉಳಿಯುವಾಗ ಸಂಬೋಧನೆಯನ್ನು ಸೂಚಿಸಲು ಅದರ ಮೊದಲು 'ಎಲೆ'ಎ ಗಳ ಪ್ರಯೋಗವಾಗುತ್ತದೆ-'ಎ ದೇವ, ಎಲೆ ದೇವ' ನಾಮಪದದ ಅಂತ್ಯದಲ್ಲಿ ಸಮುಚಿತಾಗಮದೊಂದಿಗೆ 'ಎ' ವರ್ಣ ಬರುತ್ತದೆ.[22] —ಚಂದ್ರನೇ, ಗುರುವೇ, ಕೋಕಿಲನಾದೆಯೇ, ಅನುಶಾಸನ[23], ಭಾಷಾಭೂಷಣ[24]ಗಳಲ್ಲೂ ಈ ವಿಚಾರ ಹೇಳಿದೆ. ಪ್ರಕೃತಿ ಸ್ವರೂಪ ಸಂಬೋಧನ ಸೂಚಕವಾಗದಿರುವುದರಿಂದ 'ಎ'ವರ್ಣದ ಪ್ರಯೋಗ ಅಗತ್ಯವಾಗುತ್ತದೆ. ಪ್ರಾಚೀನರು ಸಂಬೋಧನೆಯನ್ನು ಪ್ರಥಮೆಯಲ್ಲೇ ಸೇರಿಸಿದ್ದರೂ ಅಭಿಮುಖೀಕರಣದ ಪ್ರತ್ಯೇಕತೆ ಅದಕ್ಕಿರುವುದರಿಂದ ಅದು ಬೇರೆಯೇ ವಿಭಕ್ತಿಯೆನಿಸಬಹುದು.

---

20. ಅಡಿ ಟಿಪ್ಪಣಿ—ಪ್ರಾಚೀನ ಕನ್ನಡ ವ್ಯಾಕರಣಗಳು—ಎಂ. ವಿ. ಸೀತಾರಾಮಯ್ಯ-ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1971, ಪುಟ 150.
21. ಶ. ದ. ಸೂ. 134, ಪುಟ 144.
22. ಅದೇ, ಸೂ. 135, ಪುಟ 145.
23. ಅನುಶಾಸನ ಸೂ. 252 ಪುಟ 135.
24. ಭಾಷಾಭೂಷಣ ಸೂ. 71, ಪುಟ 31.
25. ಶ. ದ. ಸೂ. 92, ಪುಟ 108.

ಸಂಸ್ಕೃತದ ಆಕಾರಾಂತ ಶಬ್ದಗಳು ಏಕಾರ ಅಥವಾ ಆಕಾರಾಂತವಾಗಿ ಕನ್ನಡದಲ್ಲಿ ಲಿಂಗವಾಗುತ್ತವೆಂದು ದರ್ಪಣ[25] ಭಾಷಾಭೂಷಣ[26]ಗಳಲ್ಲಿ ಹೇಳಿದೆ. ಹೆಚ್ಚಾಗಿ ಸಂಸ್ಕೃತದ ಆಕಾರಾಂತ ಸ್ತ್ರೀಲಿಂಗ ಶಬ್ದಗಳು ಕನ್ನಡದಲ್ಲಿ ಎಕಾರಾಂತವಾಗುತ್ತವೆ. ಅವುಗಳಲ್ಲಿ ಕೆಲವು ಕನ್ನಡದಲ್ಲಿ ನಪುಂಸಕವಾಗುತ್ತವೆ. ಸ್ತ್ರೀಯರನ್ನು ಹೇಳುವವು ಮಾತ್ರ ಸ್ತ್ರೀಲಿಂಗವಾಗುತ್ತವೆ.—ಮಾಲೆ (ನ) ಶಾಲೆ (ನ) ವನಿತೆ (ಸ್ತ್ರೀ) ಕಾಂತೆ (ಸ್ತ್ರೀ). ಅನುಶಾಸನಕಾರನು ಸಂಸ್ಕೃತ ಆಕಾರಾಂತವು ಕನ್ನಡದಲ್ಲಿ ಎ ಕಾರಾಂತವಾಗುತ್ತದೆ[27] ಎಂದು ಬಾಲೆ, ಕಾಂತೆ, ವನಿತೆ—ಉದಾಹರಿಸಿದ್ದಾನೆ. ಕೆಲವು ಕನ್ನಡ ಸ್ತ್ರೀಲಿಂಗ ಶಬ್ದಗಳೂ ಎ ಕಾರಾಂತವಾಗಿರುತ್ತವೆ—ಸೂಳೆ, ಜೋಡೆ, ಪಾಣ್ಬೆ, ಕೆಲವು ಅ ಕಾರಾಂತ ಪುಲ್ಲಿಂಗ ಶಬ್ದಗಳು ಸ್ತ್ರೀಲಿಂಗದಲ್ಲಿ ಎ ಕಾರಾಂತವಾಗುತ್ತವೆ.—ಸಿತಗ—ಸಿತಗೆ, ಗುಣವಂತ—ಗುಣವಂತೆ, ಚದುರ—ಚದುರೆ. ಇವುಗಳಿಂದ 'ಎ' ಕಾರಕ್ಕೆ ಸ್ತ್ರೀ ಸೂಚಕ ಅರ್ಥವಿರುವುದು ತಿಳಿಯುತ್ತದೆ. ಅ, ಅಉ, ಇ ಗಳು ಎ ಅಥವಾ 'ಏ ಕಾರವಾಗಿ ಪರಿಣಮಿಸುತ್ತವೆ—ಶಾಲಾ—ಶಾಲೆ, ನೋಡಿದಯ್—ನೋಡಿದೆ, ಕಿಡು—ಕೆಡು, ಕೇಡು. ಇಕೆ, ಗೆ, ಮೆ, ಮೊದಲಾದ ಕೆಲವು ತದ್ಧಿತ ಪ್ರತ್ಯಯಗಳೂ ಎ ಕಾರಾಂತವಾಗಿರುತ್ತವೆ. ಉದಾ — ಉನ್ನತಿಕೆ, ಉಡುಗೆ ಜಾಣ್ಮೆ.

ಸ್ಮರಣ ವಿಚಾರ ಆಮಂತ್ರಣಗಳಲ್ಲಿ ಏಲೆ, 'ಏ' ; ಅವಧಾರಣೆಯಲ್ಲಿ ಎ ಕಾರ ಬರುತ್ತದೆಂದು ದರ್ಪಣದಲ್ಲಿ ಹೇಳಿದೆ.[28] ಅವಧಾರಣೆ—ಆತನಯೆ, ಅವಳಯೆ, ಅದೆ, ಅದುವೆ. ಭೂಷಣಕಾರನೂ ಅವಧಾರಣೆಯ ಎ ಕಾರವನ್ನು ಹೇಳಿದ್ದಾನೆ[29]. ವಿಧ್ಯರ್ಥದಲ್ಲೂ 'ಎ' ಕಾರದ ಪ್ರಯೋಗವಿದೆ.[30] ತೆಗೆ, ನಡೆ, ಬಗೆ, ಇತ್ಯಾದಿ. ಅನುಕರಣ ಶಬ್ದಗಳು 'ಎ' ಕಾರಾಂತವಾಗಿರುತ್ತವೆ—ತಿರ್ರನೆ, ಪಕ್ಕನೆ, ಘೋಂಕನೆ. ಕ್ರಿಯಾವಿಶೇಷಣ ಅವ್ಯಯಗಳೂ 'ಎ' ಕಾರಾಂತವಾಗಿರುತ್ತವೆ—ಸುಮ್ಮನೆ, ಬೇಗನೆ, ಒಡನೆ (ಕೂಡಲೇ).

ಹೀಗೆ 'ಎ' ವರ್ಣವು ಸಪ್ತಮಿ, ಸಂಬೋಧನೆ, ಸ್ತ್ರೀಲಿಂಗ, ಅನುಕರಣ, ವಿಧಿ, ಅವಧಾರಣೆ, 'ಕಾಲ'-ಮೊದಲಾದವುಗಳ ಸೂಚಕವಾಗಿ ನಾನಾ ಕಡೆಗಳಲ್ಲಿ ಅವತರಿಸುತ್ತದೆ.

---

26. ಭಾಷಾಭೂಷಣ, ಸೂ. 100, ಪುಟ 42.
27. ಅನುಶಾಸನ ಸೂ. 118, ಪುಟ 79.
28. ಶ. ದ. ಸೂ. 326, ಪುಟ 317,
29. ಭಾಷಾಭೂಷಣ, ಸೂ. 260, ಪುಟ 91.
30. ಭಾಷಾಭೂಷಣ, ಸೂ. 216, ಪುಟ 79.

ಆಧಾರಗಳು

ಶಬ್ದಮಣಿದರ್ಪಣ - ಸಂ. ಡಿ. ಎಲ್. ಎನ್., ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು, 1973.

ಕರ್ನಾಟಕ ಶಬ್ದಾನುಶಾಸನ – ಸಂ. ಲೂಯಿರೈಸ್, 1890.

ಕರ್ನಾಟಕ ಭಾಷಾಭೂಷಣ–ಸಂ. ಆರ್. ನರಸಿಂಹಾಚಾರ್, ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು, 1975.

ಪ್ರಾಚೀನ ಕನ್ನಡ ವ್ಯಾಕರಣಗಳು–ಎಂ. ವಿ. ಸೀತಾರಾಮಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1979.

ಪ್ರಬುದ್ಧ ಕರ್ನಾಟಕ ಸಂಚಿಕೆಗಳು.

ಅಂಬಿಗರ ಚೌಡಯ್ಯನ ವಚನಗಳಲ್ಲಿ ಸಾಮಾಜಿಕ ವಿಡಂಬನೆ

ಬಸವರಾಜ ಸಬರದ

ಜಿಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯಲ್ಲಿದ್ದುಕೊಂಡೇ ಅದರ ಎಲ್ಲ ದೋಷಗಳನ್ನು ಎತ್ತಿ ಹೇಳಿ ವಿಡಂಬಿಸಿದವರು ಚೌಡಯ್ಯನವರು. ಪೂಜೆ, ದೇವರು, ಧರ್ಮ, ಸಾಮಾಜಿಕ ಬದುಕು ಇವೆಲ್ಲವುಗಳಲ್ಲೂ ಶತಮಾನಗಳಿಂದ ಬಂದ ಸಾಂಪ್ರದಾಯಿಕ ಆಚರಣೆಗಳೇ ತುಂಬಿದ್ದವು. ಯಜಮಾನ ಸಂಸ್ಕೃತಿಯ ಹಿಡಿತದಲ್ಲಿ ಸಿಕ್ಕ ಗೊಡ್ಡು ನಂಬಿಕೆಗಳನ್ನು ತಲೆಯಲ್ಲಿ ತುಂಬಿಕೊಂಡು ಸಮಾಜ ನರಳುತ್ತಿರುವಾಗ ವಚನಕಾರರು ಬಂದರು. ಸಮಾಜದ ಪ್ರತಿಭಾಗವನ್ನು ಅವರು ವಾಸ್ತವ ದೃಷ್ಟಿಯಿಂದ ನೋಡುವುದರ ಮೂಲಕ ಸಾಮಾಜಿಕ ಕೊಳಕನ್ನು ಕಿತ್ತೊಗೆಯಲು ತಮ್ಮ ವಚನಗಳಲ್ಲಿ ಕಟುವಾಗಿ ವಿಡಂಬಿಸಿದರು, ಸ್ಪಷ್ಟವಾಗಿ ವಿವರಿಸಿದರು, ನೇರವಾಗಿ ನುಡಿದರು, ನಿರ್ಭಿಡೆಯಿಂದ ಬರೆದರು, ನುಡಿದಂತೆ ನಡೆದರು.

ಸಮಾಜ ಸಾವಿರಾರು ವರ್ಷಗಳಿಂದ ನಂಬಿಕೊಂಡು ಬಂದಿದ್ದ ಅರ್ಥವಿಲ್ಲದ ನಂಬಿಕೆಗಳನ್ನು ಒಮ್ಮೆಲೇ ಅಳಿಸಿ ಹಾಕುವುದು, ಅವರಲ್ಲಿ ವೈಚಾರಿಕತೆ ಮೂಡಿಸುವುದು ಸುಲಭದ ಕೆಲಸವಿರಲಿಲ್ಲ. ಇಂಡಿಯಾದಂತಹ ದೇಶದಲ್ಲಿ ವೈಚಾರಿಕ ಕ್ರಾಂತಿಯ ಕೆಲಸ ತೀರಾ ಕಠಿಣವಾದುದು. ಇಂತಹ ಸಂದರ್ಭ ಬಂದಾಗಲೆಲ್ಲ ಚೌಡಯ್ಯನವರು ಚೂರಿಯಂತೆ ಹರಿತವಾದರು, ಗಾಳಿಯಂತೆ ತೀಕ್ಷ್ಣವಾದರು.

ಪ್ರತಿಯೊಂದು ಕ್ಷೇತ್ರದಲ್ಲಿಯೂ ಸುಳ್ಳು, ಅರೆಸುಳ್ಳುಗಳಿಂದ ಕೂಡಿದ ಪಟ್ಟಭದ್ರರ, ಉಳ್ಳವರ ಹಿತವನ್ನಡಗಿಸಿಕೊಂಡಿರುವ ; ಆಚಾರ-ವಿಚಾರಗಳೇ ತುಂಬಿದ್ದಾಗ ಚೌಡಯ್ಯ ಮೊದಲಾದ ವಚನಕಾರರು ಅವುಗಳನ್ನೆಲ್ಲ ಪ್ರತಿಭಟಿಸಿದ ರೀತಿ, ತಳೆದ ದಿಟ್ಟ ನಿಲುವು, ತೆಗೆದುಕೊಂಡ ಸ್ಪಷ್ಟ ತೀರ್ಮಾನ, ಬಹಳ ಮುಖ್ಯವಾದವುಗಳು.

ಅಂದಿನ ವ್ಯವಸ್ಥೆಯಲ್ಲಿ ಧಾರ್ಮಿಕ ಕ್ಷೇತ್ರದಲ್ಲೇ ಹೆಚ್ಚು ಗೊಂದಲಗಳಿದ್ದುದರಿಂದ, ಧರ್ಮವೇ ಶೋಷಣೆಗಳಲ್ಲಿ ಮೂಲವಾಗಿ ಬಿಟ್ಟಿದ್ದರಿಂದ ಚೌಡಯ್ಯ ಮೊದಲಾದ ವಚನಕಾರರು ಧಾರ್ಮಿಕ ಕ್ಷೇತ್ರದ ಕೊಳೆ ತೊಳೆಯುವಲ್ಲೇ ಹೆಚ್ಚು ಆಸಕ್ತಿ ವಹಿಸಿದರು. ಅಂದಿನ ಸಮಾಜದಲ್ಲಿದ್ದ ಡಾಂಭಿಕ ಪೂಜೆ, ಬಹುದೇವೋಪಾಸನೆ, ವ್ರತ ನಿಯಮ ಗೊಡ್ಡು ಆಚರಣೆ, ಇಹವನ್ನು ಬಿಟ್ಟು ಪರಕ್ಕಾಗಿ ಪರದಾಟ, ದೇವರು-ಧರ್ಮಗಳ ಹೆಸರಿನಲ್ಲಿ ನಿರಂತರ ಶೋಷಣೆ ಇವೆಲ್ಲವನ್ನು ಕಣ್ಣಾರೆ ಕಂಡ ಚೌಡಯ್ಯ

ನವರು ತಮ್ಮ ವಚನಗಳಲ್ಲಿ ಅತ್ಯಂತ ಮಾರ್ಮಿಕವಾಗಿ ನಿರ್ಭಿಡೆಯಿಂದ ಪರಿಣಾಮ ಕಾರಿಯಾಗಿ ವಿಡಂಬಿಸಿದ್ದಾರೆ.

> 'ಆರಿಕೆ ಬಿತ್ತಿದ ಗಿಡುವಿನ ಹೂವ ಕೊಯಿದು
> ಊರೆಲ್ಲರೂ ಕಟ್ಟಿಸಿದ ಕೆರೆಯ ನೀರ ತಂದು
> ನಾಡೆಲ್ಲರೂ ನೋಡಿರೆಂದು ಪೂಜಿಸುತ್ತ
> ಪೂಜಿಸಿದ ಪುಣ್ಯ ಹೂವಿಗೋ? ನೀರಿಗೋ?
> ನಾಡೆಲ್ಲಕ್ಕೋ? ಪೂಜಿಸಿದಾತಗೋ?
> ಇದ ನಾನರಿಯೆ, ನೀನೆ ಹೇಳೆಂದನಂಬಿಗ ಚೌಡಯ್ಯ' (–ಅಂ.ಚೌ.ವ. ೧೧೭)

ಯಾರೋ ಬಿತ್ತಿದ ಗಿಡ, ಅದರಲ್ಲರಳಿದ ಹೂ, ಊರಿನವರು ಕಟ್ಟಿಸಿದ ಕೆರೆ-ಅದರಲ್ಲಿಯ ನೀರು ಇವನ್ನು ತಂದು ಜನ ನೋಡಲೆಂದು ಪೂಜೆಮಾಡುತ್ತ ವಟವಟ ಮಂತ್ರ ಹೇಳುವವರನ್ನು ಚೌಡಯ್ಯ ಇಲ್ಲಿ ಸೂಕ್ಷ್ಮವಾಗಿ ವಿಡಂಬಿಸುತ್ತಾರೆ. ಹೀಗೆ ಪೂಜಿಸಿದ ಪುಣ್ಯ ಯಾವನಿಗೆ ಸಿಗುತ್ತೊ ನಾನರಿಯೆ ಎನ್ನುವ ಮಾತಿನಲ್ಲಿ ದಟ್ಟ ಸತ್ಯವನ್ನಡಗಿಸಿದ್ದಾರೆ.

'ಪುಣ್ಯ'–'ಪಾಪ'ದ ಕಲ್ಪನೆಯನ್ನೇ ಅವರಲ್ಲಿ ಪರೋಕ್ಷವಾಗಿ ಚಿವುಟಿ ಹಾಕಿದ್ದಾರೆ. ಗಿಡದಲ್ಲರಳಿದ ಹೂವು, ಕೆರೆಯಲ್ಲಿ ನಿಂತ ನೀರು, ಇವು ಯಾರ ಸೊತ್ತೂ ಅಲ್ಲ. ವಸ್ತುಸ್ಥಿತಿ ಹೀಗಿರುವಾಗ ತನ್ನದಲ್ಲದ ವಸ್ತುವನ್ನು ತನ್ನದೆಂದೇ ಭಾವಿಸುವುದು ಮೊದಲನೆ ಭ್ರಾಂತಿ. ಭಾವಿಸಿದ ಭ್ರಮೆಯಲ್ಲಿ 'ಪುಣ್ಯ'ಕ್ಕಾಗಿ ಪರದಾಡುವುದು ಎರಡನೇ ಭ್ರಾಂತಿ. ಮೊದಲನೆಯದೇ ತನ್ನದಲ್ಲವೆಂದ ಮೇಲೆ ಎರಡನೆಯದು ತನ್ನದಾಗಲಿಕ್ಕೆ ಸಾಧ್ಯವೇ ಇಲ್ಲ. ಹೀಗೆ ತನ್ನದಲ್ಲದ, ತನಗೆ ಕಾಣದ, ತನಗೆ ಸಿಗದ ವಸ್ತುಗಳನ್ನು ನಂಬಿ ಕಾಣುವ, ಸಿಗುವ ಬದುಕನ್ನೇಕೆ ವ್ಯರ್ಥಮಾಡಿ ಕೊಳ್ಳುವಿರಿಯೆಂಬ ಸೂಕ್ಷ್ಮ ವಿಡಂಬನೆ ಈ ವಚನದಲ್ಲಿದೆ.

ಅವರ ಇನ್ನೊಂದು ಪ್ರಮುಖ ವಚನ ಹೀಗಿದೆ.

> 'ಕರದಲ್ಲಿ ಲಿಂಗವ ಹಿಡಿದುಕೊಂಡು, ಕಣ್ಣುಮುಚ್ಚಿ ಸರಜಪಮಾಲೆಯ
> ಬೆರಳಿಂದ ಎಳೆದೆಳೆದು ಎಣಿಸುತ್ತ
> ಗುರುಮೂರ್ತಿಯ ಧ್ಯಾನಿಸುತ್ತ ಕಂಡನೆಂಬುತ್ತ
> ಇರುವರೆ? ಮೂಳರಿರಾ, ನಿಮ್ಮಗೆಲ್ಲಿಯದೋ ಗುರುಧ್ಯಾನ,
> ವರ ಪರವಸ್ತುವಿಗೆ ಸರಿಯೆನಿಸಿಕೊಂಬ
> ಗುರುಸ್ವಾಮಿ ನಿಮ್ಮ ನೆರೆಹೊರೆಯ ಸಮೀಪ ಗ್ರಾಮದಲ್ಲಿರಲು
> ಅವರನು ಲೆಕ್ಕಿಸದೆ, ಉದಾಸೀನವಮಾಡಿ ಕಂಡು
> ನಿನ್ನ ಉಂಬ ಉಡುವ ಸಿರಿಸಂಪತ್ತಿನೊಳು ಅವರನು ಸತ್ಕರಿಸಿದರೆ
> ಕರದಲ್ಲಿ ನೋಡಿ ಕಂಡಿಹೆನೆಂದು, ಸಿರಿವಂ ಬಿಗಿದು, ಕಣ್ಣನೆ ತೆರೆಯದೆ
> ಸ್ವರದ ರಾಗ ಚಿಟಿಪಿಟಿ ಎನ್ನುತ್ತ
> ಅರಿದೆವೆಂಬ ಅರಿವಿಂಗೆ ಸಿರದೂಗಿ ನಗುತಿರ್ದ
> ನಮ್ಮ ಅಂಬಿಗ ಚೌಡಯ್ಯ' (–ಅಂ.ಚೌ.ವ. ೧೧೯)

ಜೀವಿಗಳನ್ನು ನಿರ್ಲಕ್ಷಿಸಿ, ನಿರ್ಜೀವವಾದ ಲಿಂಗಪೂಜೆಯಲ್ಲೇ ಕಾಲ ಕಳೆಯುವ, ಅಂತಹ ಭಾವುಕತನದಲ್ಲೇ ಎಲ್ಲವನ್ನು ಕಂಡೆನೆಂದು ಭ್ರಮಿಸುವ ಮೂಢ ಜನರ ಪರಿವರ್ತನೆಯಾಗುವಂತೆ ಚೌಡಯ್ಯ ತಮ್ಮ ವಿಚಾರಗಳನ್ನು ಇಲ್ಲಿ ಉದಾಹರಣೆಯೊಂದಿಗೆ ಬಿಂಬಿಸಿದ್ದಾರೆ. ''ಕರದಲ್ಲಿ ನೋಡಿ ಕಂಡಿಹನೆಂದು ಸಿರಿವಂಬಿಗಿದು'' ''ಕಣ್ಣನೆ ತೆರೆಯದೆ ಪಿಟಿಪಿಟಿಯೆನ್ನುತ್ತ'' ಎನ್ನುವ ಸಾಲುಗಳಲ್ಲಿ ಗೊಡ್ಡು ಭಕ್ತರ ಮೌಢ್ಯವನ್ನು ವಿಡಂಬಿಸಿದ್ದಾರೆ. ''ಗುರುಸ್ವಾಮಿಯನು ಲೆಕ್ಕಿಸದೆ''......ಎಂಬಂತಹ ಸಾಲುಗಳಲ್ಲಿ ಸುತ್ತಮುತ್ತಲಿರುವ ಗುರು ಜಂಗಮ ಸ್ವರೂಪದಲ್ಲಿ ಕಾಣುವ ಮಾನವರ ಬಗೆಗೆ ಪ್ರೀತ್ಯಾದರಗಳನ್ನು ಬೆಳೆಸಿಕೊಳ್ಳಬೇಕೆಂಬ ಬಲವಾದ ಆಶಯವಿದೆ. ನಿಜವಾದ ಬದುಕಿನ ತಿರುಳನ್ನು ಅರ್ಥೈಸುವ ರೀತಿಯಿದೆ.

ಕೆಟ್ಟ ಕಾರ್ಯಗಳನ್ನೆಲ್ಲಾ ಮಾಡಿ ಬಾಯಲ್ಲಿ ಮಾತ್ರ 'ಶಿವ ಶಿವ' ಎನ್ನುವ ಡಾಂಭಿಕರನ್ನು ಕುರಿತು ಚೌಡಯ್ಯ ಅಂತರವನ್ನ ಪಾದುಕೆಯಿಂದ ಹೊಡೆಯೆನ್ನುತ್ತ ಕಟುವಾಗಿ ಟೀಕಿಸುತ್ತಾರೆ.

'ಕೇಳಿದೆಲೆ ಮಾನವ–ಪಂಚಮಹಾಪಾತಕ ದೋಷಾದಿಗಳನ್ನು ಮಾಡಿ
ಬಾಯಿಲೆ 'ಶಿವ ಶಿವ' ಎಂದು ಶಿವನ ನೆನೆದರೆ
ಭವ ಹರಿಯಿತೆಂಬ ವಿಚಾರಗೇಡಿಗಳ ಮಾತು ಕೇಳಲಾಗದು
ಜ್ಯೋತಿಯ ನೆನೆದರೆ ಕತ್ತಲೆ ಹಿಂಗುವುದೆ ?
ರಂಭೆಯ ನೆನೆದರೆ ಕಾಯದ ಕಳವಳ ಹೋಗುವದೆ ?
ಮೃಷ್ಟಾನ್ನ ನೆನೆದರೆ ಹೊಟ್ಟೆ ತುಂಬುವದೆ ?
    ಮಾಡಿದಂತಹ ದೋಷ ಹೋಗಲಾರದು
ಇಂತಪ್ಪ ದುರಾಚಾರಿಗಳ
ಪಡಿಹಾರಿ ಉತ್ತಣ್ಣಗಳ ಪಾದುಕೆಯಿಂದ
ಹೊಡೆಯೆಂದಾತ ನಮ್ಮ ಅಂಬಿಗ ಚೌಡಯ್ಯ' (—ಅಂ.ಚೌ.ವ. ೧೨೧)

ಚೌಡಯ್ಯನವರ ಈ ನುಡಿಯಲ್ಲಿ ಕಟುಟೀಕೆಯಿದ್ದರೂ ಅದು ಅಂದಿನ ಸಂದರ್ಭದಲ್ಲಿ ಅವಶ್ಯಕತೆ ಇತ್ತೆಂದೆನಿಸುತ್ತದೆ. ಡಾಂಭಿಕತನವನ್ನು ಹೊಡೆನೋಡಿಸಲು ಚೌಡಯ್ಯನಂತವರು ತೆಗೆದುಕೊಂಡ ದಿಟ್ಟ ನಿಲವುಗಳು ಗಮನಾರ್ಹವಾಗಿವೆ.

ವ್ರತ ನಿಯಮಗಳಿಗೆ ಕಟ್ಟು ಬಿದ್ದ ಮೂಢ ಜನ ಮೋಕ್ಷಕ್ಕಾಗಿ, ಪುಣ್ಯಕ್ಕಾಗಿ, ಉಪವಾಸ ಮಾಡುವುದನ್ನು ಚೌಡಯ್ಯನವರು ಸೂಕ್ಷ್ಮವಾಗಿ ವಿಡಂಬಿಸಿದ್ದಾರೆ.

'ದೇಹಾರಾವ ಮಾಡುವಣ್ಣಗಳಿರಾ !
ಒಂದು ತುತ್ತು ಆಹಾರವನಿಕ್ಕಿರಯ್ಯಾ ;
ದೇಹಾರಕ್ಕೆ ಆಹಾರವೇ ನಿಚ್ಚಣಿಕೆ
ದೇಹಾರವ ಮಾಡುತ್ತೆ, ಆಹಾರವನಿಕ್ಕದಿರ್ದಡೆ
ಆಹಾರವಿಲ್ಲವೆಂದನಂಬಿಗ ಚೌಡಯ್ಯ.' (—ಅಂ.ಚೌ.ವ. ೧೨೨)

'ಅನ್ನದೇವರಿಗಿಂತ ಇನ್ನುದೇವರಿಲ್ಲ' ಎಂಬಂತಹ ಅನುಭವೋಕ್ತಿಯನ್ನು ಚೌಡಯ್ಯ ಇಲ್ಲಿ ಪ್ರತಿಪಾದಿಸಿದ್ದಾರೆ. ದೇಹಾರಕ್ಕೆ ಆಹಾರವೇ ಸಿಕ್ಕುಣಿಕೆ ಯೆಂಬಂತಹ ಸತ್ಯವನ್ನು ಅವರು ಹೇಳುವ ರೀತಿ ಬಹಳ ಪರಿಣಾಮಕಾರಿಯಾದುದು.

ಈ ಸಮಾಜದಲ್ಲಿ ಎಲ್ಲ ಜನಕ್ಕೂ ಮೆಚ್ಚಿನಡೆಯುವದು ಬಹಳ ಕಷ್ಟದ ಕೆಲಸ. ಎಲ್ಲರಿಗೂ ಒಳ್ಳೆಯುವರಾಗಿ ಬದುಕುವದೂ ಸರಳವಾದುದಲ್ಲ. ವಿಭಿನ್ನ ರುಚಿಯು ವಿಚಿತ್ರ ಸ್ವಭಾವದ, ಹಲವಾರು ಸಿದ್ಧಾಂತಗಳ ಜನ ಈ ಸಮಾಜದಲ್ಲಿ ಬೆರೆದು ಕೊಂಡಿರುವುದರಿಂದ ; ಎಲ್ಲರ ಅಭಿಪ್ರಾಯವೂ ಒಂದೇ ಆಗಲಾರದು. ಇದನ್ನು ಚೌಡಯ್ಯ ಬಹಳ ಮಾರ್ಮಿಕವಾಗಿ ಹೇಳಿದ್ದಾರೆ.

ಹೆಚ್ಚು ಊಟ ಮಾಡಿದರೆ ಭೂತವೆನ್ನುತ್ತಾರೆ, ಉಣದಿದ್ದರೆ ರೋಗಿ ಯೆನ್ನುತ್ತಾರೆ. ಭೋಗಿಸಿದರೆ ಕಾಮಿಯೆನ್ನುತ್ತಾರೆ, ಭೋಗಿಸದಿದ್ದರೆ ಕರ್ಮಿ ಯೆನ್ನುತ್ತಾರೆ, ಊರೊಳಗಿದ್ದರೆ ಸಂಸಾರಿಯೆನ್ನುತ್ತಾರೆ, ಅಡವಿಯೊಳಗಿದ್ದರೆ ಮೃಗಜಾತಿಯೆನ್ನುತ್ತಾರೆ, ಇಂತಹ ಜನರು ಮೆಚ್ಚುವುದಕ್ಕೋಸ್ಕರ ಬದುಕುವವ ರನ್ನು ಚೌಡಯ್ಯ ತರಾಟೆಗೆ ತೆಗೆದುಕೊಂಡಿದ್ದಾರೆ. ಜನ ಹೊಗಳುತ್ತಾರೆಂದಾಗಲಿ, ಅವರು ತೆಗಳುತ್ತಾರೆಂದಾಗಲಿ ನಾವು ಬದುಕಬೇಕಾಗಿಲ್ಲ. ನಮಗಾಗಿ ನಾವು ಬದುಕಬೇಕು, ಬದುಕಿಗಾಗಿ ಬದುಕಬೇಕು-ಎನ್ನುವ ಚೌಡಯ್ಯನವರ ವಿಚಾರಗಳು ಇಂದಿಗೂ ರೆಲೆವೆಂಟ ಆಗುತ್ತವೆ.

ವಚನಕಾರರು ಅಂದಿನ ಸಮಾಜವನ್ನು ಸಮಗ್ರ ದೃಷ್ಟಿಯಿಂದ ನೋಡಿದರು. ಪ್ರತಿಯೊಂದನ್ನು ಸೂಕ್ಷ್ಮವಾಗಿ ಅವಲೋಕಿಸಿದರು. ಯಾವ ಮಾತನ್ನು ಹೇಗೆ ಎಷ್ಟು ಪ್ರಮಾಣದಲ್ಲಿ ಹೇಳಬೇಕೆಂದು ತಮ್ಮ ಅನುಭವದ ಬದುಕಿನಲ್ಲಿ ಲೆಕ್ಕಾಚಾರ ಮಾಡಿಕೊಂಡರು. ಅಂತೆಯೇ ಸಮಾಜ ವ್ಯವಸ್ಥೆ ಬಗೆಗೆ ಚೌಡಯ್ಯ ಮುಂತಾದ ವಚನಕಾರರು ನುಡಿದ ನುಡಿಗಳೆಲ್ಲ ತೂಕಮಾಡಿ ಹೇಳಿದಂತಿವೆ.

ಲೋಭಿಗಳನ್ನು ಕುರಿತು ಚೌಡಯ್ಯ ಈ ಕೆಳಗಿನ ವಚನಗಳಲ್ಲಿ ವಿಡಂಬಿಸುವ ರೀತಿ ಗಮನಿಸುವಂತಹದು. ತಾವು ಯಾವುದರ ವಿರುದ್ಧ ಹೋರಾಡಿದರೂ ಒಮ್ಮೊಮ್ಮೆ ಅಂತಹ ನಂಬಿಕೆಗಳನ್ನೇ ಊಹಿಸಿ ಹೇಳುವ ಪ್ರಸಂಗ ಅವರಿಗೆ ಅನಿವಾರ್ಯವಾದುದ್ದುಂಟು.

'ನಿಲ್ಲಿಸಬಹುದಯ್ಯ — ಒಂದೇ ಮಂತ್ರದಲ್ಲಿ ಕಾಳೋರಗನ
ನಿಲ್ಲಿಸಬಹುದಯ್ಯ — ಒಂದೇ ಮಂತ್ರದಲ್ಲಿ ಹಾರುವ ಪಕ್ಷಿಯ
ನಿಲ್ಲಿಸಬಹುದಯ್ಯ — ಒಂದೇ ಮಂತ್ರದಲ್ಲಿ ತಿಂಬುವ ಹೆಬ್ಬುಲಿಯ
ನಿಲ್ಲಿಸಬಹುದಯ್ಯ — ಒಂದೇ ಮಂತ್ರದಲ್ಲಿ ಬರುವ ಉರಿಬಾಣವ

ಇಂತಿವೆಲ್ಲವನು ಒಂದೇ ಮಂತ್ರದಲ್ಲಿ ನಿಲ್ಲಿಸಬಹುದು.
ಲೋಭವೆಂಬ ಗ್ರಹಣ ಹಿಡಿದವರ ಏತರಿಂದಲೂ ನಿಲ್ಲಿಸಲಾಗದು
ಈ ಲೋಭಕ್ಕೆ ದಾರಿದ್ರ್ಯವೇ ಔಷಧವು
ಹೇಳಿದರೆ ಕೇಳರು, ತಾವು ತಿಳಿಯರು
ಇಂತಹ ಗೊಡ್ಡು ಮೂಳ ಹೊಲೆಯರಿಗೆ ಕರ್ಮವೆಂಬ
ಶರಧಿಯಲ್ಲಿ ಬಿದ್ದು ಉರುಳಾಡುವುದೇ ಸತ್ಯವೆಂದಾತ ಅಂಬಿಗ ಚೌಡಯ್ಯ
(—ಅಂ.ಚೌ.ವ. 124)

ಮಂತ್ರ ತಂತ್ರಗಳನ್ನೇ ವಚನಕಾರರು ಒಪ್ಪುವದಿಲ್ಲವೆಂದಮೇಲೆ ಮಂತ್ರ ಪದವನ್ನು ಉಲ್ಲೇಖಿಸಲು ಕಾರಣವೇನೆಂದು ವಿಚಾರಿಸಿದಾಗ ಚೌಡಯ್ಯನವರು ಜನನಂಬಿಕೆಗಳ ಮುಖಾಂತರವೇ ಜನ ವಿರೋಧಿ ನಿಲುವುಗಳನ್ನು ಸ್ಪಷ್ಟ ಪಡಿಸಿದ ಅಂಶ ಗಮನಕ್ಕೆ ಬರುತ್ತದೆ. ಸಿರಿಯರಗರ ಬಡಿದವರನ್ನು ನುಡಿಸಲಾಗದು ಎಂದು ಬಸವಣ್ಣನವರು ಹೇಳಿದ್ದಾರೆ. 'ಲೋಭವೆಂಬ ಗ್ರಹಣ ಹಿಡಿದವರು' ಎಂದು ಚೌಡಯ್ಯ ಹೇಳುತ್ತಾರೆ. ಇಂತವರು ನಿಜವಾದ ಹೊಲೆಯರು ಎಂಬ ವಿಚಾರಗಳನ್ನು ಅವರು ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಜನಸಾಮಾನ್ಯರಿಗೆ ತಿಳಿಯುವಂತೆ ಹೇಳುವದು ಅವರಿಗೆ ಮುಖ್ಯವೆನಿಸಿತ್ತು. ಹೀಗಾಗಿ ಜನ ಸಾಮಾನ್ಯರು ನಂಬಿಕೊಂಡಿದ್ದ, ಜನಸಾಮಾನ್ಯರಿಗೆಲ್ಲ ಪರಿಚಯವಿದ್ದ ವಸ್ತು ವಿಷಯಗಳನ್ನು ಉದಾಹರಿಸುವುದರ ಮೂಲಕ ಚೌಡಯ್ಯನವರು ತಮ್ಮ ವಿಚಾರಗಳನ್ನು ತಿಳಿಯುವಂತೆ ಹೇಳುತ್ತಾರೆ.

ಬಹಳ ಹಿಂದಿನಿಂದ ವೇದ ಶಾಸ್ತ್ರಗಳನ್ನು ನಂಬಿಕೊಂಡು ಬಂದಿದ್ದರು. ಅವುಗಳನ್ನು ಹಿಂದೂಗಳ ಪೂಜ್ಯ ಗ್ರಂಥಗಳೆಂದು ಪೂಜಿಸುತ್ತಿದ್ದರು. ಅವು ಉಚ್ಚ ವರ್ಗದ ಹಿತವನ್ನೊಂದೇ ಹೇಳುವ; ಕೆಲಸ ಮಾಡಿದ್ದಕ್ಕೆ-ಫಲ ನಿರೀಕ್ಷಿಸಬಾರದೆನ್ನುವ; ಹೆಣ್ಣನ್ನು ಅಸ್ಪೃಶ್ಯಳನ್ನಾಗಿಸಿದ ; ದಲಿತರನ್ನು–ದನಗಳಂತೆ ಕಾಣುವ ಜನವಿರೋಧಿ ವಿಚಾರಗಳನ್ನು ಬಿಂಬಿಸುವ ವೇದಶಾಸ್ತ್ರ ಪುರಾಣಗಳನ್ನು ಚೌಡಯ್ಯನವರು ಸಾರಾಸಗಟಾಗಿ ತಳ್ಳಿಹಾಕಿದರು. ಹಾಗೆ ವಿರೋಧಿಸುವಲ್ಲಿ ಜನನಂಬಿಕೆಗನುಗುಣ ವಾದ ಉದಾಹರಣೆ ಕೊಡುವುದರ ಮೂಲಕ ಸೈದ್ಧಾಂತಿಕ ಹೋರಾಟದಲ್ಲಿ ಪಾಲ್ಗೊಂಡರು. ಕೆಳಗಿನ ಈ ಎರಡು ವಚನಗಳು ಚೌಡಯ್ಯನವರ ವಿಚಾರಗಳನ್ನು ಅತ್ಯಂತ ಸಮರ್ಥವಾಗಿ ಹಿಡಿದಿಟ್ಟಿವೆ.

'ಕಪ್ಪನಮನೆಯಲ್ಲಿ ಸೃಷ್ಟಿಗೀಶ್ವರನುಂಬಾಗ
ಎತ್ತ ಹೋದೆವೋ ನಿಮ್ಮ ಶಾಸ್ತ್ರಂಗಳು ?
ಕೆತ್ತ ಮುಚ್ಚಳು ಬೇಡಂಗೆ ತೆಗೆಯುವಾಗ
ಇಕ್ಕಿದ ಜನ್ನಿವಾರ ಬೀಯವಾದುವು
ಮುಕ್ಕಳಿಸಿದ ನೀರ ತಂದೆಡೆ
ಎತ್ತಲಿದ್ದವು ನಿಮ್ಮ ವೇದಂಗಳು ?
ನಿಮ್ಮ ದುಃಖ ಬೇಡೆಂದಾತ ಅಂಬಿಗ ಚೌಡಯ್ಯ.' (—ಅಂ.ಚೌ.ವ. ೧೨೨)

'ಬರಿದು ಬಯಸುವ ಸೂಕರರೆಲ್ಲ ನೀವು ಕೇಳಿರೋ
ತರ್ಕ ವ್ಯಾಕರ್ಣ, ಛಂದಸ್ಸು, ನಿಘಂಟು
ವೇದಶಾಸ್ತ್ರವ ಕೇಳಿ ಓದಿ ಗಂಗೆಗೆ ಹರಿವವರನೇನೆಂಬೆ?
ಪರವಧುವೆಂಬುದನರಿಯರಲ್ಲಾ !
ಬರೆದಿರ್ದ ಪಾಪದ ಹೊಸಲಿನಲ್ಲಿ ಕಳೆವೆನೆಂಬ ಅಣ್ಣಗಳ
ಬೆಡಗು ಬೇಡೆಂದನಾತನಂಬಿಗ ಚೌಡಯ್ಯ' (—ಅಂ. ಚೌ. ವ. ೧೨೫)

ಶೋಷಣೆಗೆ ಮೂಲ ಕಾರಣ ತಿಳಿಯದ ಜನ ಸಮೂಹದಲ್ಲಿ ಅಸಮಾನತೆ, ದಾಸ್ಯಮನೋಭಾವ, ಗುಲಾಮಗಿರಿಗಳನ್ನು ಬಿತ್ತುವ ವೇದ, ಶಾಸ್ತ್ರ, ಪುರಾಣಗಳನ್ನು ಅಲ್ಲಗಳೆಯುವುದರ ಮೂಲಕ, ಜನವಾಣಿಯ ಪ್ರತೀಕವಾದ ಆಶಯಗಳನ್ನು ಹೊಂದಿದ ವಚನಗಳನ್ನು ಜನಮನದಲ್ಲಿ ಮೂಡಿಸಿದ್ದು ಚೌಡಯ್ಯ ಮೊದಲಾದ ವಚನಕಾರರ ದೊಡ್ಡ ಸಾಧನೆಯೆನ್ನಬಹುದು. ಇಷ್ಟೆಲ್ಲಾ ವಿರೋಧಗಳನ್ನು ಹೊತ್ತುಕೊಂಡೇ ವಚನ ಚಳುವಳಿ ತನ್ನ ಹೊಸ ವಿಚಾರಗಳನ್ನು ಈ ನಾಡಿನಲ್ಲಿ ಬಿತ್ತಿದ್ದು ಅತ್ಯಂತ ಮುಖ್ಯವಾದ ವಿಷಯವಾಗುತ್ತದೆ.

ಬಸವಣ್ಣ ಮೊದಲಾದ ವಚನಕಾರರಿಗಿಂತ ತೀವ್ರವಾದ ವಿಡಂಬನೆ ಚೌಡಯ್ಯನವರಲ್ಲಿದೆ. ಬಸವಣ್ಣನವರು ಸಾಮಾನ್ಯವಾಗಿ ಹೇಳಿದರೆ ಚೌಡಯ್ಯ ಕಟುವಾಗಿ ಕಿಡಿಕಾರುತ್ತಾರೆ. ಜನ ಸುಧಾರಿಸಿಕೊಳ್ಳುವಲ್ಲಿ ಬಸವಣ್ಣ ಸ್ವಲ್ಪ ರಿಯಾಯಿತಿ ತೋರಿದರೆ ಚೌಡಯ್ಯ ಇದಾವುದಕ್ಕೂ ಆಸ್ಪದ ಕೊಡದೆ ಹೋರಾಟಕ್ಕೆ ಬದ್ಧರಾಗುತ್ತಾರೆ. ಚೌಡಯ್ಯನವರಲ್ಲಿರುವ ಸಾಮಾಜಿಕ ಪ್ರಜ್ಞೆ ದಟ್ಟವಾದುದು ಮತ್ತು ತೀಕ್ಷ್ಣವಾದುದು.

ಒಂದು ಚಳುವಳಿಯ ಮುಂಚೂಣಿಯಲ್ಲಿದ್ದ ಬಸವಣ್ಣನಂತಹ ನಾಯಕ ಈ ಸಿಟ್ಟಿನಲ್ಲಿ ರಿಯಾಯಿತಿ ಕೊಡಬಹುದು. ಆದರೆ ಆ ಚಳುವಳಿಯ ಬೆನ್ನೆಲುಬಾದ ಕೆಳವರ್ಗದವರಿಂದ ಬಂದ ಚೌಡಯ್ಯನಂತಹ ದಿಟ್ಟ ವಚನಕಾರರು ವಚನ ಚಳುವಳಿಯ ಸಿದ್ಧಾಂತಗಳಿಗೆ ಬದ್ಧರಾಗಿ ಜನಸಮೂಹದ ಭಿಡೆಯನ್ನು ಲಕ್ಷಿಸದೆ ಮುಂದೆ ಬೆಳೆಯುವುದು ವಚನಕಾರರ ವೈಶಿಷ್ಟ್ಯವನ್ನು ಎತ್ತಿ ಹೇಳುತ್ತದೆ. ಅಂದಿನ ಸಮಾಜದ ಅನೇಕ ಜ್ವಲಂತ ಸಮಸ್ಯೆಗಳನ್ನೆತ್ತಿಕೊಂಡು ಚೌಡಯ್ಯ ಆ ಸಮಾಜವನ್ನು ಟೀಕಿಸುವ ಧಾಟಿಯಲ್ಲಿ ಬದಲಾವಣೆ ತರುವ ಕಳಕಳಿಯಿದೆ. ಹೊಸನಾಡ ನಿರ್ಮಿಸುವ ವಿಶಾಲ ಧೋರಣೆಯಿದೆ. ಚೌಡಯ್ಯನವರು ತಮ್ಮ ಸ್ವಾರ್ಥಕ್ಕೋಸ್ಕರ ಕಿಡಿಕಿಡಿಯಾಗುವದಿಲ್ಲ. ಸಮಾಜದ ಆರೋಗ್ಯಕರ ಬೆಳವಣಿಗೆಗೋಸ್ಕರ ಅವರು ತಮಗೆ ಅನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳುತ್ತಾರೆ. ಆದ್ದರಿಂದ ಚೌಡಯ್ಯನವರ ಸಮಾಜ ವಿಡಂಬನೆಗೆ ಒಂದು ಅರ್ಥವಿದೆ, ಸಿದ್ಧಾಂತವಿದೆ.

ಈ ಲೇಖನದಲ್ಲಿ ಉಲ್ಲೇಖಿಸಿದ ವಚನಗಳನ್ನು ಪ್ರೊ. ಬಿ. ಆರ್. ಸುರಪುರ ಅವರು ಸಂಪಾದಿಸಿದ 'ಅಂಬಿಗ ಚೌಡಯ್ಯನ ವಚನಗಳು' ಸಂಗ್ರಹದಿಂದ ಆಯ್ದುಕೊಂಡಿದೆ.

ನಾಗರಾಜನ ಪುಣ್ಯಾಸ್ರವ—ಒಂದು ವಿಮರ್ಶೆ

ಸಗರ ಕೃಷ್ಣಾಚಾರ್ಯ

‘ದೇಜಗೌ’ ಅವರ ಅಭಿನಂದನಾ ಗ್ರಂಥವಾದ ‘ರಸಪಷ್ಟಿ/ಸೃಷ್ಟಿ’ಯಲ್ಲಿ ಮಾನ್ಯ ರಂ. ಶ್ರೀ. ಮುಗಳಿಯವರ, ‘ನಾಗರಾಜನ ಪುಣ್ಯಾಸ್ರವ’ವೆಂಬ ವಿಮರ್ಶಾತ್ಮಕ ಲೇಖನವೊಂದು ಪ್ರಕಟವಾಗಿದೆ. ಅದರಲ್ಲಿ ಅವರು ಕವಿಯ ದೇಶದ ವಿಚಾರವನ್ನೆತ್ತಿ ಈ ಕೆಳಗಿನಂತೆ ಬರೆದಿದ್ದಾರೆ.

“ಕವಿಕಾಲದೇಶ ವಿಚಾರದಲ್ಲಿ ಮಾತ್ರ ಚರ್ಚಿಸಬೇಕಾದ ಒಂದೆರಡು ಮಹತ್ವದ ಅಂಶಗಳಿವೆ. ನಾಗರಾಜ, ತನ್ನ ಮನೆತನದ ವಿಷಯ ಹೇಳುತ್ತ, 1–27ನೆಯ ಪದ್ಯದಲ್ಲಿ ‘ಸೇಡೆಂಬ ಭವ್ಯಪುರ’ವನ್ನು ವರ್ಣಿಸಿದ್ದಾನೆ. ಕವಿಚರಿತೆಕಾರರು ಇದನ್ನು ‘ಸೇಚೆಂಬಪುರ’ವೆಂದು ಭಾವಿಸಿದ್ದಾರೆ. ಇದನ್ನು, ‘ಸೇಡೆಂದು’ ಸಂಪಾದಕರು ತಿದ್ದಿರುವುದು ಯೋಗ್ಯವಾಗಿದೆ. (ಕಮಲಾ ಹಂಪನಾ, ನಾಗರಾಜ ಪ್ರ. 28, ಪು. 39, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ) ಆದರೆ ಸೇಡಿಂಬ ಅಥವಾ ಸೇಡಂ ಗುಲ್ಬರ್ಗ ಜಿಲ್ಲೆಯ ತಾಲ್ಲೂಕು ಕೇಂದ್ರ, ಮಾಳಖೇಡಕ್ಕೆ ಹತ್ತು ಮೈಲಿ ದೂರದಲ್ಲಿದೆ. ಅಲ್ಲಿರುವ ದೇವಾಲಯಗಳ ಮತ್ತು ಶಾಸನಗಳ ಸಂಖ್ಯಾ ಪ್ರಮಾಣ ಅದರ ಪ್ರಾಚೀನ ವೈಭವವನ್ನು ನೆನಪಿಗೆ ತರುತ್ತದೆ.” ಎಂದು ಮುಂತಾಗಿ ಹೇಳಿ, “ಪ್ರತಿಯೊಂದು ಅಧಿಕಾರದ ಅಂತ್ಯದಲ್ಲಿ ಬರುವ ಸಮಾಪ್ತಿರೂಪದ ಗದ್ಯದಲ್ಲಿ ‘ಮಾಸಿವಾಳದ ನಾಗರಾಜ’ ಎಂಬ ಉಲ್ಲೇಖ ಬರುತ್ತದೆ. ‘ಸಗರ’ವೆಂಬ ನಗರದ ಜನ ಪುಣ್ಯಾಸ್ರವ ವನ್ನು ಕನ್ನಡದಲ್ಲಿ ಹೇಳುವಂತೆ ಕೇಳಿಕೊಳ್ಳಲಾಗಿ ತಾನದನ್ನು ಕನ್ನಡದಲ್ಲಿ ರಚಿಸು ವುದಾಗಿ ತಿಳಿಸುತ್ತಾನೆ; ಎಂದು ಸಂಪಾದಕರು ಹೇಳಿದ ಮಾತುಗಳಲ್ಲಿ ಸೇಡಿಂಬ ಅಥವಾ ಸೇಡಂ, ಎಂದರೆ ನಾಗರಾಜ ವರ್ಣಿಸಿದ, ‘ಸೇಡೆಂಬ ಭವ್ಯಪುರಂ’ ಎಂಬ ಸಮೀಕರಣ ಸರಿಯಲ್ಲವೆಂದು ನಮಗೆ ತೋರುತ್ತದೆ. ಯಾಕೆಂದರೆ ಸೇಡಂದ ಹತ್ತಿರ ಮಾಸಿವಾಳವೆಂಬ ಊರಿಲ್ಲ. ಅದೇ ‘ಸೇಡಬಾಳ’ವೆಂದು ಹೆಸರಾದ ಅಥಣಿ ತಾಲೂಕಿಗೆ ಸಂಬಂಧಪಟ್ಟ ಊರಿನ ಹತ್ತಿರ ಅದಕ್ಕೆ ತೀರ ಹತ್ತಿರ ಇದ್ದು ಮಿರ್ಜಿ ತಾಲೂಕಿಗೆ ಸೇರಿದ ‘ಮಾಸ್ಯಾಳ’ ಎಂಬ ಹೆಸರಿನ ಊರಿದೆ. ಇವೆರಡರಲ್ಲಿಯೂ ಈಗ ಜೈನ ಸಮಾಜವಿದೆ.

ಇನ್ನು ‘ಸಗರ’ವೆಂಬ ನಗರ ಯಾವುದು ? 1-32ರಲ್ಲಿ ‘ಎಂದತಿ ಸಗರದ ವಿನೆಯಾವೃಂದಂ ಕೊಂಡಾಡಿ ಪೇಳ್ವುದು.’ ಎಂದಿದ್ದರೆ, ‘ಮುನ್ನಂ ಸಂಸ್ಕೃತ

ದಿಂದತ್ತ್ಯನ್ನತಿಪತ್ತಿರಲು ಸಗರದ ನಗರಂ ಕನ್ನಡಿಸಿಸೆ' ಎಂದು, 1–33ರಲ್ಲಿದೆ. ಎರಡನೆಯ ಅವತರಣಿಕೆಯಲ್ಲಿ 'ನಗರಂ' ಎಂದರೆ ನಗರ ಅಥವಾ ಪಟ್ಟಣವೆಂದು ಅರ್ಥವಿರಲಾರದು. ಶಾಸನ ಸಾಹಿತ್ಯದಿಂದ ತಿಳಿಯುವಂತೆ 'ನಗರ' ಎಂದರೆ ವರ್ತಕ ಅಥವಾ ವರ್ತಕ ಸಂಘ ಎಂದರ್ಥವಿರಬೇಕು. ಅಂತೂ 'ನಗರ' ಇದು ಅತಿಸಗರ ಅಥವಾ ಸಗರ ಎಂಬ ಊರಿನ ವರ್ತಕವೃಂದ ಎಂಬುದು ಸ್ಪಷ್ಟ. ಆದರೆ ಈಗ ಆ ಪರಿಸರದಲ್ಲಿರುವ ಯಾವ ಊರದು? ಎಂಬುದು ಸ್ಪಷ್ಟವಾಗಿಲ್ಲ. ಕೊಲ್ಲಾಪುರದ ಶಿಲಾಹಾರರು ತಗರಪುರವರಾಧೀಶ್ವರರೆಂದು ಕರೆದುಕೊಳ್ಳುತ್ತಿದ್ದರು. ಕೊಲ್ಲಾಪುರಕ್ಕೆ ತಗರ ಅಥವಾ ಸಗರ ಎಂಬ ಪ್ರಾಚೀನನಾಮವಿತ್ತೇನೆಂಬುದನ್ನು ಪರಿಶೀಲಿಸಬೇಕು."

ಇದು ಅವರ ವಾದವಾದರೆ ಅದಕ್ಕೆ ನನ್ನ ಉತ್ತರ ಇಂತಿದೆ.

ನಾಗರಾಜ ತನ್ನ ಮನೆತನದ ವಿಷಯ ಹೇಳುತ್ತ 'ಸೇಡಂಬ ಭವ್ಯಪುರ'ವನ್ನು ರಮ್ಯವಾಗಿ ವರ್ಣಿಸಿದ್ದುದು ಯಥೋಚಿತವಾಗಿದೆ. ಏಕೆಂದರೆ, 'ಸೇಡಂಬ', 'ಸೇಡಿಂಬ', ಇದು ರಾಷ್ಟ್ರಕೂಟರ ರಾಜಧಾನಿಯಾದ ಮಾನ್ಯಖೇಟ, ಮಳಖೇಡದ ಒಂದು ಭಾಗವಾಗಿತ್ತು. ರಾಷ್ಟ್ರಕೂಟ ದೊರೆಗಳ ಮುಖ್ಯ ಆಡಳಿತ ಕಾರ್ಯಾಲಯ (ಸೆಕ್ರೆಟೇರಿಯೆಟ್) ಇಲ್ಲಿಯೇ ಇದ್ದುದು ತಿಳಿದುಬರುತ್ತದೆ.

ಮಾನ್ಯಖೇಟವು ರಾಷ್ಟ್ರಕೂಟ ಅರಸರ ರಾಜಧಾನಿಯಾಗಿದ್ದಾಗ ಮೂವತ್ತು ಮೈಲು ಸುತ್ತಳತೆಯಷ್ಟು ವ್ಯಾಪಿಸಿತ್ತು. ಮಳಖೇಡದಲ್ಲಿ ರಾಜರ ಅರಮನೆ, ಆಸ್ಥಾನ, ಅಂತಃಪುರಗಳು ಇದ್ದುವಂತೆ. ಈ ಸೇಡಂ ಪಟ್ಟಣವೂ ಸುಪ್ರಸಿದ್ಧ ನಗರವಾಗಿದ್ದು ಕೋಟೆ, ಕೊತ್ತಲಗಳಿಂದ ಕೂಡಿದ್ದು ವೀರರ ನಗರವಾಗಿತ್ತೆಂದು ಶಾಸನಗಳು ವರ್ಣಿಸುತ್ತವೆ.

ಮಾನ್ಯಖೇಟವು ರಾಷ್ಟ್ರಕೂಟ ಅರಸರ ರಾಜಧಾನಿಯಾಗಿದ್ದಾಗ ಮೂವತ್ತು ಮೈಲಿ ಸುತ್ತಳತೆಯಷ್ಟು ವ್ಯಾಪಿಸಿತ್ತು. ಅಷ್ಟೇ ಅಲ್ಲ, ಅದು ಹಿಂದೆ ಜೈನಧರ್ಮಕ್ಕೆ ಕೇಂದ್ರವಾಗಿದ್ದಂತೆ ತಿಳಿಯುತ್ತದೆ. ಇಲ್ಲಿ ಹದಿನಾಲ್ಕು ಜಿನಾಲಯಗಳಿದ್ದುವಂತೆ. ಜೈನಮತದ ನಾಮಾಂಕಿತರಾದ ಕುಂದಕುಂದಾಚಾರ್ಯರು, ಅಕಳಂಕಜಿನಸೇನಭಟ್ಟಾರಕರ- ಇಲ್ಲಿ ಇದ್ದರೆಂದು ಹೇಳುತ್ತಾರೆ. ಇಲ್ಲಿ ನೇಮಿಚಂದ್ರ ಸಿದ್ಧಾಂತ ಭಟ್ಟಾರಕರ ಪೀಠವಿತ್ತು. ಈ ಮಾತನ್ನು ಶ್ರೀ ಕೊರಟಿ ಶ್ರೀನಿವಾಸರಾಯರು ತಮ್ಮ 'ಶ್ರೀ ಜಯತೀರ್ಥರು' ಎಂಬ ಗ್ರಂಥದಲ್ಲಿ ವಿವರವಾಗಿ ತಿಳಿಸಿದ್ದಾರೆ. ಅಲ್ಲದೆ ಹಿಂದಿನಿಂದಲೂ, ಗ್ರಂಥಗಳಲ್ಲಿ, ಜನರ ಬಾಯಲ್ಲಿ 'ಮಾನ್ಯಖೇಟ' ಮತ್ತು 'ಸೇಡಿಂಬ' ಎಂಬ ಹೆಸರು ಖ್ಯಾತಿ ಪಡೆದಿವೆ. ಅಂದಮೇಲೆ ಅದು ಈಗಿನ 'ಸೇಡಂ' ತಾಲ್ಲೂಕು ಸ್ಥಳದ ವಿನಹ ಮತ್ತಾವುದೂ ಆಗಲಾರದು.

ಇನ್ನು ಮಾಸಿವಾಳದ ವಿಷಯ. ಸೇಡಂ ತಾಲೂಕಿನಲ್ಲಿ 'ಮಾಸಿವಾಳ' ಅಥವಾ 'ಮಾಸ್ಯಾಳ' ಇದ್ದಿರಬಹುದು. ಈಗ ಅದು ಅಸ್ತಿತ್ವದಲ್ಲಿದೆಯೊ ಇಲ್ಲವೊ ಎಂಬುದನ್ನು ತಿಳಿದುಕೊಳ್ಳಬೇಕು. ಒಂದು ವೇಳೆ ಸೇಡಂದ ಸಮೀಪದಲ್ಲಿ ಮಾಸಿವಾಳ ಅಥವಾ ಮಾಸ್ಯಾಳ ಇಲ್ಲದಿದ್ದಲ್ಲಿ ನಾಗರಾಜ ಅಫ್‌ಜಲ್‌ಪುರ ತಾಲ್ಲೂಕಿನಲ್ಲಿದ್ದ ಮಣೂರ ಹತ್ತಿರದ ಮಾಸ್ಯಾಳದವನಾಗಿರಲೂಬಹುದು. ಏಕೆಂದರೆ ಈ ಮಾಸ್ಯಾಳ ವಿಜಿ೯ ತಾಲ್ಲೂಕಿಗೆ ಸೇರಿದ ಮಾಸ್ಯಾಳಕ್ಕಿಂತ ತೀರ ಹತ್ತಿರವಾಗಿದೆ. ಅಲ್ಲದೆ ಈ ಮಾಸ್ಯಾಳ ಒಂದು ಕಾಲಕ್ಕೆ ಸಗರ ನಾಡಿನ ಭಾಗವೂ ಆಗಿತ್ತು. ಇನ್ನು 'ಸಗರ'ವೆಂಬ ನಗರದ ಜನ ಪುಣ್ಯಾಸ್ರವವನ್ನು ಕನ್ನಡದಲ್ಲಿ ಹೇಳುವಂತೆ ಕೇಳಿಕೊಂಡದ್ದನ್ನು ಕವಿ ತನ್ನ ಕಾವ್ಯದಲ್ಲಿ ತಿಳಿಸಿದ್ದಾನೆ. ಇದೇ ಮಾತನ್ನೇ ಸಂಪಾದಕರೂ ಒಪ್ಪಿದ್ದಾರೆ. ಇಲ್ಲಿ 'ಸಗರನಗರ' ಸಗರನಾಡಿನ ಸುಪ್ರಸಿದ್ಧ ನಗರವೆಂಬುದು ಬೇರೆ ಹೇಳಬೇಕಾಗಿಲ್ಲ. ಈಗಿನ 'ಶಹಪುರ'ವೇ ಒಂದು ಕಾಲಕ್ಕೆ ಸಗರನಾಡಿನ ಮಹತ್ವದ ಮತ್ತು ಆಯಕಟ್ಟಿನ ಸ್ಥಳವಾಗಿತ್ತೆಂಬುದು ದಿ. ಕಪಟರಾಳ ಕೃಷ್ಣರಾಯರ 'ಸುರಪುರ ಇತಿಹಾಸ'ವೆಂಬ ಗ್ರಂಥದಿಂದ ತಿಳಿದುಬರುತ್ತದೆ. ಆಗ ಇದಕ್ಕೆ 'ಸಗರ'ವೆಂಬ ಹೆಸರೇ ಪ್ರಸಿದ್ಧವಾಗಿತ್ತು.

ನಾನು ಸಗರನಾಡಿನ ಸಗರದಲ್ಲಿಯೇ (ಈಗಿನ ಶಹಪುರದಲ್ಲಿಯೇ) ಹುಟ್ಟಿ ಬೆಳೆದವನು. ಸಗರ ನಗರಕ್ಕೂ ಸೇಡಿಂಬಪುರಕ್ಕೂ (ಈಗ ಅವು ಶಹಪುರ ಮತ್ತು ಸೇಡಂ ತಾಲೂಕುಗಳಾಗಿವೆ.) ದೂರದ ಅಂತರವೂ ಇಲ್ಲ. ಸುಮಾರು ನಾಲ್ವತ್ತು ಮೈಲು. ಕವಿ ತನ್ನ ಹುಟ್ಟೂರಾದ ಮಾಸಿವಾಳದಿಂದ ಸೇಡಿಂಬವೆಂಬ ಭವ್ಯ ಪುರಕ್ಕೆ ಬಂದು ನಲೆಸಿರಬೇಕು, ಇಲ್ಲವೆ ಸೇಡಿಂಬ ಪುರದೊಂದಿಗೆ ಹೆಚ್ಚಿನ ಸಂಪರ್ಕವಿಟ್ಟು ಕೊಂಡಿರಬೇಕು. ಆ ಸಮಯದಲ್ಲಿ ರಾಜಕೀಯ ವೈಭವದಿಂದಲೂ ಸಾಂಸ್ಕೃತಿಕ ಅಗ್ಗಳಿಕೆಯಿಂದಲೂ ಕೂಡಿದ ಸಗರ ನಗರದ ಜನರು ಆತನಿಗೆ, ಪುಣ್ಯಾಸ್ರವ ಕಾವ್ಯವನ್ನು ರಚಿಸಲು ಕೇಳಿಕೊಂಡಿರಬೇಕು. 'ಸಗರದ ವಿನೆಯಾ ವೃಂದಂ ಕೊಂಡಾಡಿ ಪೇಳ್ವುದು.' ಎಂಬ ಮಾತೂ, 'ಮುನ್ನಂ ಸಂಸ್ಕೃತದಿಂದುನ್ನತಿವೆತ್ತಿರಲು ಸಗರದ ನಗರಂ ಕನ್ನಡಿಸೆನೆ' ಎಂಬ ಮಾತೂ, ಸಗರ ನಾಡಿನ ಸುಸಂಸ್ಕೃತ ಹಾಗೂ ವೈಭವೋಪೇತವಾದ ನಗರವಾಗಿದ್ದ 'ಸಗರ'ವನ್ನು ಕುರಿತೇ ಹೇಳುತ್ತದೆ. 'ವಿನೆಯಾವೃಂದಂ' ಅಂದರೆ 'ಬನಿಯಾ ಸಮೂಹ' ಅರ್ಥಾತ್ 'ವ್ಯಾಪಾರಿಗಳ ಸಂಘ' ಮತ್ತು 'ಸಗರದ ನಗರಂ' ಎಂಬಲ್ಲಿಯೂ, 'ಸಗರದ ವರ್ತಕರು' ಎಂದೇ ಅರ್ಥವಾಗುತ್ತದೆ. ಒಂದೆಡೆ 'ನಗರ' ವೆಂಬುದಕ್ಕೆ 'ನಗರವೆಂತಲೂ, ಇನ್ನೊಂದೆಡೆ' ವ್ಯಾಪಾರಿಗಳು, ಎಂತಲೂ ಅರ್ಥೈಸಿದ್ದು ಕವಿಯ ಶಬ್ದಾಲಂಕಾರವನ್ನು ವ್ಯಕ್ತಗೊಳಿಸುತ್ತದೆ, ಈಗಿನ ಶಹಪುರ ದಲ್ಲಿಯೂ ಜೈನರೇ ಸುಪ್ರಸಿದ್ಧ ವರ್ತಕರಾಗಿದ್ದಾರೆ.

ಇನ್ನು ಶಹಪುರದ ಹತ್ತಿರವೇ ಇದ್ದ ಬೆಟ್ಟದ ಮೇಲ್ಭಾಗದಲ್ಲಿ 'ಮಂದಾಕಿನಿ' ತೀರ್ಥವಿದೆ. ಆ ತೀರ್ಥವನ್ನು ಕುರಿತು ವರ್ಣಿಸುವ ಪುರಾಣದ (ಮಂದಾಕಿನಿ ಮಹಾತ್ಮ್ಯದ) ಪ್ರಾರಂಭದ ಶ್ಲೋಕ ಇಂತಿದೆ.

"ಭೀಮಾ ದಕ್ಷಿಣದಿಗ್ಭಾಗೇ ಪರ್ವತೋಽಸ್ತಿ ಮನೋರಮಃ ॥ ಸಗರಾದ್ರಿರಿತಿ ಖ್ಯಾತಃ ಹೇಮಕೂಟಸ್ಯ ಸೋದರಃ॥ ಇದರರ್ಥ, ಭೀಮಾನದಿಯ ದಕ್ಷಿಣ ದಿಗ್ಭಾಗದಲ್ಲಿ ರಮ್ಯವಾದ ಪರ್ವತವಿದೆ. ಆ ಪರ್ವತವು 'ಸಗರಾದ್ರಿ'ಎಂದು ಪ್ರಸಿದ್ಧಿ ಪಡೆದಿದೆ. ಅದು ಹೇಮಕೂಟದ ಸೋದರನಂತಿದೆ ಎಂದು. 'ಸಗರ'ದ ಅಸ್ತಿತ್ವಕ್ಕೆ ಇದು ಪೌರಾಣಿಕ ಹಿನ್ನೆಲೆಯಾಗಿದೆ.

ನಮ್ಮ ಮನೆತನದ ಪೂರ್ವಜರಲ್ಲೊಬ್ಬರಾದ ಶ್ರೀ ಪ್ರದ್ಯುಮ್ನಾಚಾರ್ಯರು ಉತ್ತರಾದಿಮಠದ ಪೀಠವನ್ನಲಂಕರಿಸಿ ಶ್ರೀವೇದನಿಧಿತೀರ್ಥರೆಂಬ ಹೆಸರಿನಿಂದ ಪ್ರಖ್ಯಾತರಾಗಿದ್ದಾರೆ. ಅವರು ಶ್ರೀ ಮಧ್ವಾಚಾರ್ಯರ ನಂತರ ಹದಿನೇಳನೆಯ ಪೀಠಸ್ಥರು. ನಮ್ಮ ಪೂರ್ವಜರಲ್ಲೊಬ್ಬರು ಅವರನ್ನು ಈ ರೀತಿ ಪ್ರಾರ್ಥಿಸಿದ್ದಾರೆ.

ಶ್ರೀಮದ್ಭೀಮಾಭಿಧಾಯಾಃ ಸುಧುನಸ ನಿಕರೈರರ್ಚಿತಾಯಾಃ ಸುನದ್ಯಾಃ।
ಆಶಾಯಾಂ ದಕ್ಷಿಣಾಯಾಂ ಸ್ಥಿತ ಸುರ ಸರಿದಾವಾಸ ಭೂತೋಽದ್ರಿ ರಾಜಃ ॥
ತಸ್ಯಾಧೋದೇಶ ಸಂಸ್ಥೆ ಸಗರ ಪುರವರೇಽಧಿಷ್ಠಿತಾನ್ ವೇದ ನಿಧ್ಯೇ ।
ತ್ಯಾಖ್ಯಾತಾನ್ ಬ್ರಹ್ಮನಿಷ್ಠಾನ್ಯತಿಕುಲತಿಲಕಾನ್ ಮದ್ಗುರೂನ್ ಸಂಪ್ರಪದ್ಯೇ ।

ಈ ಶ್ಲೋಕದಲ್ಲಿ ಭೀಮಾನದಿಯ ದಕ್ಷಿಣ ದಿಕ್ಕಿಗೆ ಕಂಗೊಳಿಸುವ ವಿಶಾಲ ಬೆಟ್ಟದ (ಸಗರಾದ್ರಿಯ) ಕೆಳಭಾಗದಲ್ಲಿದ್ದ ಸಗರಪುರದಲ್ಲಿ ವಾಸವಾಗಿದ್ದ ಬ್ರಹ್ಮನಿಷ್ಠರೂ, ಯತಿಕುಲ ತಿಲಕರೂ, ನಮ್ಮ ಮನೆತನದ ಪ್ರಖ್ಯಾತ ಗುರುಗಳೂ ಆದ ಶ್ರೀವೇದ ನಿಧಿ ತೀರ್ಥರಿಗೆ ಗೌರವ ಪೂರ್ವಕ ನಮಸ್ಕರಿಸುತ್ತೇನೆ.' ಎಂದು ಹೇಳಲಾಗಿದೆ. ಅಂದ ಮೇಲೆ, ಸಗರಪುರ, ಸಗರ ನಗರ, ಸಗರ, ಎಂಬುದೊಂದು ಪ್ರಸಿದ್ಧ ಪಟ್ಟಣ ವಿತ್ತೆಂಬುದು ಈ ಚಾರಿತ್ರಿಕ ಹಿನ್ನೆಲೆಯಿಂದಲೂ ಸ್ಪಷ್ಟವಾಗುತ್ತದೆ.

ಈ ಪಟ್ಟಣವು ಮೊಗಲರ ದಂಡಯಾತ್ರೆಯಲ್ಲಿ ಕೊಳ್ಳೆ, ಸುಲಿಗೆ ಮತ್ತು ಚಿತ್ರಹಿಂಸೆಗೆ ಒಳಗಾಯಿತು,–ಎಂಬುದು ಇತಿಹಾಸ ಪ್ರಸಿದ್ಧವಾದ ಸಂಗತಿ. ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯಲ್ಲಿ 'ಸಗರನಾಡಿನ ಶಿವಶರಣರು' ಎಂಬ ಚಿಕ್ಕ ಹೊತ್ತಿಗೆ ಪ್ರಕಟವಾಗಿದೆ. ಅದನ್ನು ಶ್ರೀ. ಎ. ಶಿವಾನಂದ ಅವರು ರಚಿಸಿದ್ದಾರೆ. ಅದರಲ್ಲಿ ಮೊದಲಿಗೇ ಬರುವ, 'ಸಗರನಾಡು–ಚಾರಿತ್ರಿಕ ಹಿನ್ನೆಲೆ,' ಎಂಬ ಭಾಗವನ್ನು ನೋಡಬಹುದು. ಅದರಲ್ಲಿ, "ಇಂದಿನ ಕಲಬುರ್ಗಿ ಅಥವಾ ಗುಲಬರ್ಗಾ ಜಿಲ್ಲೆಯ ಶಹಪುರ ತಾಲೂಕಿನಲ್ಲಿ ಸಗರವೆಂಬ ಊರಿದೆ. ಅದು ಹಾಳು ಬಿದ್ದುದರಿಂದ 'ಹಳೆಸಗರ'ವೆಂಬ ಹೆಸರಾಗಿದ್ದರೂ ಅತ್ಯಂತ ಪುರಾತನ

ಕಾಲದಲ್ಲಿ ಒಂದು ನಾಡಿನ ಪ್ರಮುಖ ಪಟ್ಟಣವಾಗಿದ್ದು ಕರ್ನಾಟಕದ ಇತಿಹಾಸದಲ್ಲಿ ಅದು ಸಗರನಾಡೆಂದು ಪ್ರಸಿದ್ಧವಾಗಿದೆ. ಸಗರನಾಡು ಬಹುಕಾಲದಿಂದಲೂ ಕರ್ನಾಟಕದಲ್ಲಿ ಬೆಳೆದು ಬಂದ ಜೈನ, ಬೌದ್ಧ, ವೈಷ್ಣವ, ಶೈವ, ಶಾಕ್ತ ಹಾಗೂ ವೀರಶೈವ ಮೊದಲಾದ ಧರ್ಮ ಪಂಥಗಳಿಗೆ ಅದು ತನ್ನ ಉದಾರಾಶ್ರಯವನ್ನಿತ್ತಿದೆ. ಇಂದಿಗೂ ಈ ನಾಡಿನ ಹಳ್ಳಿಹಳ್ಳಿಗಳಲ್ಲಿ ಪ್ರಾಚೀನ ಅವಶೇಷಗಳು ಅಸಂಖ್ಯಾತವಾಗಿರುವುದು ಕಂಡುಬರುತ್ತದೆ.'' ಎಂತಲೂ, "ಸಗರ ನಾಡು ಗಂಗ, ಕದಂಬ, ರಾಷ್ಟ್ರಕೂಟ, ಚಾಳುಕ್ಯರ ಕಾಲದಿಂದಲೂ ಅಸ್ತಿತ್ವದಲ್ಲಿದ್ದು ಬಾದಾಮಿ, ಹಾಗೂ ಕಲ್ಯಾಣ ಚಾಳುಕ್ಯ ಮತ್ತು ಯಾದವ, ಹೊಯ್ಸಳ ದೊರೆಗಳ ಕಾಲದಲ್ಲಿ ಒಂದು ನಿರ್ದಿಷ್ಟ ಸ್ವರೂಪವನ್ನು, ತನ್ನದೆ ಆದ ಗಡಿ–ಗೆರೆಗಳನ್ನೂ ಪಡೆದುಕೊಂಡುದು ಕಂಡುಬರುತ್ತದೆ.'' ಎಂಬುದಾಗಿಯೂ ವಿವರಿಸಿ, ಆ ತರುವಾಯ ವಿಜಯನಗರದ ಪ್ರಸಿದ್ಧ ದೊರೆಗಳಾದ ಪ್ರೌಢದೇವರಾಯ(ಎರಡನೆಯದೇವರಾಯ) ಅವನ ಮಹಾಮಂತ್ರಿ ಲಕ್ಕಣದಂಡೇಶ, ಕೃಷ್ಣದೇವರಾಯ ಹಾಗೂ ಅಳಿಯ ರಾಮರಾಯ ಮೊದಲಾದವರು ಈ ನಾಡನ್ನು ಕೊನೆಯವರೆಗೂ ತಮ್ಮ ಆಧೀನದಲ್ಲೇ ಇಟ್ಟುಕೊಂಡು ಬಂದರು.ಆದರೂ ಮುಸ್ಲಿಮ್ ಬಾದಶಹರೊಡನೆ ಇದಕ್ಕಾಗಿ ಅನೇಕ ಸಲ ಕಾಳಗಗಳು ನಡೆದವು. ಕೃಷ್ಣದೇವರಾಯನು ಒಮ್ಮೆ ಸಗರ ಕೋಟೆಯಲ್ಲಿ ಯುದ್ಧ ಮಾಡಿದ ಸಂಗತಿಯನ್ನು ಇತಿಹಾಸಕಾರರಾದ ಶ್ರೀ ನೀಲಕಂಠಶಾಸ್ತ್ರಿಯವರು ವಿಶದಪಡಿಸಿದ್ದಾರೆ. ಅಳಿಯ ರಾಮರಾಯನಿಗಂತೂ 'ಸಗರ ಸಂಕ್ರಮಣರಾಯ' ಎಂಬ ಹೆಸರು ಅವನ ಬಿರುದಾವಳಿಗಳಲ್ಲಿ ಒಂದಾಗಿತ್ತೆಂಬುದನ್ನು ಅನೇಕ ಕೈಫಿಯತ್ತುಗಳಲ್ಲಿ ಹೇಳಲಾಗಿದೆ." ಎಂದು ಉಲ್ಲೇಖವಾಗಿದ್ದುದು ಗಮನಾರ್ಹ ಸಂಗತಿಯಾಗಿದೆ. ಅಲ್ಲದೆ ಹಿಂದುಸ್ಥಾನದ ಹಿರಿಯ ಸಮ್ರಾಟ ಮೊಗಲ ಚಕ್ರವರ್ತಿ ಔರಂಗಜೇಬನು ಒಮ್ಮೆ ಸಗರ ಕೋಟೆಗೆ ಮುತ್ತಿಗೆ ಹಾಕಿದಾಗ ಹಿಂದೂ ಪ್ರಜೆಗಳ ಶೌರ್ಯ-ಸಾಹಸ ಯುದ್ಧ ಪ್ರಾವೀಣ್ಯಗಳಿಗೆ ಶರಣಾಗತನಾಗಬೇಕಾದ ಪ್ರಸಂಗ ಬಂದದ್ದೂ ಸಂಸ್ಮರಣೀಯ ಸಂಗತಿಯಾಗಿದೆ. ಇವುಗಳ ಮೇಲಿಂದ ಮಾನ್ಯ ರಂ.ಶ್ರೀ. ಮುಗಳಿಯವರು ಎತ್ತಿದ, 'ಇನ್ನು ಸಗರವೆಂಬ ನಗರ ಯಾವುದು' ಎಂಬ ಆಕ್ಷೇಪಕ್ಕೆ ಉತ್ತರ ದೊರೆತಂತಾಯಿತು. ನಾನಂತೂ ಮೂವತ್ತು ವರ್ಷಗಳ ಹಿಂದೆಯೇ 'ಸಗರ ನಾಡಿಗೆ ಬಾ' ಎಂಬ ಕವನವೊಂದನ್ನು ಬರೆದು ಸಗರ ನಾಡಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಅದರಲ್ಲಿ ವರ್ಣಿಸಿದ್ದೇನೆ. ಅದು ಹಿಂದೆಯೇ 'ಮಾಸ್ತಿ'ಯವರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ 'ಜೀವನ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿದೆ. ಕೃಷ್ಣಾ ಮತ್ತು ಭೀಮಾ ನದಿಯ ಮಧ್ಯ ಭಾಗವೇ ಸಗರ ನಾಡಾಗಿತ್ತೆಂಬುದು ಎಂದಿನಿಂದಲೂ ಗೊತ್ತಿದ್ದ ಸಂಗತಿ. 'ಸಗರ ಸಾವಿರ ಹಳ್ಳಿ, ಏಕ ದೋರನಹಳ್ಳಿ' ಎಂಬುದು ಈಗಲೂ ನಮ್ಮ ಹಳ್ಳಿಗರ ಬಾಯಲ್ಲಿದೆ. ಬಹುಶಃ ಇದರರ್ಥ 'ಸಗರನಾಡು' ಸಾವಿರ ಹಳ್ಳಿಗಳಿಂದ ಕೂಡಿದ ನಾಡು ಎಂಬುದಾಗಿರಬಹುದು. ಇಲ್ಲವೆ ಸಗರನಾಡಿನ

ಸಾವಿರ ಹಳ್ಳಿ ಒಂದು ಕಡೆಯಾದರೆ, ದೋರನಹಳ್ಳಿಯೇ ಒಂದು ಕಡೆ, ಎಂದು ವ್ಯಂಗ್ಯವಾಗಿ ನುಡಿದ ಮಾತೂ ಆಗಿರಬಹುದು. ಒಟ್ಟಿನಲ್ಲಿ ಸಗರ ನಾಡು, ಸಾವಿರ ಇಲ್ಲವೆ ಸಾವಿರದ ಒಂದು ಹಳ್ಳಿಗಳ ನಾಡಾಗಿತ್ತೆಂಬುದು ನಿರ್ವಿವಾದ. ಇತಿಹಾಸವೂ ಇದನ್ನೇ ಸಾರುತ್ತದೆ. ಅನೇಕ ಕಾವ್ಯಗಳಲ್ಲಿಯೂ ಈ ಹೆಸರಿನ ಉಲ್ಲೇಖವಿದೆ. ಮರಾಠಿ ಮತ್ತು ತೆಲುಗು ಕಾವ್ಯ ಮತ್ತು ಚರಿತ್ರೆಗಳಲ್ಲಿಯೂ ಸಗರ ನಾಡಿನ ಹೆಸರು ಬಂದಿರುವುದು ಹೆಚ್ಚಿನ ಗಮನವನ್ನು ಸೆಳೆಯುವ ಸಂಗತಿ. ಆದಕಾರಣ ಮಾನ್ಯ ಶ್ರೀ ಮುಗಳಿಯವರು, ಸೇಡಂಬವನ್ನು 'ಸೇಡ ಬಾಳಕ್ಕೂ' 'ಸಗರ'ವನ್ನು 'ನಗರ', 'ತಗರ' ಎಂದು ಭಾವಿಸಿ, ಕೊಲ್ಲಾಪುರಕ್ಕೆ ಹೋಲಿಸಿದ್ದು ಕೇವಲ ಊಹೆಯಾದೀತೆಂಬುದು ನನ್ನ ನಮ್ರ ಅಭಿಪ್ರಾಯ.

ಕಾವ್ಯದಲ್ಲಿಯೇ 'ಸಗರ' ವೆಂಬ ನಗರದ ಜನ' ಎಂದು ಸ್ಪಷ್ಟವಾಗಿ ಹೇಳಿಕೊಂಡಿದ್ದರಿಂದ ಅದು 'ಸಗರ'ಕ್ಕೇ ಅನ್ವಯವಾಗುತ್ತದೆಯೇ ವಿನಹ 'ನಗರ' ವೆಂಬುದೇ ಪ್ರತ್ಯೇಕ ಊರಾಗಿರುವುದು ಸಾಧ್ಯವಿಲ್ಲ; ಇಲ್ಲಿ ಸಾಧುವೂ ಅಲ್ಲ. ಅಲ್ಲದೆ ಮಾನ್ಯ ಶ್ರೀ ಮುಗಳಿಯವರು ಎಲ್ಲಕ್ಕೂ ಮುಖ್ಯವಾಗಿ 'ಸಗರ ನಗರ'ವನ್ನೇ ಗುರುತಿಸಲು ಸಾಧ್ಯವಾಗದೇ ಹೋಗಿ ಅದನ್ನು ಪ್ರಶ್ನಾರ್ಥಕ ಚಿಹ್ನೆಯಲ್ಲಿರಿಸಿದ್ದಾರೆ. ನಾನಿಲ್ಲಿ ಸಗರವನ್ನು ಐತಿಹಾಸಿಕ ಮತ್ತು ಚಾರಿತ್ರಿಕ ಸಂಗತಿಗಳಿಂದ ಗುರುತಿಸಿದ್ದೇನೆ. ಸೇಡಿಂಬಕ್ಕೂ, ಸಗರಕ್ಕೂ ಹತ್ತಿರವಿದ್ದುದನ್ನು ಎತ್ತಿ ತೋರಿಸಿದ್ದೇನೆ. ಮತ್ತು ಮಾಸ್ಯಾಳ ಗ್ರಾಮದ ಉಲ್ಲೇಖವನ್ನೂ ಮಾಡಿದ್ದೇನೆ. ಇವು ಎಲ್ಲ ಊರುಗಳು ಒಂದಕ್ಕೊಂದು ಹತ್ತಿರವಾಗಿದ್ದುದನ್ನು ಐತಿಹಾಸಿಕ ವಿವರಗಳೊಂದಿಗೆ ಸ್ಪಷ್ಟಪಡಿಸಿದ್ದೇನೆ. ಕಾರಣ ನಾಗರಾಜ ಮಾಸ್ಯಾಳದಲ್ಲಿ ಹುಟ್ಟಿ ಬೆಳೆದರೂ ದೊಡ್ಡವನಾದ ಮೇಲೆ ರಾಜಾಶ್ರಯದ ಆಸೆಯಿಂದಲೋ ಅಥವಾ ಇನ್ನಾವ ಕಾರಣದಿಂದಲೋ ಸೇಡಿಂಬಪುರದಲ್ಲಿಯೇ ಇದ್ದುಕೊಂಡು ಸಗರ ನಗರದ ಜನರ ಇಚ್ಛೆಯಂತೆ ಕಾವ್ಯ ರಚಿಸಿರಬೇಕೆಂಬುದು ಸುಸ್ಪಷ್ಟ. ಇಲ್ಲಿ ಇನ್ನೊಂದು ವಿಷಯ ಸ್ಪಷ್ಟಪಡಿಸಬೇಕಾದುದು ಅಗತ್ಯ. ಹಿಂದಿನ 'ಸಗರ ನಗರ' ಮೊಗಲ ಚಕ್ರವರ್ತಿಯ ಕಾಲದಲ್ಲಿ ಹಾಳಾಗಿ ಹೋದನಂತರ, ಹಾಳಾಗಿ ಉಳಿದ ಊರೇ ಈಗಲೂ ಶಹಪುರದ ಹತ್ತಿರ 'ಹಳೆಸಗರ' ವೆಂಬ ಹೆಸರಿನಿಂದ ಉಳಿದುಕೊಂಡಿದೆ. ಹಾಳಾದ ಭಾಗದ ಕೆಲವರು ಬೆಟ್ಟದ ಆಚೆ ಬೇರೊಂದು ಊರು ಕಟ್ಟಿಕೊಂಡು ನೆಲೆಸಿದಂತೆ ತೋರುತ್ತದೆ. ಅದೇ ಈಗ 'ಸಗರ' (ಹೊಸ) ಸಗರವೆಂದು ಹೆಸರು ಪಡೆದಿದೆ. ಹಾಳಾದ ಭಾಗ ಆದಿಲ್‌ಶಾಹೀ ಅರಸರ ಕಾಲಕ್ಕೆ 'ಶಹಪುರ'ವಾಗಿದೆ. ಇವು ಮೂರರೂ ಈಗ ಅಸ್ತಿತ್ವದಲ್ಲಿವೆ.

ವಿದ್ಯಾರ್ಥಿ ಗ್ರಂಥಾಲಯ ಹಾಗೂ ಬೋಧಕ ವರ್ಗ

ಯನ್. ಬಿ. ಪಾಂಗಣ್ಣಾಯ

ನಮ್ಮ ದೇಶದಲ್ಲಿ ಶಿಕ್ಷಣ ಬೋಧನಾ ಪ್ರಧಾನ ಎನ್ನುವುದು ಬಹುಪಾಲು ಒಪ್ಪಿತವಾಗಿರುವ ಸತ್ಯ. ನಾವು ನಮ್ಮ ವಿದ್ಯಾರ್ಥಿಗಳಿಗೆ ನಿಜವಾದ ಶಿಕ್ಷಣವನ್ನು ನೀಡುತ್ತಿಲ್ಲ, ಬದಲಾಗಿ ಪರೀಕ್ಷೆಗಾಗಿ ಮಾತ್ರ ಅವರನ್ನು ತಯಾರು ಮಾಡುತ್ತಿದ್ದೇವೆ. ಉನ್ನತ ಶಿಕ್ಷಣಕ್ಕೆ ಪ್ರವೇಶ ನೀಡಲು, ಉತ್ತಮ ಉದ್ಯೋಗಗಳನ್ನು ನೀಡಲು ಅಥವಾ ಒಬ್ಬನು ತನ್ನ ಬದುಕನ್ನು ರೂಪಿಸಿಕೊಳ್ಳಲು ಪಡೆಯುವ ಉದ್ಯೋಗಗಳಿಗಾಗಿ ಅಂಕ ಪಟ್ಟಿಗಳನ್ನು ಆಧರಿಸಿರುವವರೆಗೂ ಇದು ಅನಿವಾರ್ಯವಾದುದಾಗಿದೆ. ಈ ಬಗೆಯ ಬೋಧನೆಗೆ ಎಷ್ಟು ಪ್ರಾಶಸ್ತ್ಯ ನೀಡಿದ್ದೇವೆಂದರೆ, ಅಭ್ಯಾಸಿಯ ಜ್ಞಾನದ ಎಲ್ಲೆಗಳನ್ನು ವಿಸ್ತರಿಸುವ ಅವನನ್ನು ವೈಚಾರಿಕವಾಗಿ ಹಾಗೂ ವಸ್ತುನಿಷ್ಠವಾಗಿ ಯೋಚಿಸುವುದನ್ನು ಕಲಿಸಲು ಮತ್ತು ಅವನಲ್ಲಿ ನಾಗರಿಕ ಪ್ರಜ್ಞೆ ಹಾಗೂ ಸಮಾಜದಲ್ಲಿ ಅವನ ಕರ್ತವ್ಯ ಮತ್ತು ಸೇವಾ ಪ್ರಜ್ಞೆಯನ್ನು ತುಂಬಲು ನಡೆದಿರುವ ಪ್ರಯತ್ನಗಳು ಅತ್ಯಂತ ಕಡಿಮೆ. ಶಿಕ್ಷಣ ಆಯೋಗವು ತನ್ನ ವರದಿಯಲ್ಲಿ "ಶಿಕ್ಷಣದ ಅಳಗೊಳಿಸುವುದು ಮತ್ತು ಮುಖ್ಯಉದ್ದೇಶ ವಿಶ್ವದ ಬಗ್ಗೆ ಹಾಗೂ ತನ್ನ ದೇಹ ಮನಸ್ಸು ಹಾಗೂ ಚಿತ್‌ಶಕ್ತಿಯ ಬಗ್ಗೆ ವ್ಯಕ್ತಿಯ ಅರಿವನ್ನು ಆಳಗೊಳಿಸುವುದು ಮತ್ತು ಈ ಅರಿವನ್ನು ಸಮಾಜದಲ್ಲಿ ಹರಡುವುದು ಹಾಗೂ ಮಾನವ ಜನಾಂಗದ ಸೇವೆಗೆ ಬಳಸಿಕೊಳ್ಳುವುದು" ಎಂದು ಎತ್ತಿ ಹೇಳಿದೆ.

ಉನ್ನತ ಶಿಕ್ಷಣ ಪದ್ಧತಿಯಲ್ಲಿ ಕಾಲೇಜು ಒಂದು ಪ್ರಮುಖ ಹಂತ. ಇದು ಪ್ರೌಢಶಾಲೆಗಳ ಹತ್ತು ವರ್ಷಗಳ ಶಿಕ್ಷಣವನ್ನು ಮುಗಿಸಿದ ನಂತರ ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಉನ್ನತ ಶಿಕ್ಷಣದ ಒಂದು ಸಂಸ್ಥೆ. ಇಲ್ಲಿಯವರೆಗಿನ ಔಪಚಾರಿಕ ಶಿಕ್ಷಣವು ಇಂಗ್ಲಿಷ್ ಮಾಧ್ಯಮದ ಮೂಲಕ ಇಲ್ಲವೇ ರಾಜ್ಯಭಾಷೆಯ ಮೂಲಕ ನೀಡಲ್ಪಟ್ಟಿರುತ್ತದೆ.

ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಬೆಳವಣಿಗೆ

ಕೆಳಗಿನ ಪಟ್ಟಿಯು 1968–69 ರಿಂದ 1977–78ರ ವರೆಗಿನ ವಿದ್ಯಾರ್ಥಿಗಳ ಪ್ರವೇಶದೊಂದಿಗೆ ಬೆಳೆದ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಅತಿಶಯ ಬೆಳವಣಿಗೆಯನ್ನು ತೋರಿಸುತ್ತದೆ.

ವರ್ಷ	ವಿ.ವಿ.ಗಳ ಸಂಖ್ಯೆ	ಕಾಲೇಜುಗಳ ಸಂಖ್ಯೆ		ವಿದ್ಯಾರ್ಥಿಗಳ ಸಂಖ್ಯೆ
1968 – 69	76 + 10	ವಿ. ವಿ. ಗಳೆಂದು ಪರಿಗಣಿಸಲ್ಪಟ್ಟ ಸಂಸ್ಥೆಗಳು	3112	15,66,103
1969 – 70	76 + 10	,,	3297	17,19,780
1970 – 71	84 + 9	,,	3604	19,53,700
1971 – 72	86 + 9	,,	3896	20,65,041
1972 – 73	90 + 9	,,	4159	21,68,107
1973 – 74	95 + 9	,,	4308	22,34,385
1974 – 75	102 + 9	,,	4388	23,66,541
1975 – 76	102 + 9	,,	4508	24,26,109
1976 – 77	105 + 10	,,	4569	24,31,563
1977 – 78	105 + 10	,,	4610	25,64,972

ಮೂಲ : ವಿ. ವಿ. ಧನಸಹಾಯ ಆಯೋಗದ 1977–78ರ ವರದಿ (ನವದೆಹಲಿ, ಯು.ಜಿ.ಸಿ. 1979, ಪು. 14).

ವಿದ್ಯಾರ್ಥಿಗಳ ಪ್ರವೇಶ ಹಾಗೂ ಕಾಲೇಜುಗಳ ಬೆಳವಣಿಗೆಯೊಂದಿಗೆ ಸಮ ಸಮವಾಗಿ ಬೋಧನ ವಿಭಾಗಗಳು (Faculty) ಬೆಳದವು. ವಿ.ವಿ.ದ ವ್ಯಾಪ್ತಿಗೆ ಒಳಪಟ್ಟ ಕಾಲೇಜುಗಳಲ್ಲಿ ಸಿಬ್ಬಂದಿ ಸಂಖ್ಯೆ ಒಟ್ಟು 1,41,202 ಇದ್ದಿತು. ಅಲ್ಲದೆ ಉಪನ್ಯಾಸಕರುಗಳ ಸಂಖ್ಯೆ 3,729ಕ್ಕೆ ಹೆಚ್ಚಿತು.

ಅಸಮರ್ಪಕ ಗ್ರಂಥಾಲಯ

ಕೊಥಾರಿ ಶಿಕ್ಷಣ ಆಯೋಗವು ವಿದ್ಯಾರ್ಥಿಗಳಲ್ಲಿ ಓದುವ ಅಭಿರುಚಿಯನ್ನು ಮತ್ತು ಪುಸ್ತಕಗಳ ಬಗ್ಗೆ ಗಾಢವಾದ ಪ್ರೀತಿಯನ್ನು ಬೆಳೆಸಬಹುದಾದ ಸುಸಜ್ಜಿತ ಗ್ರಂಥಾಲಯದ ಕೊರತೆಯ ಬಗ್ಗೆ ವಿಷಾದಿಸುತ್ತದೆ. ವಿ ವಿ.ಗಳಲ್ಲಿ ಮತ್ತು ಕಾಲೇಜುಗಳಲ್ಲಿ ಏರುತ್ತಲೇ ಸಾಗಿರುವ ವಿದ್ಯಾರ್ಥಿ ಸಂಖ್ಯೆಗೆ ಅನುಗುಣವಾಗಿ ಗ್ರಂಥಾಲಯಗಳು, ಅವುಗಳ ಸೇವಾಮಟ್ಟದಲ್ಲಿ ಸಹ, ಬೆಳೆಯಬೇಕೆನ್ನುವುದು ನಿರ್ವಿವಾದವಾದ ವಿಚಾರ. ಸಾಮಾನ್ಯ ಶಿಕ್ಷಣದಲ್ಲಿ ಮುಖ್ಯವಾಗಿ ಉನ್ನತ ಶಿಕ್ಷಣದಲ್ಲಿ ಸಮರ್ಥ ಹಾಗೂ ದಕ್ಷ ಗ್ರಂಥಾಲಯ ಸೇವೆ ಬಹಳ ಪ್ರಮುಖ ಪಾತ್ರವಹಿಸುತ್ತದೆ ಎಂದು ಒತ್ತಿ ಹೇಳಬಹುದು. ಉತ್ತಮ ಸಂಗ್ರಹವನ್ನೂ ಅರ್ಹ ಗ್ರಂಥಪಾಲಕರನ್ನೂ ಹೊಂದಿದ ಗ್ರಂಥಾಲಯಗಳು ಉನ್ನತ ಶಿಕ್ಷಣದ ಒಂದು ಭಾಗವಾಗಬೇಕು.

ಕಾಲೇಜು ಗ್ರಂಥಾಲಯಗಳ ಉದ್ದೇಶ ಮತ್ತು ಕಾರ್ಯಗಳು

"ಪುಸ್ತಕ, ನಿಯತಕಾಲಿಕೆ ಹಾಗೂ ಇತರ ದಾಖಲೆಗಳನ್ನು ಉಪಯೋಗಿಸಲು ಸಹಕಾರಿಯಾಗುವಂತೆ ವ್ಯವಸ್ಥಿತವಾಗಿ ಜೋಡಿಸಿದ ಸಂಗ್ರಹವೇ ಗ್ರಂಥಾಲಯ". ಆಧುನಿಕ ಅರ್ಥದಲ್ಲಿ ವ್ಯವಸ್ಥೆಗೊಳಿಸಿದ ಗ್ರಂಥಾಲಯ ಕಾಲೇಜಿನ ನಿಷ್ಕ್ರಿಯ ಭಾಗ ಅಥವಾ ಐಷಾರಾಮದ ವಿಚಾರವಾಗುವುದಿಲ್ಲ. ಬದಲಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ತನಗೆ ವಹಿಸಿಕೊಟ್ಟ ಕಾರ್ಯವನ್ನು ಕ್ರಿಯಾತ್ಮಕವಾಗಿ ನಿರ್ವಹಿಸುವ ಅಂಗವಾಗುತ್ತದೆ.

ಕಾಲೇಜು ಗ್ರಂಥಾಲಯ ಮೂಲತಃ ಕಲಿಕೆಯ ಸಾಧನವಾಗಿದೆ. ಕಾಲೇಜು ಗ್ರಂಥಾಲಯದ ಉದ್ದೇಶಗಳು ಕಾಲೇಜಿನ ಉದ್ದೇಶಗಳೇ ಆಗಿರುತ್ತವೆ. ಆದುದರಿಂದ ಕಾಲೇಜು ಗ್ರಂಥಾಲಯ ತನ್ನ ಮಾತೃಸಂಸ್ಥೆಯ ಧ್ಯೇಯೋದ್ದೇಶಗಳನ್ನು ಪ್ರತಿ ಬಿಂಬಿಸಬೇಕಾಗುತ್ತದೆ.

ಸಮಯಸಾಧಕತೆಯಿಂದ ಬೆಳೆಯುತ್ತಿರುವ ಕಾಲೇಜುಗಳ ಸಂಖ್ಯೆ ಹೆಚ್ಚಾಗು ತ್ತಿರುವುದಾಗಿ ಅವುಗಳಲ್ಲಿ ಅನೇಕವು ಸಾಕಷ್ಟು ಬಂಡವಾಳವಿಲ್ಲದೆ ಪ್ರಾರಂಭವಾಗಿ ನಡೆಯುತ್ತವೆ. ಇದರಿಂದ ಗ್ರಂಥಾಲಯವೂ ಸೇರಿದಂತೆ ಅನೇಕ ಸೌಕರ್ಯಗಳು ಉಪನ್ಯಾಸಕರುಗಳ ಸಂಖ್ಯೆ ಅಸಮರ್ಪಕವಾಗಿರುತ್ತವೆ.

ಗ್ರಂಥಾಲಯವನ್ನು ಬೌದ್ಧಿಕ ಸಂಪರ್ಕಗಳ ಕೇಂದ್ರವನ್ನಾಗಿಸುವಲ್ಲಿ ವಿದ್ಯಾರ್ಥಿ ಗಳ ವಿಭಾಗಗಳ ಹಾಗೂ ಆಡಳಿತಾಧಿಕಾರಿಗಳವರ ಪಾತ್ರ ಬಹಳ ಮುಖ್ಯವಾದು ದಾಗಿದೆ. ಕಾಲೇಜು ಗ್ರಂಥಾಲಯ ಕೆಳಗಿನ ಉದ್ದೇಶಗಳನ್ನು ಹೊಂದಿರುತ್ತದೆ.

1. ಅಧ್ಯಯನ ವಿಚಾರಗಳಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಬೋಧನ ವಿಭಾಗ ಗಳಿಗೆ ಸಹಾಯ ಮಾಡುವುದು.
2. ಆಯಾ ವಿಷಯದ ಗ್ರಂಥಗಳು ಮತ್ತು ಇತರ ದಾಖಲೆಗಳನ್ನು ಆಯಾ ವಿಭಾಗಗಳಿಗೆ ನೀಡುವುದರ ಮೂಲಕ ಅವುಗಳಲ್ಲಿ ಆಯಾ ವಿಷಯದ ಬಗ್ಗೆ ಆಸಕ್ತಿ ಉಳಿಯುವಂತೆ ಮಾಡುವುದು.
3. ಮನೋರಂಜನೆಗಾಗಿ ಓದಲು ಅನುಕೂಲಗಳನ್ನು ಒದಗಿಸುವುದು. ಇದರಿಂದ ನಮ್ಮ ಅಭಿರುಚಿಗಳಿಗೆ ಪುಟಗೊಟ್ಟು ನಮ್ಮ ಸುತ್ತಲಿನ ಸಮಸ್ಯೆಗಳನ್ನು ವಸ್ತುನಿಷ್ಠ ಹಾಗೂ ವೈಚಾರಿಕವಾಗಿ ನೋಡಲು ಸಹಾಯವಾಗುತ್ತದೆ.
4. ವಿದ್ಯಾರ್ಥಿಗಳ ವ್ಯಕ್ತಿತ್ವದ ಸಮಗ್ರ ಬೆಳವಣಿಗೆಗೆ ಸಹಾಯ ಮಾಡುವುದು.

ಕಾಲೇಜಿನ ದಿನಗಳಲ್ಲಿ ವಿದ್ಯಾರ್ಥಿ ಸಂಸ್ಕೃತಿ, ನವತೆ, ದಕ್ಷತೆ ಮತ್ತು ಉತ್ತಮ ನಾಗರೀಕತೆಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಆದುದರಿಂದ ಕಾಲೇಜು ಗ್ರಂಥಾಲಯದ ಧ್ಯೇಯೋದ್ದೇಶಗಳು ಮಾತೃಸಂಸ್ಥೆಯ (ಕಾಲೇಜಿನ) ಧ್ಯೇಯೋದ್ದೇಶಗಳೊಂದಿಗೆ ಹೊಂದಿಕೊಂಡಿರಬೇಕಾಗುತ್ತದೆ.

"ಯಾವುದೇ ಕೃತಕ ಕಟ್ಟುಪಾಡುಗಳೂ ಗ್ರಂಥಾಲಯವನ್ನು ತರಗತಿಗಳಿಂದಾಗಲಿ ಅಥವಾ ಗ್ರಂಥಾಲಯ ಸಿಬ್ಬಂದಿಯನ್ನು ಬೋಧಕರಿಂದಾಗಲಿ ಬೇರ್ಪಡಿಸಬಾರದು. ತನಗೆ ವಿಧಿಸಿದ ಕಾರ್ಯಗಳನ್ನು ಅದರ ಅತ್ಯುಚ್ಚ ಮಟ್ಟದವರೆಗೂ ನಿರ್ವಹಿಸುವುದರೊಂದಿಗೆ ತನ್ನ ಓದುಗರ, ಕಿರಿಯ ಪ್ರಾಧ್ಯಾಪಕನಿಂದ ಆದೇ ತಾನೇ ಉನ್ನತ ಶಿಕ್ಷಣವನ್ನು ಪ್ರವೇಶಿಸಿದ ವಿದ್ಯಾರ್ಥಿಯವರೆಗೆ ಎಲ್ಲಾ ಬಗೆಯ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿಸಬೇಕು. ವಿದ್ಯಾರ್ಥಿಗಳಲ್ಲಿ ಒಳ್ಳೆಯದನ್ನು ಓದುವ ಅಭ್ಯಾಸವನ್ನು ಜೀವನಪರ್ಯಂತ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಿ, ಪ್ರೋತ್ಸಾಹಿಸಿ ಅದು ಸಮುದಾಯದಲ್ಲಿ ಒಳ್ಳೆಯ ಪಾತ್ರ ವಹಿಸುವಂತೆ ಮಾಡಬೇಕಾಗುತ್ತದೆ. ಅಲ್ಲದೆ ಇದರಿಂದ ದೊರೆಯುವ ಪಾಂಡಿತ್ಯವನ್ನು ಕಾಲೇಜು ಆವರಣದಲ್ಲಷ್ಟೇ ಅಲ್ಲದೆ ಹೊರಗೂ ಬಳಕೆಯಾಗುವಂತೆ ನೋಡಿಕೊಳ್ಳಬೇಕಾಗುತ್ತದೆ."

ಧನಸಹಾಯ ಆಯೋಗದ ಪಾತ್ರ

ವಿವಿಧ ಯೋಜನೆಗಳಿಗಾಗಿ ಉದಾರವಾಗಿ ಧನಸಹಾಯ ಮಾಡುವ ಯೋಜನೆಗಳ ಮೂಲಕ ವಿ.ವಿ. ಧನಸಹಾಯ ಆಯೋಗವು ಭಾರತಾದ್ಯಂತ ಕಾಲೇಜುಗಳ ಅಭಿವೃದ್ಧಿಯಲ್ಲಿ ಗಮನಾರ್ಹ ಪಾತ್ರವಹಿಸಿದೆ. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವ ಮೂಲ ಉದ್ದೇಶದಿಂದ ವಿ.ವಿ. ಧನಸಹಾಯ ಆಯೋಗವು ಗ್ರಂಥಾಲಯಗಳಿಗೆ ಹೆಚ್ಚಿನ ಗಮನ ನೀಡಿದೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಪದವಿ ತರಗತಿಗಳಲ್ಲಿ ಹೊಂದಿದ್ದ ಕಾಲೇಜುಗಳು ಎಂಟು ಲಕ್ಷ ರೂ. ಗಳವರೆಗೂ, ಎರಡು ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದ್ದ ಕಾಲೇಜುಗಳು ಹತ್ತು ಲಕ್ಷ ರೂ.ಗಳವರೆಗೂ ಧನಸಹಾಯ ಪಡೆಯಬಹುದಿತ್ತು. ಕನಿಷ್ಠ ಮೊತ್ತವಾದ ಐದು ಲಕ್ಷ ರೂ. ಗಳನ್ನು ಪಡೆಯಬಹುದಾಗಿದ್ದ ಕಾಲೇಜುಗಳು ಸುಮಾರು ನಾಲ್ಕುನೂರು ಪದವಿ ವಿದ್ಯಾರ್ಥಿಗಳನ್ನೂ ಇಪ್ಪತ್ತೈದು ಖಾಯಂ ಉಪನ್ಯಾಸಕರುಗಳನ್ನೂ ಹೊಂದಿರಬೇಕಾಗಿದೆ. ಆಯೋಗವು ಗ್ರಂಥಾಲಯ ಕಟ್ಟಡ ರಚನೆಗೆ, ಗ್ರಂಥಗಳನ್ನು ಕೊಳ್ಳಲು ಹಾಗೂ ಉಪಕರಣಗಳಿಗಾಗಿ ತನ್ನ ಧನಸಹಾಯವನ್ನು ವಿಸ್ತರಿಸಿದೆ. ಆಯೋಗದ ಹಾಗೂ ರಾಜ್ಯ ಸರಕಾರಗಳ ಮಧ್ಯದ ಸಹಾಯದ ಅನುಪಾತ ಹೀಗಿದೆ.

	ಧನಸಹಾಯ ಆಯೋಗದ ನೆರವು	ರಾಜ್ಯಸರಕಾರ ಕಾಲೇಜಿನ ನೆರವು
1. ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕಾಗಿ	66⅔%	33⅓%
2. ಗ್ರಂಥ, ನಿಯತಕಾಲಿಕೆ ಹಾಗೂ ಉಪಕರಣಗಳನ್ನು ಕೊಳ್ಳಲು	75%	25%

ಧನಸಹಾಯ ಆಯೋಗವು ಕಟ್ಟಡ ರಚನೆಗಾಗಿ ಮುಂಗಡ ಅನುದಾನವನ್ನು ಯೋಜನೆಯ ಒಪ್ಪಿಗೆಯ ಸಂದರ್ಭದಲ್ಲಿಯೂ, ಮೊದಲ ಕಂತಿನ ಅನುದಾನವನ್ನು ಗ್ರಂಥ ಮತ್ತು ಉಪಕರಣಗಳ ಕರಡಿನ ಮಂಜೂರಾತಿಯ ಸಂದರ್ಭದಲ್ಲಿಯೂ ನೀಡುತ್ತದೆ.

ಇದಲ್ಲದೆ ಆಯೋಗವು ಸಾಮುದಾಯಿಕ ಸೇವೆಗಳಿಗಾಗಿ, ಪುಸ್ತಕಗಳನ್ನು ಉಪಕರಣಗಳನ್ನು ಕೊಳ್ಳಲು, ಕಲೆ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳಲ್ಲಿ ಪದವಿ ತರಗತಿಗಳನ್ನು ಅಭಿವೃದ್ಧಿಪಡಿಸಲು ಬುಕ್‌ಬ್ಯಾಂಕ್ ತೆರೆಯಲು ಮತ್ತು ಕಾಲೇಜಿನ ಇತರ ಸೌಕರ್ಯಗಳು ಇತ್ಯಾದಿ ಹೊಸ ಹೊಸ ಯೋಜನೆಗಳಿಗೆ ವಿಶೇಷ ಅನುದಾನವನ್ನು ನೀಡುತ್ತದೆ. 1977-78ರ ಒಂದೇ ವರ್ಷದಲ್ಲಿ 1078 ಕಾಲೇಜುಗಳಲ್ಲಿ ಬುಕ್ ಬ್ಯಾಂಕುಗಳನ್ನು ತೆರೆಯಲು 46.19 ಲಕ್ಷ ರೂ. ಗಳನ್ನು ಆಯೋಗ ನೀಡಿದೆ.

ಕಾಲೇಜಿನಲ್ಲಿರುವ ಗ್ರಂಥ ಸಂಗ್ರಹವನ್ನು ಪಠ್ಯಪುಸ್ತಕ ಹಾಗೂ ಇತರ ಓದುವ ಸಲಕರಣೆಗಳು ಕೂಡ ಹೆಚ್ಚಿಸಲು ಗ್ರಂಥಗಳ ಹಾಗೂ ಉಪಕರಣಗಳ ಪ್ರಾಥಮಿಕ ಅನುದಾನವನ್ನು ನೀಡುತ್ತದೆ. ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಯೋಗವು ವಿವಿಧ ಕಾಲೇಜುಗಳ ವಿದ್ಯಾರ್ಥಿ ಪಟ್ಟಿ ಸಂಖ್ಯೆಯ ಆಧಾರದ ಮೇಲೆ ಧನಸಹಾಯವನ್ನು ನಿರ್ಧರಿಸಿದೆ.

ಗ್ರಂಥಗಳು ಹಾಗೂ ಉಪಕರಣಗಳಿಗಾಗಿ ಕಾಲೇಜುಗಳಿಗೆ ಪ್ರಾಥಮಿಕ ಧನ ಸಹಾಯ

ವಿದ್ಯಾರ್ಥಿಗಳ ದಾಖಲಾತಿ ಪಿಯುಸಿ ಇಂಟರ್‌ ತಾಂತ್ರಿಕ ಪೂರ್ವವನ್ನು ಬಿಟ್ಟು	ನೀಡಬಹುದಾದ ಅನುದಾನ	ಉಪಕರಣಗಳಿಗಾಗಿ ನೀಡಬಹುದಾದ ಅನುದಾನ (ಬೇರೆ ವಿಜ್ಞಾನ ಅಥವಾ ಜೈವಿಕ ವಿಜ್ಞಾನಗಳಿಗೆ)
150–400	10000	10000
401–800	20000	20000
801–1500	30000	30000
1501–ಮತ್ತು ಹೆಚ್ಚು	40000	40000

ಮೂಲ: ಯು.ಜಿ.ಸಿ. ವಾರ್ಷಿಕ ವರದಿ 1977-78 (ನವದೆಹಲಿ. ಯು.ಜಿ.ಸಿ. 1979. ಪು. 14.)

ಬೋಧನ ವಿಭಾಗ, ವಿದ್ಯಾರ್ಥಿ ಹಾಗೂ ಗ್ರಂಥಾಲಯ

"ಪ್ರಜ್ಞಾಪೂರ್ವಕವಾಗಿ ಮತ್ತು ಜವಾಬ್ದಾರಿಯುತವಾಗಿ ವಿದ್ಯಾರ್ಥಿ ಗ್ರಂಥಾಲಯವನ್ನು ಬಳಸಿಕೊಳ್ಳುವಂತೆ ಅಧ್ಯಾಪಕರು ನೋಡಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಕುತೂಹಲವನ್ನು ಮತ್ತು ತಮ್ಮ ಕುತೂಹಲವನ್ನು ತಣಿಸಿಕೊಳ್ಳಲು ಗ್ರಂಥಾಲಯವನ್ನು ಶೋಧನ ಕೇಂದ್ರವಾಗಿ ಬಳಸಿಕೊಳ್ಳುವಂತೆಯೂ ಈ ವಿಭಾಗಗಳು ಪ್ರೇರೇಪಿಸಬೇಕು. ತನ್ನ ವಿದ್ಯಾಭ್ಯಾಸಕ್ಕೆ ಸಂಪೂರ್ಣವಾಗಿ ತಾನೊಬ್ಬನೇ ಜವಾಬ್ದಾರನೆಂದೂ ಮತ್ತು ಸ್ವಂತ ಅಧ್ಯಯನಕ್ಕೆ ಗ್ರಂಥಾಲಯ ಪ್ರಮುಖ ಸಾಧನವೆಂಬುದನ್ನು ಅರಿಯುವಂತೆ ಮಾಡಬೇಕು."

ಚರ್ಚಾಸ್ಪರ್ಧೆಗೆ, ವಿಜ್ಞಾನ ಉಪನ್ಯಾಸಗಳಿಗೆ, ಸಾಮಾನ್ಯ ಜ್ಞಾನ ಸ್ಪರ್ಧೆಗೆ ಅಥವಾ ಪ್ರಬಂಧ ಬರೆಯಲು ಸಿದ್ಧತೆಗಳನ್ನು ನಡೆಸುವಾಗ ವಿದ್ಯಾರ್ಥಿಯು ಅಧ್ಯಾಪಕರ ಮಾರ್ಗದರ್ಶನವನ್ನು ಬಯಸಬಹುದು. ಇಂತಹ ಸಂದರ್ಭಗಳಲ್ಲಿ ವಿದ್ಯಾರ್ಥಿಗಳನ್ನು ಸರಿಯಾದ ಗ್ರಂಥಗಳನ್ನು ಓದಲು ನಿರ್ದೇಶಿಸಬಹುದು. ಇದಲ್ಲದೆ, ಜ್ಞಾನದ ಎಲ್ಲ ರಂಗಗಳ ಮಹತ್ಕೃತಿಗಳ ಮಹತ್ವನ್ನು ಅವುಗಳ ಜ್ಞಾನ ಸಂಪತ್ತನ್ನೂ ಗ್ರಂಥಾಲಯಗಳ ಮೂಲಕ ವಿದ್ಯಾರ್ಥಿಯ ಅರಿವಿಗೆ ತರಬಹುದು.

ಬೋಧನಾವಿಷಯದ ಉದ್ದೇಶ ಮತ್ತು ಪಠ್ಯವಿಷಯದ ವ್ಯಾಪ್ತಿಗಳನ್ನು ಗಣಿಸಿ ವಿಭಾಗಗಳ ಗ್ರಂಥಗಳ ಹಾಗೂ ನಿಯತಕಾಲಿಕೆಗಳ ಆಯ್ಕೆಯಲ್ಲಿ ಮತ್ತು ಮೌಲ್ಯ ಕಳೆದುಕೊಂಡ ಗ್ರಂಥಗಳನ್ನು ಗ್ರಂಥಾಲಯಗಳಿಂದ ತೆಗೆದುಹಾಕಲು ಗ್ರಂಥಾಲಯಗಳಿಗೆ ಸಹಾಯಮಾಡಬೇಕಾಗುತ್ತದೆ. ಇದರೊಂದಿಗೆ ವ್ಯಕ್ತಿಯ ವ್ಯಕ್ತಿತ್ವವನ್ನೂ ಸಮಾಜವನ್ನೂ ರೂಪಿಸಿದ ಗ್ರಂಥಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಕಾಲೇಜಿನ ಆವರಣದಲ್ಲಿ ಚರ್ಚೆಗಳನ್ನೂ ವಿಚಾರಗೋಷ್ಠಿಗಳನ್ನೂ ಪ್ರೋತ್ಸಾಹಿಸಬೇಕು. ಸ್ವತಂತ್ರವಾಗಿ ಬದುಕುವುದನ್ನು ಕಲಿಯುವುದು ನಿಧಾನ ಪ್ರತಿಕ್ರಿಯೆ. ಅದು ಗ್ರಂಥಗಳ ಅಧ್ಯಯನದಿಂದ ಮಾತ್ರ ಬರುವಂತಹುದಲ್ಲ.

ಸ್ವಂತ ಅಧ್ಯಯನ ಮಾಡುವ ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಮೇಲೆ ಅನೇಕ ಜವಾಬ್ದಾರಿಗಳಿರುತ್ತವೆ. ತರಗತಿಯಲ್ಲಿ ನೀಡುವ ಬೋಧನೆ, ಪಠ್ಯದಲ್ಲಿರುವ ವಿಭಾಗಗಳ ಮೇಲೆ ಪ್ರವೀಣನನ್ನಾಗಿಸಬೇಕಾಗುತ್ತದೆ. ಈ ರೀತಿಯ ಅಧ್ಯಯನದ ಫಲವಾಗಿ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಮತ್ತು ಅವನಲ್ಲಿ ಕುತೂಹಲವನ್ನು ಪ್ರೇರೇಪಿಸುತ್ತವೆ. ಅಂತಹ ಸಂದರ್ಭಗಳಲ್ಲಿ ಉಪನ್ಯಾಸಕರು ಅವನ ಸಮಸ್ಯೆಗಳನ್ನು ಪರಿಹರಿಸಬಲ್ಲ ಗ್ರಂಥಗಳನ್ನು ನಿಯತಕಾಲಿಕೆಯಲ್ಲಿನ ಲೇಖನಗಳನ್ನು ಓದುವಂತೆ ಮಾರ್ಗದರ್ಶನ ಮಾಡಬಹುದು. ತನ್ನ ವಿಷಯದಲ್ಲಿ ಪರಿಣತಿಯನ್ನು ಪಡೆಯುವುದರೊಂದಿಗೆ ಅವನ ನಡತೆ ಮತ್ತು ಅಭಿರುಚಿಗಳನ್ನು

ಸಂಸ್ಕರಿಸುವಂತಹ ಓದುವ ಇತರ ಅಂಶಗಳೂ ಇವೆ. ಸಾಹಿತ್ಯ ಮತ್ತು ಕಲೆಯ ವಿವಿಧ ವಿಷಯಗಳು ಈ ವಿಚಾರದಲ್ಲಿ ಬಹಳ ಮುಖ್ಯವಾದವುಗಳು.

ವಿದ್ಯಾರ್ಥಿ ತನ್ನ ವಿಷಯದಲ್ಲಿ ಪರಿಣತಿಯನ್ನು ಪಡೆಯಲು ಗ್ರಂಥಾಲಯ ಸಂಗ್ರಹವನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಬೇಕಾಗುತ್ತದೆ. ತನ್ನ ಸ್ವಂತ ಅಧ್ಯಯನದಲ್ಲಿ ಗ್ರಂಥಾಲಯವನ್ನು ಹೇಗೆ ಉಪಯೋಗಿಸಬೇಕೆನ್ನುವುದನ್ನು ತಿಳಿದಿರಬೇಕಾಗುತ್ತದೆ.

ಅಧ್ಯಾಪಕರ ಹಾಗೂ ಸಿಬ್ಬಂದಿವರ್ಗದವರ ಬೇಡಿಕೆಗಳನ್ನು ಈಡೇರಿಸುವುದು ಗ್ರಂಥಪಾಲಕನಿಗೆ ಕಷ್ಟಸಾಧ್ಯವಾದ ಕೆಲಸವಾಗಿರುತ್ತದೆ. ಕಡಿಮೆ ಬಂಡವಾಳ ಮತ್ತು ಕಡಿಮೆ ಸಿಬ್ಬಂದಿಗಳ ಮಧ್ಯೆ ಅವನು ಸಿಲುಕಿರುತ್ತಾನೆ. ಕಾಲೇಜಿನಲ್ಲಿ ಇರುವ ಎಲ್ಲಾ ವಿಷಯಗಳ ಮೇಲೂ ಸಾಕಾಗುವಷ್ಟು ಗ್ರಂಥ, ನಿಯತಕಾಲಿಕೆ, ಕರಪತ್ರಗಳು, ದೃಕ್‌ಶ್ರವಣ ಸಾಧನಗಳು ಇತ್ಯಾದಿ ಸಂಗ್ರಹವನ್ನು ಹೊಂದಿರಬೇಕಾಗುತ್ತದೆ.

ಗ್ರಂಥಾಲಯದಲ್ಲಿ ಗ್ರಂಥಗಳನ್ನು ಸುಲಭವಾಗಿ ಪಡೆಯುವಂತೆ ವ್ಯವಸ್ಥೆಗೊಳಿಸಿರಬೇಕು. ಸಾರಸಂಗ್ರಹಗಳು (Abstracts) ಗ್ರಂಥಸೂಚಿ(Bibliographies & Indexes) ಗಳನ್ನು ಅಧ್ಯಯನಕ್ಕೆ ಒದಗಿಸಿಕೊಡಬೇಕು. ಗ್ರಂಥಾಲಯ ಸೇವೆ ಮತ್ತು ಸಂಗ್ರಹವನ್ನು ಬಳಸಿಕೊಳ್ಳಲು ವಿದ್ಯಾರ್ಥಿಗೆ ಔಪಚಾರಿಕ ಹಾಗೂ ಅನೌಪಚಾರಿಕ ಸೂಚನೆಗಳನ್ನು ನೀಡಬೇಕಾಗುತ್ತದೆ. ಗ್ರಂಥಗಳ ಬಳಕೆಯನ್ನು ಹೆಚ್ಚಿಸುವ ಪುಸ್ತಕ ಪ್ರದರ್ಶನ, ಗ್ರಂಥಚರ್ಚೆ, ಅಧ್ಯಯನಕೂಟ ಇತ್ಯಾದಿ ಚಟುವಟಿಕೆಗಳನ್ನು ನಡೆಸಬೇಕಾಗುತ್ತದೆ.

ಆಡಳಿತವರ್ಗ ಮತ್ತು ಗ್ರಂಥಪಾಲಕ

ವಿಭಾಗಗಳ ಸಹಕಾರದೊಂದಿಗೆ ಗ್ರಂಥಪಾಲಕನು ಗ್ರಂಥಸಂಗ್ರಹವನ್ನು ಬೆಳೆಸಬೇಕಾಗುತ್ತದೆ ಮತ್ತು ಅದನ್ನು ಸರಿಯಾದ ಬಳಕೆಗೆ ಅಣಿಗೊಳಿಸಬೇಕಾಗುತ್ತದೆ. ಉತ್ತಮ ಸೇವೆ ಮತ್ತು ಸಂಗ್ರಹವನ್ನು ಒದಗಿಸಲು ಹೆಚ್ಚಿನ ಹಣಕ್ಕಾಗಿ ಗ್ರಂಥಪಾಲಕರು ಆಡಳಿತ ವರ್ಗದವರ ಮನವೊಲಿಸಲು ಕಷ್ಟಪಡಬೇಕಾಗುತ್ತದೆ. ಗ್ರಂಥಾಲಯಕ್ಕೆ ನೀಡುವ ಹಣದಲ್ಲಿ ಬಹುಪಾಲು ಸಿಬ್ಬಂದಿ ವರ್ಗದವರ ಸಂಬಳಕ್ಕಾಗಿ ಖರ್ಚಾಗುತ್ತದೆ. ಇದರೊಂದಿಗೆ ಏರುತ್ತಲೇ ಸಾಗಿರುವ ಪುಸ್ತಕಗಳ ಬೆಲೆ, ಪೀಠೋಪಕರಣಗಳ, ಕಟ್ಟಡಗಳ ರಚನೆಯ ಖರ್ಚುಗಳೂ ಸೇರುತ್ತವೆ. ಗ್ರಂಥಾಲಯ ಸಮತೋಲನ ರೀತಿಯ ಆಯವ್ಯಯ ಪಟ್ಟಿಯನ್ನು ಹೊಂದಿರಬೇಕಾಗುತ್ತದೆ. ಕಾಲೇಜಿನ ಪ್ರಾರಂಭದ ವರ್ಷಗಳಲ್ಲಿ ಕಾಲೇಜಿನ ಒಟ್ಟು ಆಯವ್ಯಯದಲ್ಲಿ ಶೇ. 10 ರಷ್ಟನ್ನು ಗ್ರಂಥಾಲಯಕ್ಕೆ ಬಳಸಬೇಕಾಗುತ್ತದೆ. ಮುಂದೆ ಸುಮಾರು 10 ವರ್ಷಗಳ ನಂತರ ಗ್ರಂಥಾಲಯ ಸರಿಯಾಗಿ ಬೆಳೆದಾಗ ಇದನ್ನು ಶೇ. 5-6

ಲಕ್ಷ್ಯಕ್ಕೆ ಇಳಿಸಬಹುದು. ಗ್ರಂಥಾಲಯ ಕಾಲೇಜಿನ ಶಿಕ್ಷಣದಲ್ಲಿ ಅವಶ್ಯವಾದ ಅಂಶವೆನ್ನುವುದರ ಜೊತೆಗೆ ಅಂದರೆ ಒಂದು ಕೆಲಸ ಮಾಡಬೇಕಾದರೆ ಗ್ರಂಥಪಾಲಕನು ಕಾಲೇಜು ಸಿಬ್ಬಂದಿಯಷ್ಟೇ ಅರ್ಹತೆ ಮತ್ತು ದಕ್ಷತೆಯುಳ್ಳವನಾಗಬೇಕಾಗುತ್ತದೆ. ಇದರೊಂದಿಗೆ ಗ್ರಂಥಾಲಯದ ತಾಂತ್ರಿಕ ವಿಚಾರಗಳಲ್ಲಿ ಪರಿಣತನಿರಬೇಕಾಗುತ್ತದೆ. ವ್ಯಕ್ತಿಪರ ಕೆಲಸಗಾರರ ಸಹಾಯ ಪಡೆಯಬೇಕಾಗುತ್ತದೆ. "ಕಾಲೇಜಿನ ಶೈಕ್ಷಣಿಕ ಯೋಜನೆಗೆ ಅನುಸಾರವಾಗಿ ಗ್ರಂಥಗಳನ್ನು ನಿಯತಕಾಲಿಕೆ ಇತ್ಯಾದಿ ಅಧ್ಯಯನ ಸಾಮಗ್ರಿಗಳನ್ನು ಒದಗಿಸುವುದೇ ಅಲ್ಲದೆ ಜೀವನಪರ್ಯಂತ ಒಳ್ಳೆಯದನ್ನು ಒಳ್ಳೆಯ ರೀತಿಯಲ್ಲಿ ಓದುವ ಅಭ್ಯಾಸವನ್ನು ಬೆಳೆಸುವುದು ಗ್ರಂಥಾಲಯದ ಪ್ರಾಥಮಿಕ ಉದ್ದೇಶವಾಗಿದೆ."

ಈ ರೀತಿ ಕಾಲೇಜು ಗ್ರಂಥಾಲಯವನ್ನು ಸರಿಯಾಗಿ ಬಳಕೆಯಾಗುವಂತೆ ಮಾಡುವಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ಗ್ರಂಥಪಾಲಕ ಹಾಗೂ ಆಡಳಿತವರ್ಗ ಸಮಾನ ಪಾಲನ್ನು ಹೊಂದಿವೆ. ಅಲ್ಲದೆ, ಪ್ರತಿಯೊಂದೂ ನಿರ್ದಿಷ್ಟ ಪಾತ್ರವನ್ನು ಹೊಂದಿದೆ.

ಪ್ರಭುವೆ, ನಿಜ, ನೀನು ನ್ಯಾಯಸ್ಥ

ಅನು : **ಸುಮತೀಂದ್ರ ನಾಡಿಗ**

ಪ್ರಭುವೆ, ನಿಜ, ನೀನು ನ್ಯಾಯಸ್ಥ, ನಿನ್ನೊಡನೆ
ವಾದಿಸಿದಾಗ: ಆದರೂ ನನ್ನ ವಾದವು ಕೂಡ
ನ್ಯಾಯ ಸ್ವಾಮಿ. ಅನ್ಯಾಯದ ದಾರಿಗಳಿಗೇಕೆ ಯಶಸ್ಸು?
ನನ್ನೆಲ್ಲ ಪ್ರಯತ್ನಕ್ಕೆ ಆಶಾಭಂಗ ಏಕೆ ಕೊನೆಗೆ ?
ಶತ್ರುವಾದರೆ ನೀನು ನನ್ನ ಸ್ನೇಹಿತನೆ, ಅಪಜಯಕ್ಕಿಂತ
ಅಡಚಣೆಗಿಂತ ಇನ್ನೆಷ್ಟು ಕೇಡನ್ನು ಮಾಡಬಹುದಿತ್ತು ?
ನಿನ್ನ ಕಾರ್ಯಕ್ಕಾಗಿ ಇಡೀ ಜೀವ ತೇಯುತ್ತಿರುವ ನನಗಿಂತ
ಕುಡುಕರು ಕಾಮದ ಗುಲಾಮರೇಕೆ ಬಿಡುವಿನಲ್ಲೂ ಕೂಡ
ಹೆಚ್ಚು ಗಳಿಸುವರು ? ಅಗೊ ಅಲ್ಲಿ ನಡುನಡುವೆ
ಸಣ್ಣೆಲೆಯ ಸಸ್ಯಗಳ ಕಸೂತಿ ಹಾಕಿರುವ ದಟ್ಟ
ಹಸುರೆಲೆಯ ಪೊದೆ ದಂಡೆಗಳ ಹೊಸಗಾಳಿ ಕುಲುಕುತ್ತಿದೆ.
ಹಕ್ಕಿಗಳು ಕಟ್ಟುತ್ತವೆ–ನಾ ಕಟ್ಟಲಾರೆ ; ಇಲ್ಲ, ವ್ಯರ್ಥ ಶ್ರಮಿಸುತ್ತಿರುವೆ.
ಕಾಲದ ಬೊಜ್ಜು, ಎಚ್ಚರಿಸುವ ಕೃತಿಯೊಂದ ಹಡೆಯಲಾರೆ.
ನನ್ನವನೆ, ಬದುಕಿನ ದೊರೆಯೆ, ಕಳುಹಿಸಯ್ಯಾ ಮಳೆಯ ನನ್ನ ಮೂಲಕ್ಕೆ.

ಮೂಲ : Thou art Indeed Just my Lord–**ಹಾಪ್‌ಕಿನ್ಸ್**

ವಚನವೊಂದರ ಪ್ರಾಯೋಗಿಕ ವಿಮರ್ಶೆ

ರಹಮತ್ ತರೀಕೆರೆ

ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ.
ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ, ಶಿವಾ,
ನಿಮ್ಮ ಒಲವಿಲ್ಲದಂತೆ ಆಗಿದ್ದೆನಯ್ಯಾ.
ಕೆಟ್ಟು ಬಾಳುವವರಿಲ್ಲ ಎಮ್ಮವರ ಕುಲದಲ್ಲಿ,
ನೀನೊಲಿದಂತೆ ಸಲಹಯ್ಯಾ, ಕೂಡಲಸಂಗಮದೇವಾ.

ಈ 'ವಚನಕವನ'ದ ರಚನೆ ಹೀಗಿದೆ: ವಚನಕಾರನ ಸದ್ಯದ ಸ್ಥಿತಿ (ಮೂರು ಮತ್ತು ನಾಲ್ಕನೇ ಸಾಲುಗಳು); ತನ್ನ ಸ್ಥಿತಿಯನ್ನು ಹೇಳಿಕೊಳ್ಳುವಲ್ಲಿ ಆತ ಕೊಡುವ ಉಪಮೆಯಂತಹ ಒಂದು ಪ್ರತಿಮೆ; (ಮೊದಲೆರಡು ಸಾಲುಗಳು) ನಂತರ, ಕವನದ ಐದನೇ ಸಾಲು ಒಂದು ಹೇಳಿಕೆ; ಕೊನೆಯದು ಒಂದು ಪ್ರಾರ್ಥನೆ.

ವಚನದ ಮೊದಲಲ್ಲಿ ಒಬ್ಬ 'ಲಲನೆ'ಯ ಚಿತ್ರ ಬಂದಿದೆ. ಬಹಳ ನಿಧಾನವಾಗಿ ಸಾಗುವ ಆರಂಭದ ಲಯ, ಆಕೆಯ ಶೃಂಗಾರವನ್ನು ಕ್ರಮಕ್ರಮವಾಗಿ ವಿವರಿಸುತ್ತದೆ. ಇಲ್ಲಿ ಬಳಕೆಯಾಗಿರುವ ಮೃದುವಾದ 'ಪದಶಯ್ಯೆ' 'ಒಲವಿ'ಗಾಗಿ ಕಾಯುತ್ತಾ ನಿಂತಿರುವ 'ಲಲನೆ'ಯ ದೇಹದ ಕೋಮಲತೆಯನ್ನು, ಅವಳ ಒಳಗನ್ನು ತುಂಬಿರುವ ಅಂಥದೇ ಭಾವನೆಗಳನ್ನು ಕಡೆದಿಡುತ್ತದೆ:

'ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು'

ಇಲ್ಲಿ ಅರಿಸಿನ ಹಾಗು ಹೊಂದುಡಿಗೆಗಳು (ಪೀತಾಂಬರ ಮತ್ತು ಹೊನ್ನಿನ ಒಡವೆಗಳು) ಸೃಷ್ಟಿಮಾಡುವ ಮಂಗಳಕರವಾದ ಸನ್ನಿವೇಶದ ಜೊತೆಜೊತೆಯಲ್ಲೇ, ಅವುಗಳು (ಅರಿಸಿನ–ಹೊನ್ನು) ಸಂಕೇತಿಸುವ ಬಣ್ಣಗಳು 'ಲಲನೆ'ಯನ್ನು ಸುತ್ತಿಕೊಂಡು ಅವಳ ಸೌಂದರ್ಯದತ್ತ ಮುಖಮಾಡಿ ನಿಲ್ಲುತ್ತವೆ.

ಕವನ ಭಕ್ತನ ಸ್ಥಿತಿಯನ್ನು ವರ್ಣಿಸುವುದಕ್ಕೆ ಬಂದಾಗ ಮೊದಲಿನ 'ಅರಿಸಿನ' (ಬಣ್ಣ) ಇಲ್ಲಿ ವಿಭೂತಿಯಾಗಿದೆ; ಅಲ್ಲಿನ 'ಹೊಂದುಡಿಗೆ' ಇಲ್ಲಿ 'ರುದ್ರಾಕ್ಷಿ'ಯಾಗುತ್ತದೆ. ಒಂದು—ಹಚ್ಚಿಕೊಳ್ಳಬಹುದಾದ್ದು. ('ಹೂಸಿ', 'ಮಿಂದು') ಮತ್ತೊಂದು ತೊಟ್ಟುಕೊಳ್ಳಬಹುದಾದ್ದು. ('ತೊಟ್ಟು', 'ಕಟ್ಟಿ') ಅಂತೂ ಎಲ್ಲವೂ ಬಾಹ್ಯ ಶೃಂಗಾರಕ್ಕೆ ಸಂಬಂಧಪಟ್ಟವು. 'ಮಿಂದು', 'ತೊಟ್ಟು', 'ಹೂಸಿ', 'ಕಟ್ಟಿ'—

ಮುಂತಾದ ಕ್ರಿಯಾಪದಗಳು ಈ ತಯಾರಿಯ ಪ್ರಯತ್ನಗಳನ್ನು ತೋರಿಸುತ್ತವೆ. ಆದರೆ ಲಲನೆ ಹಾಗೂ ಭಕ್ತರ ವಸ್ತುಸ್ಥಿತಿಯ ವರ್ಣನೆಮಾಡುವ ಈ ಸಾಲುಗಳ ನಂತರ, ತಕ್ಷಣವೇ 'ಧುತ್ತನೆ' ಕಾಣಿಸಿಕೊಳ್ಳುವ 'ಒಲವಿಲ್ಲದೆ' ಎಂಬ ಮಾತು ಮೇಲಿನ ಈ ಎಲ್ಲಾ ಶೃಂಗಾರ–ಸಿದ್ಧತೆಗಳು ವ್ಯರ್ಥ ಎಂಬುದನ್ನು ಗೋಚರವಾಗುವಂತೆ ಮಾಡಿಬಿಡುತ್ತದೆ. ಹಾಗೂ ಅವುಗಳ ಸಾರ್ಥಕ್ಯಕ್ಕೆ ಮತ್ತೊಬ್ಬ ವ್ಯಕ್ತಿಯ (ಅವನ 'ಒಲವಿ'ನ) ತುರ್ತು ಅಗತ್ಯವನ್ನೂ ಕಾಣಿಸುತ್ತದೆ.

ಒಟ್ಟಿನಲ್ಲಿ 'ಲಲನೆ'ಗೆ ಒಲವನ್ನು ಕೊಡುವ ಪುರುಷನೂ, 'ಭಕ್ತ'ನಿಗೆ ಒಲವನ್ನು ಕೊಡುವ 'ಶಿವ'ನೂ ಬೇಕಾಗಿದ್ದಾನೆ. ಇಡೀವಚನದಲ್ಲಿ 'ಒಲವಿ'ನ ಬೇಡಿಕೆ ಪದ ಪದಗಳಲ್ಲಿ ತುಂಬಿ ಚೆಲ್ಲುತ್ತದೆ.ಇಲ್ಲಿನ 'ಒಲವಿಲ್ಲದ''ಒಲವಿಲ್ಲದ'–ಎಂಬುದರ ಅನುರಣನವು ಒಲವಿನ ಅರಕೆಯನ್ನು ಅನಾಥಭಾವದಿಂದ ಒತ್ತಿಹೇಳುತ್ತಿರುವಾಗಲೇ, ವಚನವು 'ನೀನೊಲಿದಂತೆ ಸಲಹು' ಎಂಬ ಸಮಸ್ತವನ್ನೂ ಬಿಟ್ಟುಕೊಟ್ಟ ಮಾನಸಿಕ ಅವಲಂಬನೆಯಲ್ಲಿ ಮುಗಿಯುತ್ತದೆ. ಹಾಗೂ 'ಸಲಹು' ಎಂಬ ಸೂಚನಾತ್ಮಕವೂ, ಪ್ರಾರ್ಥನಾತ್ಮಕವೂ (ಇಲ್ಲಿ ಒತ್ತಾಯವೂ ಇರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು) ಆದ ಪದವು ಅರ್ಥಪರಂಪರೆಗಳನ್ನು ಭರಿಸಿಕೊಂಡು ಬೆಳಗುತ್ತದೆ.

'ನೀನೊಲಿದಂತೆ' ಎಂಬ ಪದದಲ್ಲಿ 'ಒಲವು' ಹಾಗೂ 'ಇಚ್ಛೆ' ಎಂಬ ಎರಡು ಅರ್ಥದ ಮಗ್ಗುಲಂಗಳಿರುವುದು ಗಮನಾರ್ಹ. ಇಲ್ಲಿ 'ನೀನು ಇಚ್ಛಿಸಿದಂತೆ/ಬಯಸಿದಂತೆ ಮಾಡು' ಎಂಬ ವಾಚ್ಯಾರ್ಥ ಇರುವುದಾದರೂ, ಅಪರೋಕ್ಷವಾಗಿ 'ನೀನು ಒಲವನ್ನು ನೀಡಲೇಬೇಕು' ಎಂದು ನಿರ್ಬಂಧಿಸುವ ಧ್ವನಿಯೂ ತೀವ್ರವಾಗಿದೆ. 'ಲಲನೆ'ಯ ಹಾಗೂ ಕವಿಯ ದುಸ್ಥಿತಿಯನ್ನು ನಿವೇದಿಸುವ 'ಆಗಿದ್ದೆನಯ್ಯಾ' 'ಆಗಿದ್ದೆನಯ್ಯಾ' ಎಂಬ ಪುನರುಕ್ತಿಗಳು ಮತ್ತು ಅವುಗಳ ದೀರ್ಘತೆಗಳಲ್ಲಿನ ('ಅಯ್ಯಾ' 'ಅಯ್ಯಾ') ಅಳಲು ತೋಡಿಕೊಳ್ಳುವಿಕೆ–ನೋವುಗಳು, 'ಸಲಹಯ್ಯಾ, ಕೂಡಲಸಂಗಮದೇವಾ' ಎಂಬ ಅದೇ ಬಗೆಯ ಎಳೆತಗಳಲ್ಲಿ ಮುಗಿಯುವ ಮೂಲಕ ಪರಿಣಾಮಕಾರಿಯಾಗಂತ್ತದೆ.

ಈ ನಡುವೆ ಒಂದು ಹೇಳಿಕೆ (Statement) ಬರುತ್ತದೆ.

'ಕೆಟ್ಟು ಬಾಳುವವರಿಲ್ಲ ಎಮ್ಮವರ ಕುಲದಲ್ಲಿ'

ಇದು 'ಒಲವಿ'ನ ಆಸರೆಯಿಲ್ಲದೆ 'ಲಲನೆ'ಯ ಹಾಗೂ 'ಭಕ್ತ'ನ 'ಬಾಳು'ಗಳು ಹೇಗೆ 'ಕೆಟ್ಟಿ'ವೆ-ಎಂಬುದರತ್ತ ಮತ್ತೊಮ್ಮೆ ಬೆಳಕು ಚೆಲ್ಲಿ ದೃಢಪಡಿಸುತ್ತದೆ. ಹಾಗೆಯೇ, 'ಎಮ್ಮವರ' ಪದ ಸೂಚಿಸುವ ನಿಕಟತೆ, ಆತ್ಮೀಯತೆಗಳು, 'ಕುಲ' ಸಂಕೇತಿಸುವ ಸಂಬಂಧ ಸೂಚಕ ಭಾವನೆಗಳು ಈ ಹಿಂದೆ ಬಂದ ಒಲವಿನ ಬೇಡಿಕೆಗಳಿಗೆ ತಳುಕು ಹಾಕುತ್ತವೆ. ಒಟ್ಟಿನಲ್ಲಿ ಈ ಇಬ್ಬರ ಸದ್ಯದ ವಸ್ತು

ಸ್ಥಿತಿಗಳನ್ನು ಸಾಕಷ್ಟು ನಿರ್ಣಾಯಕ ಧ್ವನಿಯಲ್ಲಿ ಹೇಳುವ ಈ ಹೇಳಿಕೆ, ವಾಸ್ತವವಾಗಿ ಅವರು ಇರಬೇಕಾದ ಸ್ಥಿತಿಯನ್ನು ಸೂಚಿಸುತ್ತಲೇ ಒಲವಿಲ್ಲದೆ ಕೆಟ್ಟಿರುವ ಅವರುಗಳ ದೀನ ಸ್ಥಿತಿಗಳತ್ತ 'ಅವನ' ಗಮನವನ್ನು ಹರಿಸುವಲ್ಲಿ, ತನ್ಮೂಲಕ ಅವನ ಅನುಕಂಪಿತ ಮುಖವನ್ನು ತಮ್ಮತ್ತ ತಿರುಗಿಸಿಕೊಳ್ಳುವಲ್ಲಿ ಶಕ್ತವಾಗುತ್ತದೆ. ಬಹಳ ಸ್ಪಷ್ಟವಾಗಿ ತೋರುವ ಈ ಉದ್ದೇಶವನ್ನಲ್ಲದೆ ಮತ್ತೆರಡು ಅರ್ಥದ ಮಗ್ಗುಲುಗಳನ್ನೂ ಈ ಹೇಳಿಕೆ ಹೊಂದಿರುವಂತೆ ಕಾಣುತ್ತದೆ.

ಭಕ್ತನೇ ಹೇಳುವಂತೆ ಅವನ ಕುಲದಲ್ಲಿ ಯಾರೂ 'ಕೆಟ್ಟು' (ಶಿವನ ಒಲವುಗಳಿಸದೆ) ಬಾಳುವುದಿಲ್ಲ. ಆದರೆ ಈತ ಇನ್ನೂ ಬದುಕಿದ್ದಾನೇಕೆಂದರೆ 'ಒಲವು' ಬಂದೀತೆಂಬ ನಿರೀಕ್ಷೆಯಿಂದ ಮಾತ್ರ. 'ನೀನು ಅದನ್ನು ಬೇಗ ನೀಡದೆ ಹೋದರೆ ನಾನು ಉಳಿಯುವುದಿಲ್ಲ. ಮುಂದಿನ ಪರಿಣಾಮಗಳಿಗೆ ನೀನೇ ಹೊಣೆಗಾರನಾಗಬೇಕಾಗುತ್ತದೆ' ಎಂಬ ಸಣ್ಣಗೆ ಬೆದರಿಸುವ ಧ್ವನಿಯೂ ಇಲ್ಲಿದೆ. ಏಕೆಂದರೆ ಒಬ್ಬ 'ಪುರುಷ'ನಿಗೆ ಮನಸ್ಸುಕೊಟ್ಟು commit ಆಗಿರುವ ಒಬ್ಬ ಹೆಣ್ಣು, ಅವನು ಕೈಬಿಟ್ಟನೆಂದರೆ ತನ್ನ ಬದುಕಿನ ಬಗ್ಗೆ ಅವಳು ತಳೆಯುವ ನಿಷ್ಠುರ ತೀರ್ಮಾನವೇ' ನಂಬಿದ ದೈವ ಒಲವನ್ನು ನೀಡದಿದ್ದಾಗ ಭಕ್ತ ತಾಳುವ ತೀರ್ಮಾನವೂ ಆಗುತ್ತದೆ. (ಭಕ್ತ-ಲಲನೆಯರ ಮಾನವೀಯ ಸಂಬಂಧಗಳು ಒಂದರ ಮೇಲೊಂದು ಅವಲಂಬಿಸುತ್ತ, ಪರಸ್ಪರ ಬೆಳಕು ಹಾಯಿಸುತ್ತಾ ಕವನದ ಅರ್ಥ ಸೀಮೆಯನ್ನು ವಿಸ್ತರಿಸುವುದು ಗಮನಾರ್ಹ).

ಮತ್ತೊಂದೆಂದರೆ ಈ ಹೇಳಿಕೆ ಭಕ್ತ ಕುಲದವರು, ಶಿವನಲ್ಲದೆ ಅನ್ಯದೈವಕ್ಕೆಳಸದ ವೀರ ನಿಷ್ಠೆಯನ್ನು ಸಾಕಷ್ಟು ಗಟ್ಟಿಯಾಗಿ ಹೇಳುತ್ತದೆ.

ಬರಿಯ ಅಂಕಿತವಾಗಬಹುದಾದ 'ಕೂಡಲ' – 'ಸಂಗಮ' ಪದ(ಗಳು) 'ಪುರುಷ'ನನ್ನು ಕೂಡಲು (ಕೂಡಿ ಸಂಗಮಿಸಲು) ಒಲವಿಗಾಗಿ ಕಾತರತೆಯಿಂದ ಕಾಯುತ್ತಿರುವ 'ಲಲನೆ'ಯ ಭಾವನೆಗಳಿಗೆ ; ಅಂತೆಯೇ ಲಿಂಗಪತಿಯ 'ಒಲವಿ'ಗಾಗಿ ಬೇಡುತ್ತಿರುವ, 'ಒಲಿದು' 'ಸಲಹು' ಎಂದು ಕೇಳುತ್ತಿರುವ ಸತಿಭಕ್ತನ ಶರಣ್ಯಭಾವಗಳಿಗೆ ಒತ್ತುಕೊಡುವ ಮೂಲಕ ಅರ್ಥಪೂರ್ಣವಾಗುತ್ತದೆ.

ಜೇಡರ ದಾಸಿಮಯ್ಯನ ಕೆಲವು ಅಪ್ರಕಟಿತ ವಚನಗಳು

೧) ಅಣು ರೇಣು ಮಧ್ಯದ ಪ್ರಣವದಾಧಾರ
ಭುವನಾಧೀಶನೊಬ್ಬನೆಯಯ್ಯ
ಇದೆ-ಪರಿಪೂರ್ಣವೆಂದೆನ್ನದನ್ಯದೈವವ ಸ್ಮರಿಸುವ
ಭವಿಯನೆಂತು ಭಕ್ತನೆಂಬೆನೈ ರಾಮನಾಥ ॥ ೧೧ ॥

೨) ಅಂಗ ಲಿಂಗದ ಒಳಗೆ ಲಿಂಗ ಕಂಗಳು ಬೆಳಗು
ಹಿಂಗಲಾಪುದೆ ಹೇಳು ಅಜ್ಞಾನದ
ಸಂಗಸುಖಮಥನದ ಅಸಂಗದಿಂದದನರಿದು
ಹಿಂಗಲಿಕೆ ಹೆಸರೇನು ಹೇಳ ರಾಮನಾಥ ॥ ೩೯ ॥

೩) ಎಂಜಲ ತಿಂಬರೆ ಅಂಜದೆ ಅಳುಕದೆ ತಿನಬೇಕು
ಅಂಜುತ ಅಳುಕುತ ತಿಂದರೆ ಅದು
ನಂಜಿನಂತಕ್ಕು ಕಾಣ ರಾಮನಾಥ ॥ ೩೭ ॥

೪) ಕಷ್ಟಜಾತಿಗಳು ಲಿಂಗವ ಮುಟ್ಟಿ ಪೂಜಿಸಲಾಗದು
ಮುಟ್ಟಿದರೆ ಮುಟ್ಟದಂತಿರಬೇಕು.
ನಿಮ್ಮ ಮುಟ್ಟಿಯೂ
ಹಿಂದಣ ಕುಲವ ಕೂಡಿದರಾದಡೆ
ಮುಂದೆ ಹೊಲೆಯರ ಮನೆಯ
ಹುಳಿತನಾಯು ಬಸುರಲಿ ಬಪ್ಪುದು
ತಪ್ಪದು ಕಾಣಾ ರಾಮನಾಥ ॥ ೧೨ ॥

೫) ಗಿರಿಗಳೆಲ್ಲ ಕೂಡಿ ಮೇರುಗಿರಿಗೆ ಸರಿಯಾಗಬಲ್ಲವೆ ?
ತರುಗಳೆಲ್ಲವು ಕೂಡಿ ಕಲ್ಪತರುವಿಗೆ ಸರಿಯಾಗಬಲ್ಲವೆ ?
ಸರಿಯಿಲ್ಲ ನೋಡು
ಎಮ್ಮ ಭಕ್ತರಿಗೆ ನರರು ಸುರರು ಸರಿಯಿಲ್ಲ ನೋಡ
ಪರುಷಕ್ಕೆ ಪಾಷಾಣ ಸರಿಯೆ ?
ಮರುಜವಣಿಗೆ ಅವುಷದ ಸರಿಯೆ ?

ಇದು ಕಾರಣ
ಶಿವ ಭಕ್ತಗೆ ಲೋಕದವರು ಸರಿಯೆಂದರೆ
ನರಕ ತಪ್ಪದಯ್ಯ ರಾಮನಾಥ ॥ ೩೫ ॥

೬) ತಲೆಯಿಲ್ಲದ ಗುರು
ಕಾಲಿಲ್ಲದೆ ನಿಂದ ನೋಡ
ಒಡಲಿಲ್ಲದ ಶಿಷ್ಯನಾ
ಗುರುವಿನ ಒಡಲ ಬಗಿದುರುಹುತ್ತ
ಒಡನೆ ಗುರುಸಹಿತ ನಿಂದ ಸಿಲವ-ನೇನೆಂಬೆನಯ್ಯ
ರಾಮನಾಥ ॥ ೩೦ ॥

೭) ಬಂಜಿಸಿಹೆನೆಂದೆಂಬೆ
ಹಲಬರ ಬಂಜನೆಗೆ ಸಿಲುಕುವವು ಪ್ರಾಣಿಗಳಲ್ಲದೆ
ಲಿಂಗವು ಬಂಜನೆಗೆ ಸಿಲುಕುವನೆ ?
ತಾತ್ಪರ್ಯಕ್ಕಲ್ಲದೆ
ಆ ಲಿಂಗದೆಂಜಲ ತಿಂದು
ವೈಸಿಕವ ಮಾಡಿದಡೆ
ಅದು ನಂಜಾಗಿ ಕಾಡುವದು ಕಾಣ ರಾಮನಾಥ ॥ ೩೬ ॥

೮) ಹರಿ ಮಾಡಿದ ಭಕ್ತಿಗೆ ಕಡೆ ನಡು ಮೊದಲಿಲ್ಲ
ಜಗದ ಕಂಟಕ ಬಂದಲ್ಲಿ
ದಶಾವತಾರನಾಗಿ ಪಶುಪತಿಯು ಸೇವೆಯಂ ಮಾಡಿದ
ಶಶಿಶೇಖರನ ಆಲಯದಲ್ಲಿ ಪತಿಭಕ್ತಿಯಾಗಿಪ್ಪ
ನಾರಾಯಣನ ಜಗವೇಷವಂ ತಾಳಿ
ಇಂತಿವರೆಲ್ಲರು-ಎನ್ನ ರಾಮನಾಥ
ಗೋವಿಂದ ಗೋವಿಂದ ಎನುತಿರ್ದರು ॥ ೧೦೩ ॥

ಆಕರಗಳು

೧) ಕ. 227 (ಗರಿ 14 ಮುಂ)
೨) ಅದೇ (ಗರಿ 16 ಹಿಂ)
೩) ಅದೇ (ಗರಿ 16 ಹಿಂ)
೪) ಅದೇ (ಗರಿ 14 ಮುಂ+ಹಿಂ)
೫) ಅದೇ (ಗರಿ 16 ಮುಂ+ಹಿಂ)

೬) ಅದೇ (ಗರಿ 16 ಮುಂ)
೭) ಅದೇ (ಗರಿ 16 ಹಿಂ)

[ಕೆ. 227, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ]
೮) ವೀರಸಂಗಯ್ಯ (1675) ಸಂಕಲಿಸಿದ ಶಿವಮುಖಿವಾಸ್ತೋತ್ರ. ಕ್ರಮಾಂಕ-103 [ವಚನವಾಙ್ಮಯ ಭಾಂಡಾರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಸಂಖ್ಯೆ 115 (ಗರಿ-11)]

ಸಕಳೇಶ ಮಾದರಸರ ಅಪ್ರಕಟಿತ ವಚನಗಳು

೧) ಗತಿ ಮತಿ ಚೈತನ್ಯ ಉಳ್ಳನ್ನಕ್ಕ
ಕ್ರೀಯು ಎಂತಕ್ಕೆ ನಡೆವುದು
ಉರವಣಿಸದಿರು ಕಂಡ ಮನವೆ
ಕ್ರಿಯಂತಂತೆ ನಡೆವುದು
ಹೂಮಿಡಿಯು ಹಜಿದಡೆ ಹಣ್ಣಪ್ಪುದೆ ಮುಂದೆ ?
ಲಿಂಗದಲ್ಲಿ ಮನ ಲೀಯ್ಯವಾಗದನ್ನಕ್ಕರ
ದೇವ ಸಕಳೇಶ್ವರನನೊಲಿಸಿರಬೇಕು ॥ ೨೦ ॥

೨) ಮಂಚದ ಎಡೆಯಲ್ಲಿ ಒತ್ತೆಯ ಬೇಡುವ
ಸಜ್ಜನ ಸತಿಯು ಘೋರವ ನೋಡಿರೆ
ಬೇಡುವನೆ ಸಾತ್ವಿಕ ಶರಣ ?
ಭಕ್ತಿ ಮುಕ್ತಿ ಫಲಪ್ರದಾಯಕ
ಸಕಳೇಶ್ವರ ದೇವರಲ್ಲಿ
ಸಜ್ಜನ ಶುದ್ಧ ಶಿವಾಚಾರವ ಮಾಡುವ ॥ ೧೯ ॥

೩) ಮೂಗಿಲ್ಲ [ದ]ವರಿಗೆ ಕನ್ನಡಿ ಸೊಗಸೂವೆ ? ಸೊಗಸದು
ಮೂಗುಳ್ಳಡೇನು ಕಣ್ಣಿಲ್ಲದಿರ್ದಡೆ ಕನ್ನಡಿ ಪ್ರಯೋಜನವಿಲ್ಲ
ಮೂಗು ಕಣ್ಣು ಇರ್ದೊಡೇನಯ್ಯ ?
ಕನ್ನಡಿಯಿಲ್ಲದಿರ್ದಡೆ ?
ಸರ್ವಲಕ್ಷಣ ಸಂಪೂರ್ಣವಾದಂತೆ ದಾಸೋಹ
ಈ ಪರಿಯೊಪ್ಪಂಬಡೆದು ಬದುಕೋದಯ್ಯ
ಸಕಳೇಶ್ವರದೇವ ಮೆಚ್ಚುವ ॥ ೨೧ ॥

ಆಕರ

ಕೆ. 227 (ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ.)

೧) (ಗರಿ 22 ಮುಂ)

೨) (ಗರಿ 22 ಮುಂ)

೩) (ಗರಿ 22 ಮುಂ+ಹಿಂ)

(ಸಂ) ಎಸ್. ಶಿವಣ್ಣ

ಪಂಪಭಾರತದ ಒಂದು ಪಾಠ : ಅನಗತ್ಯ ತಿದ್ದುಪಡಿ

ಪಂಪಭಾರತದ (10 : 35. ವಚನ) ಕನ್ನಡ ಸಾಹಿತ್ಯ ಪರಿಷತ್ತಿನ ಆವೃತ್ತಿಯ ಒಂದು ಭಾಗ ಹೀಗಿದೆ.

"ಆಗಳುಭಯಬಲಂಗಳೊಳಂ ಚಾತುರ್ಯಾಮಾವಸಾನಘಟಿತ ಘ [ಂ] ಟಿಕಾಧ್ವನಿಗಳುಂ ಸಂಧ್ಯಾಸಮಯಸಮುದಿತ ಶಂಖಧ್ವನಿಗಳುಂ...... ...".

ಇಲ್ಲಿ ಚೌಕಕಂಸದಲ್ಲಿ ತೋರಿಸಿರುವ [ಂ] ಈ ಭಾಗವು ಊಹೆಯಿಂದ ಸೇರಿಸಿದ್ದು ಎಂಬಲ್ಲಿ ಅನುಮಾನವಿಲ್ಲ. ನಾಲ್ಕು ಯಾಮಗಳಲ್ಲಿ[1] ಒಂದೊಂದರ ಕೊನೆಯನ್ನು ಸೂಚಿಸಲು ಗಂಟೆಯ ಧ್ವನಿಗಳನ್ನು ಮಾಡುತ್ತಿದ್ದರು ಎಂಬುದು ಮೇಲಿನಾರ್ಥ. ಆದರೆ, ಅನುಸ್ವಾರವನ್ನು ಸೇರಿಸದೆ ಹಸ್ತಪ್ರತಿಗಳಲ್ಲಿರುವಂತೆ "ಘಟಿಕಾಧ್ವನಿಗಳುಂ" ಎಂಬ ಪಾಠವನ್ನೇ ಇಟ್ಟುಕೊಂಡರೂ ಅರ್ಥ ಹೊಂದುತ್ತದೆ. "ಘಟಿಕಾ ಎಂಬ ಪದಕ್ಕೆ ಮಣ್ಣಿನ ಪಾತ್ರೆ, ಕಾಲವನ್ನು ಅಳೆಯಲು ಉಪಯೋಗಿಸುತ್ತಿದ್ದ ಮಣ್ಣಿನಪಾತ್ರೆ ಎಂಬ ಅರ್ಥಗಳಲ್ಲದೆ ಇನ್ನಾವ ಅರ್ಥವೂ ಸಂಸ್ಕೃತದಲ್ಲಿಲ್ಲ. (ಇಪ್ಪತ್ತನಾಲ್ಕು ನಿಮಿಷಗಳ ಕಾಲದ ಅವಧಿಗೂ ಘಟಿಕಾ ಎಂದೇ ಹೆಸರು) ಹಿಂದಿನ ಕಾಲದಲ್ಲಿ ಕಾಲವನ್ನು ನಿರ್ಧರಿಸಲು ರಂಧ್ರವಿರುವ ಮಣ್ಣಿನ ಪಾತ್ರೆಯಲ್ಲಿ ನೀರನ್ನೋ ಮರಳನ್ನೋ ತುಂಬಿಸುತ್ತಿದ್ದರು ಎಂಬುದು ಪ್ರಸಿದ್ಧ ವಿಷಯವಾಗಿದೆ. ಇಂತಹ ಕಾಲಮಾಪನ ಯಂತ್ರಗಳು ಪ್ರಾಚೀನ ಕರ್ನಾಟಕದ ದೇವಸ್ಥಾನಗಳಲ್ಲಿ ಮಠಗಳಲ್ಲಿ ಇದ್ದುವೆಂಬುದಕ್ಕೆ ಶಾಸನಾಧಾರಗಳಿವೆ..."[2] ಪ್ರತಿಯೊಂದು ಯಾಮ ಅಥವಾ ಜಾವದ ಅಂತ್ಯವನ್ನು ಸೂಚಿಸುವ ಘಟಿಕೆಯ ಧ್ವನಿಯೇ ಘಟಿಕಾಧ್ವನಿ. ಆ ಕಾಲವನ್ನು ಸೂಚಿಸಲು ಯಾವುದೇ ಸದ್ದನ್ನು ಮಾಡುತ್ತಿದ್ದರು. ಅದು ಗಂಟೆಯನ್ನು ಬಾರಿಸುವ ಧ್ವನಿ ಆಗಿರಬಹುದು. ಅಥವಾ ಯಾವುದಾದರೂ ಲೋಹದ

---

1. ಯಾಮ – ಜಾವ. ದಿನಕ್ಕೆ ಒಟ್ಟು ಎಂಟು ಜಾವ : ಹಗಲು ನಾಲ್ಕು ಜಾವ, ರಾತ್ರಿ ನಾಲ್ಕು ಜಾವ. ಜಾವಕ್ಕೆ ಮೂರು ಗಂಟೆಗಳಷ್ಟು ಕಾಲಪ್ರಮಾಣ.
2. ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, 1979. ಪು. 226.

ತುಂಡಿಗೆ ಬಡಿದು ಮಾಡಿದ ಸದ್ದು ಆಗಿರಬಹುದು. ಗಂಟೆಯನ್ನು ಬಾರಿಸುತ್ತಿದ್ದರಿಂದ ಈಗ 'ಗಂಟೆ' ಮಾತಿಗೆ hour ಎಂಬರ್ಥ ಕನ್ನಡದಲ್ಲಿ ಬಂದಿದೆ; ತಮಿಳಿನಲ್ಲಿ 'ಮಣಿ' (hour) ಮಾತಿಗೆ ಮೂಲಾರ್ಥ bell ಎಂಬುದೇ ಆಗಿದೆ. ಉತ್ತರ ಕರ್ನಾಟಕದ 'ತಾಸು' (hour) ಮರಾಠಿಯಿಂದ ಬಂದುದಾಗಿದೆ. ಮಹಾರಾಷ್ಟ್ರದಲ್ಲಿ ಹಿಂದೆ ಕಾಲವನ್ನು ಸೂಚಿಸಲು "ತಾಸ್" ಎಂಬ ಹೆಸರಿನ ಚರ್ಮವಾದ್ಯವನ್ನು ನುಡಿಸುತ್ತಿದ್ದುದರಿಂದ ಒಂದು ಗಂಟೆ (hour) ಎಂಬರ್ಥ ಆ ಶಬ್ದಕ್ಕೆ ಬಂದಿತು.

ಈಗಿನ 'ಗಡಿಯಾರ' ಎಂಬುದೂ 'ಘಟೀ' ('ಘಟಿಕಾ' – ಗಡಿಗೆ) ಮೂಲದಿಂದ ಬಂದುದೇ ಆಗಿದೆ.

ಎಂ. ಚಿದಾನಂದಮೂರ್ತಿ

ಈ ಸಂಚಿಕೆಯ ಲೇಖಕರು

ಡಾ॥ ಜಿ. ಎಸ್. ಶಿವರುದ್ರಪ್ಪ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560 056

ಡಾ॥ ಕೆ. ವಿ. ನಾರಾಯಣ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು–560 056

ಡಾ॥ ಪ್ರ. ವಿ. ಕುಲಕರ್ಣಿ
ಕನ್ನಡ ಅಧ್ಯಾಪಕರು
ಮಧುರೈ ವಿಶ್ವವಿದ್ಯಾಲಯ
ಮಧುರೈ–625021

ಡಾ॥ ಎಂ. ಬಿ. ನೇಗಿನಹಾಳ
ಸ್ನಾತಕೋತ್ತರ ಕೇಂದ್ರ,
ಲಿಂಗರಾಜ ಕಾಲೇಜು ಆವರಣ, ಬೆಳಗಾವಿ–590 001

ಡಾ॥ ಸುಮತೀಂದ್ರನಾಡಿಗ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ, ಬೆಂಗಳೂರು–560 056

ಡಾ॥ ವೀರಣ್ಣ ದಂಡೆ
ಚೌಡೇಶ್ವರ ಕಾಲನಿ, ಬ್ರಹ್ಮಪುರ
ಕಲಬುರ್ಗಿ–585103

ಡಾ॥ ಚೆನ್ನಕ್ಕ ಎಲಿಗಾರ
ಕನ್ನಡ ಅಧ್ಯಾಪಕಿ
ಶ್ರೀ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ
ಧಾರವಾಡ–580002

ಎಚ್. ಎಚ್. ಗಂಗಾಧರಾಚಾರ್
ಇಂಟರ್ನಲ್ ಟ್ರಾಫಿಕ್ ಇಲಾಖೆ
ವಿ. ಐ. ಎಸ್. ಎಲ್., ಭದ್ರಾವತಿ–577 301

ರಾ. ಲಕ್ಷ್ಮೀನಾರಾಯಣ
ಕನ್ನಡ ಅಧ್ಯಾಪಕ
ಸರ್ಕಾರಿ ವಿಜ್ಞಾನ ಕಾಲೇಜು, ತುಮಕೂರು–572 101

ಬಿ. ಜಿ. ಶ್ರೀಲಕ್ಷ್ಮಿ
ಸಂಸ್ಕೃತ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560 056

ಡಾ॥ ರಘುಪತಿ ಕೆಮ್ತೂರು
ಲೀವಿಸ್ ಕಾಂಪೌಂಡು, ಉಡುಪಿ–670 102

ಪಿ. ರಾಮಭಟ್
ಕನ್ನಡ ವಿಭಾಗ, ಎಂ.ಜಿ.ಎಂ. ಕಾಲೇಜ್, ಉಡುಪಿ–670102

ಬಸವರಾಜ ಸಬರದ
ಕನ್ನಡ ವಿಭಾಗ, ಕರ್ನಾಟಕ ಕಾಲೇಜ್, ಬೀದರ–585401

ಸಗರ ಕೃಷ್ಣಾಚಾರ್ಯ
ಮೋಹನ ಮಂದಿರ, ಹಳೆಯಪೇಟೆ, ಶಹಪುರ–585223

ಯನ್. ಬಿ. ಪಾಂಗಣ್ಣಾಯ
ಗ್ರಂಥ ವಿಜ್ಞಾನ ಅಧ್ಯಾಪಕರು, ಗ್ರಂಥ ವಿಜ್ಞಾನ ವಿಭಾಗ
ಮಾನಸಗಂಗೋತ್ರಿ–570006

ರಹಮತ್ ತರೀಕೆರೆ
ಕನ್ನಡ ಉಪನ್ಯಾಸಕ, ಸಹ್ಯಾದ್ರಿ ಕಾಲೇಜು, ಶಿವಮೊಗ್ಗ–577 201

ಎಸ್. ಶಿವಣ್ಣ
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ
ಬೆಂಗಳೂರು–560 056

ಡಾ॥ ಎಂ. ಚಿದಾನಂದಮೂರ್ತಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056

ರಾಮಗಿರಿ ರವೀಂದ್ರ
C/o ಹೆಚ್. ಎಸ್. ವೆಂಕಟೇಶಮೂರ್ತಿ
ಕನ್ನಡ ಅಧ್ಯಾಪಕರು, ಸೇಂಟ್ ಜೋಸೆಫ್ಸ್ ಕಾಮರ್ಸ್ ಕಾಲೇಜ್,
ಬ್ರಿಗೇಡ್ ರಸ್ತೆ, ಬೆಂಗಳೂರು–560 025